ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 28 ಜುಲೈ 11, 2004 ಬೆಲೆ ರೂ. 3.00

ನಿರೀಕ್ಷೆಗೆ ನಿಲುಕದ ಬಜೆಟ್





ಸ್ಟಾಂಪ್ ಹಗರಣ : ಸಮಗ್ರ ತನಿಖೆಗೆ ಸರ್ಕಾರ ಮುಂದಾಗಲಿ





ದೃಷ್ಟಿಹೀನ ಧರಂ ಸರ್ಕಾರ

ಅನುಕಂಪದ ಅನ್ವೇಷಣೆಯಲ್ಲಿ ನಕ್ಸಲೀಯರು

- ಇಸ್ರೇಲ್ ವಿರುದ್ಧ ವಿಶ್ವ ನ್ಯಾಯಾಲಯ !
- ಬುದ್ಧದೇವ್ ಭಟ್ಟಾಚಾರ್ಯರ ನೇರ ನುಡಿ

ಬಿಜೆಪಿ-ಕರ್ನಾಟಕದಲ್ಲಿ ನೆಲೆಯೂರುತ್ತಿದೆಯೇ ?


ದೇಶದಲ್ಲೆಲ್ಲಾ ಬಿಜೆಪಿ ನೆಲಕಚ್ಚಿದಾಗ ಕರ್ನಾಟಕದಲ್ಲಿ ಗಣನೀಯ ಬೆಂಬಲ ಗಿಟ್ಟಿಸಿಕೊಂಡಿದೆ. ಇದಕ್ಕೆ ಕಾರಣಗಳೇನು? ಕರ್ನಾಟಕದ ಜನತೆ ಕರ್ನಾಟಕವನ್ನು ಇನ್ನೊಂದು ಗುಜರಾತ್ತು ಮಾಡಲು ಬಯಸುವುದು ಸಾಧ್ಯವೇ ?

1999 ರ ವಿಧಾನಸಭಾ ಚುನಾವಣೆಯಲ್ಲಿ 44 ಶಾಸಕರನ್ನು ಹೊಂದಿದ್ದ ಬಿಜೆಪಿ ಪಕ್ಷ ಈ ಅವಧಿಯಲ್ಲಿ ಕೆಲವು ಶಾಸಕರು ಪಕ್ಷವನ್ನು ತೊರೆದು ಹೋದ ಬಳಿಕವೂ 79 ಶಾಸಕರನ್ನು ಹೇಗೆ ಗಳಿಸಿತು? ದೇಶದ ಅನೇಕ ಕಡೆ ಸೋತು ಹೋದ ಬಿಜೆಪಿ ರಾಜ್ಯದಲ್ಲಿ 7 ಸಂಸತ್ ಸದಸ್ಯರ ಸ್ಥಾನದಿಂದ 18 ಕ್ಕೆ ಹೇಗೆ ನೆಗೆಯಿತು? ಅದು ಹಂತಹಂತವಾಗಿ ನಿಧಾನಕ್ಕೆ ಕರ್ನಾಟಕದಲ್ಲಿ ಹೇಗೆ ನೆಲೆ ಪಡೆಯುತ್ತಿದೆ? ಮತ್ತು ತನ್ನ ನೆಲೆಯನ್ನು ದೃಢಗೊಳಿಸುತ್ತಾ, ವಿಸ್ತರಣೆಯಾಗುತ್ತಿದೆ? ಕೋಮುವಾದಿ ಶಕ್ತಿಗಳಿಗೆ ದಕ್ಷಿಣ ಭಾರತದಲ್ಲೇ ಅಧಿಕಾರ ಹಿಡಿಯಲು ಕರ್ನಾಟಕ ಬಾಗಿಲು ತೆರೆದೀತೆ?

ದೇಶದಲ್ಲಿ ಕೋಮುವಾದಿ ಫ್ಯಾಸಿಸ್ಟ್ ಮಾದರಿಯ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟಕ್ಕೆ ಜನತೆ ಅಘಾತಕಾರಿ ಸೋಲನ್ನು ನೀಡಿರುವಾಗಲೇ ಕರ್ನಾಟಕದಲ್ಲಿನ ಬೆಳವಣಿಗೆಗಳು ಕೊಂಚ ಆತಂಕಕಾರಿಯಾದದ್ದೇ. ಅಧಿಕಾರ ಹಿಡಿದೇ ಬಿಟ್ಟೇವೆಂದು ಬೀಗಿದ, ಅದಕ್ಕಾಗಿ ಕಾಂಗ್ರೆಸ್ ವಿರುದ್ಧ ಅತೃಪ್ತಿ, ಜನತಾದಳ(ಎಸ್) ನಂತಹ ಮೂರನೇ ಸೆಕ್ಯುಲರ್ ಪರ್ಯಾಯದತ್ತ ಹೋಗದಂತೆ ಜನತಾಪರಿವಾರ ಒಂದಾಗದಂತೆ ಒಡೆಯಲು ಎಸ್.ಎಂ.ಕೃಷ್ಣ, ಅನಂತಕುಮಾರ್, ಹೆಗಡೆ ಜೊತೆಗೂಡಿ ಷಡ್ಯಂತ್ರಗಳನ್ನು ರೂಪಿಸಿ ಜಾತಿ ಮುಂತಾದ ಹಲವಾರು ಅಂಶಗಳನ್ನು ಬಳಸಿ ಶತಾಯಗತಾಯ ಯತ್ನಿಸಿದರೂ ಕರ್ನಾಟಕದ ಮತದಾರರು ಅಧಿಕಾರ ಸೂತ್ರವನ್ನು ಬಿಜೆಪಿಗೆ ಒಪ್ಪಿಸಲು ಸ್ಪಷ್ಟವಾಗಿ ನಿರಾಕರಿಸಿದರು. ಕೋಮುವಾದಿ ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲು ಕಾಂಗ್ರೆಸ್-ಜನತಾದಳ(ಎಸ್) ಮೈತ್ರಿಕೂಟದ ಸರ್ಕಾರ ಅಸ್ತಿತ್ವದಲ್ಲಿದೆಯಾದರೂ, ಬಿಜೆಪಿಯು ಹೊಸ್ತಿಲಲ್ಲಿಯೇ ನಿಂತು ಅಪಾಯವೊಡ್ಡಿದೆ. ಅಧಿಕಾರ ಹಿಡಿಯಲು ಸತತವಾಗಿ ಧಾಳಿ ನಡೆಸಿದೆ. ತಾನೇ ನಿಜವಾದ ವಿರೋಧ ಪಕ್ಷವೆಂಬ ಪೋಜು ನೀಡಿದೆ.

ರಾಜ್ಯದ ರಾಜಕೀಯ ವಿದ್ಯಮಾನಗಳನ್ನು ಗಂಭೀರವಾಗಿ ಅವಲೋಕಿಸುವ, ಚಿಂತಿಸುವವರಿಗೆ ಸಹಜವಾಗಿಯೇ ಮೇಲಿನಂತೆ ಪ್ರಶ್ನೆಗಳು ಎದುರಾಗಿವೆ. ಅದು ಸಹಜವೂ ಕೂಡ.

ಕರ್ನಾಟಕದಲ್ಲಿ 1994 ರಿಂದಲೂ ಬಿಜೆಪಿಯ



ಮತಗಳ ಪ್ರಮಾಣ ಹೆಚ್ಚುತ್ತಲೇ ನಡೆದಿದೆ. 1989 ರಲ್ಲಿ ಶೇ 3.1 ರಷ್ಟಿದ್ದ ಪ್ರಮಾಣ 1994 ರ ವಿಧಾನಸಭಾ ಚುನಾವಣೆಯಲ್ಲಿ 16.7 ಕ್ಕೇರಿತು. 1996 ರ ಲೋಕಸಭಾ ಚುನಾವಣೆಯಲ್ಲಿ ಅದು ಆರು ಸ್ಥಾನ ಗಳಿಸಿ 24.75 ಶೇ. ಮತ ಪಡೆಯಿತು. 1999 ರ ವಿಧಾನಸಭಾ ಚುನಾವಣೆಯಲ್ಲಿ ಶೇ 20.69, ಲೋಕಸಭೆ ಶೇ. 27.1 ಪಡೆಯಿತು. 2004 ರಲ್ಲಿ 18 ಎಂ.ಪಿ.ಗಳನ್ನು ಹೊಂದಿ ಶೇ 34.77, ವಿಧಾನಸಭೆಯಲ್ಲಿ ಶೇ. 28.33 ಪಡೆದಿದೆ. ಮಂಡಲ್ ಮೀಸಲಾತಿ ವಿರೋಧಿ ಚಳುವಳಿ, ಅಯೋಧ್ಯಾ ಕಾಂಡ, ರಥಯಾತ್ರೆ ಅದನ್ನು ಅನುಸರಿಸಿದ ಕೋಮುಗಲಭೆಗಳು ಮತ್ತು ನಂತರದಲ್ಲಿ ಕರಾವಳಿ ಘಟ್ಟ, ಉ.ಕರ್ನಾಟಕ, ಹೈ.ಕ-ಪ್ರದೇಶಗಳಲ್ಲಿ ಹುಟ್ಟುಹಾಕಲಾದ ಬಸವ ವಿಶ್ವವಿದ್ಯಾಲಯ, ಹೈ.ಕ. ವಿಮೋಚನಾ ದಿನ, ಈದ್ಗಾ ಮೈದಾನ ವಿವಾದ ಇತ್ಯಾದಿ ವಿವಾದಗಳು, ಹಬ್ಬಿಸಲಾದ ಕೋಮು ಘರ್ಷಣೆ ಮತ್ತು ಪ್ರತಿಯೊಂದು ವಿದ್ಯಮಾನಗಳಲ್ಲಿ ಮಧ್ಯಪ್ರವೇಶ-ಕೋಮುವಾದಿ ತಿರುಚುವಿಕೆ, ವಿಹೆಚ್‌ಪಿ-ಭಜರಂಗದಳಗಳ ಬಳಕೆ ಪ್ರಮುಖ ಕಾರಣ. ಇದರಲ್ಲಿ ವಿವಿಧ ಜಾತಿಗಳನ್ನು ಸೆಳೆಯಲು ರೂಪಿಸಲಾದ ಒಲೈಕೆ ತಂತ್ರಗಳು ಹಾಗೂ ಮಠಾಧೀಶರು, ಪಾಳೇಗಾರಿ ಭೂಮಾಲೀಕರು, ವಾಣಿಜ್ಯೋದ್ಯಮಿಗಳ ಸಹಕಾರ. ರಾಜಕೀಯವಾಗಿ ಕಾಂಗ್ರೆಸ್-ವಿರೋಧಿ ಮನೋಭಾವದ - ಜನರ ನಡುವೆ ತಾನೇ ನಿಜವಾದ ಪರ್ಯಾಯವೆಂಬ ಭ್ರಮೆ ಹುಟ್ಟಿಸುವ ಯತ್ನ ಅದಕ್ಕಾಗಿ ಕಾಂಗ್ರೆಸ್‌ಗೆ ಪ್ರಬಲ ವಿರೋಧಿ ಶಕ್ತಿಯಾಗಿದ್ದ ಜನತಾದಳದ ವಿಭಜನೆ ಹಾಗೂ ಒಂದು ವಿಭಾಗ(ಬಹುತೇಕ ಉತ್ತರ ಕರ್ನಾಟಕ, ಹೈದರಬಾದ್ ಕರ್ನಾಟಕ-ಲಿಂಗಾಯತ ಮೇಲ್ಜಾತಿ ಪಾಳೇಗಾರಿ ವಿಭಾಗ ಜನತಾದಳ(ಯು)ನೊಂದಿಗೆ ಮೈತ್ರಿ ಏರ್ಪಡಿಸಿ ಹಂತಹಂತವಾಗಿ ಅದರ ನೆಲೆಯನ್ನು ನುಂಗುತ್ತಾ ದೃಢಗೊಳ್ಳುತ್ತಿದೆ.(ಜೆಡಿಯು ಮತಗಳಿಕೆ ಶೇ 13.2 ರಿಂದ ಶೇ 2.06 ಕ್ಕೆ ಕುಸಿದಿದೆ). ತನ್ನ ಬೆಳವಣಿಗೆಗೆ ಕೇಂದ್ರದ ಅಧಿಕಾರ-ಪ್ರಭಾವ ಪೂರಕವಾಗಿ ಬಳಸಿದೆ, ಸತತವಾಗಿ ರಾಜಕೀಯ ಪ್ರಚಾರ-ರೈತರು, ಜನಸಾಮಾನ್ಯರ ಸಮಸ್ಯೆ-ಭ್ರಷ್ಟಾಚಾರದಂತಹ ಪ್ರಶ್ನೆ ಎತ್ತಿ ಮಧ್ಯಪ್ರವೇಶ-ಪ್ರಚಾರ ಮಾಡಿ ರಾಜಕೀಯವಾಗಿ ಗುರುತಿಸಿ ಕೊಂಡಿದೆ. ಜಾತ್ಯತೀತ ಶಕ್ತಿಗಳ ಸಹಯೋಗದಿಂದ ದೊರೆತ ಉದಾರತೆಯ ಮಾನ್ಯತೆಯೂ ಬಿಜೆಪಿ ಬೆಳವಣಿಗೆಯಲ್ಲಿ ಪರಿಗಣಿಸಬೇಕಾದ ಅಂಶಗಳು.

ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಎಸ್.ಎಂ. ಕೃಷ್ಣರವರ ಕಾಂಗ್ರೆಸ್ ಸರ್ಕಾರ ಅನುಸರಿಸಿದ ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ಆರ್ಥಿಕ ನೀತಿಗಳು, ವಿಶ್ವಬ್ಯಾಂಕ್-ಐಎಂಎಫ್ ಹಾಗೂ ಏಶಿಯನ್ ಅಭಿವೃದ್ಧಿ ಬ್ಯಾಂಕ್‌ನಂತಹ ಹಣಕಾಸು ಸಂಸ್ಥೆಗಳು ಸಾಲದ-ಶರತ್ತುಗಳ ನಿರ್ದೇಶನಗಳನ್ನು ಚಾಚೂತಪ್ಪದೇ ಜಾರಿಗೊಳಿಸಿತು. ಕೇಂದ್ರದ ಆರ್ಥಿಕ ನೀತಿಗಳನ್ನೇ ಅಂಗೀಕರಿಸಿತು (ಹಿಂದಿನ ಸಂಚಿಕೆಯಲ್ಲಿ ವಿವರಿಸಲಾಗಿದೆ). ಈ ನೀತಿಗಳಿಂದಾಗಿ ರೈತರ ಆತ್ಮಹತ್ಯೆ, ಹಸಿವಿನ ಸಾವು, ಕೃಷಿ ದಿವಾಳಿ, ಕೈಗಾರಿಕಾ ಬಿಕ್ಕಟ್ಟು, ಪಡಿತರ ವ್ಯವಸ್ಥೆ ನಾಶ ಮುಂತಾದ ವಿನಾಶಕಾರಿ ಪರಿಣಾಮಗಳಲ್ಲಿ ಜನತೆ ತತ್ತರಿಸುತ್ತಿರುವಾಗ ಕೇಂದ್ರದ ನೀತಿಗಳ ವಿರುದ್ಧ ಹೋರಾಡಲಿಲ್ಲ. ಜನತೆಯನ್ನು ರಕ್ಷಿಸುವ ಕ್ರಮಗಳನ್ನೂ ಕೈಗೊಳ್ಳಲಿಲ್ಲ. ಕೇಂದ್ರ-ರಾಜ್ಯ ಸರ್ಕಾರಗಳ ಜನದ್ರೋಹಿ ನೀತಿಗಳಿಂದ ಸಂಕಷ್ಟಗಳ ಹೊರೆ ಹೆಚ್ಚಿ ಜನತೆ ತತ್ತರಗೊಂಡು ತೀವ್ರ, ಅತೃಪ್ತಿ ಬೆಳೆಯಿತು. ಇಂತಹ ಅತೃಪ್ತಿಯನ್ನು ಬಿಜೆಪಿ ಬಳಸಿ, ಕಾಂಗ್ರೆಸ್‌ಗೆ ತಾನೇ ಪರ್ಯಾಯವೆಂದು ಸತತವಾಗಿ ಬಿಂಬಿಸಲು ಯತ್ನಿಸಿತು. ಅದಕ್ಕಾಗಿ ಜನತೆಯ ಪ್ರಶ್ನೆಗಳನ್ನೆತ್ತಿ ವಿವಾದಗಳನ್ನು ಕೆದಕಿ, 'ತ್ರಿಶೂಲ' ಕಾರ್ಯಕ್ರಮದ ಮೂಲಕ ಕೋಮುಗಲಭೆ-ಕೋಮುದ್ವೇಷದ ಕಿಚ್ಚನ್ನು ಹಚ್ಚಿತು. ಹೀಗೆ ಕಾಂಗ್ರೆಸ್ ವಿರುದ್ಧ ಸತತ ದಾಳಿಯನ್ನು ಬಿಜೆಪಿ - ಸಂಘ ಪರಿವಾರ ನಡೆಸಿದರೂ ಅದನ್ನು ರಾಜಕೀಯವಾಗಿ - ಆಡಳಿತಾತ್ಮಕವಾಗಿಯೂ ದೃಢವಾಗಿ ಎದುರಿಸಲಿಲ್ಲ. ಬದಲಾಗಿ ಕೋಮುವಾದದ ಪ್ರಶ್ನೆಗಳಲ್ಲಿ ಕಾಂಗ್ರೆಸ್ ರಾಜಿಮನೋಭಾವ ತೋರಿಸಿತು. ಜೆಡಿ(ಎಸ್) ಪಕ್ಷದಲ್ಲಿ ಸಹ ಬಿಜೆಪಿ ಹುನ್ನಾರಗಳನ್ನು ದೃಢವಾಗಿ ಎದುರಿಸದೇ ಉಳಿದದ್ದು ಅದನ್ನು ದುರ್ಬಲವಾಗುವಂತೆ ಮಾಡಿತಲ್ಲದೇ ಕಾಂಗ್ರೆಸ್‌ಗೆ ಪರ್ಯಾಯ ಬಿಜೆಪಿಯೇ ಎಂಬಂತಾಯಿತು. ಬಿಜೆಪಿಗೆ ಪ್ರಮುಖವಾದ ಗಟ್ಟಿ ನೆಲೆ ಕರಾವಳಿ ಮತ್ತು ಘಟ್ಟ ಹಾಗೂ ಉತ್ತರ ಕರ್ನಾಟಕವೇ ಆಗಿದೆ(ಶೇ 40. 73 ಮತ್ತು ಶೇ 36.04). ಇಡೀ ಪ್ರದೇಶದಲ್ಲಿ ಸತತವಾಗಿ ಕೋಮು

ಪುಟ 3ಕ್ಕೆ

	ಬಿಜೆಪಿ	ಬಿಎಸ್‌ಪಿ	ಕಾಂಗ್ರೆಸ್	ಜೆಡಿ(ಎಸ್)	ಜೆಡಿಯು	ಒಟ್ಟು
ಹೈದರಾಬಾದ್ ಕರ್ನಾಟಕ	10,25,781	87530	1362379	909,234	28695	4318,344
ಶೇ.	23.75	2.02	31.55	21.05	0.66	
ಸ್ಥಾನಗಳು	11	-	10	14	ಕನ್ನಡ ನಾ. 1	39
					ಪಕ್ಷೇತರ 3	
ದಕ್ಷಿಣ ಕರ್ನಾಟಕ	25,88,623	2,64,248	41,53,342	31,70,578	3,05,695	1,15,15,858
ಶೇ	22.48	2.29	36.07	27.53	2.65	
ಸ್ಥಾನಗಳು	16	-	34	37	3	
					ಸಿಪಿಐಎ(ಎಂ) 1	
					ವಾಟಾಳ್ 1	
					ಆರ್‌ಪಿಐ 1	
					ಪಕ್ಷೇತರರು 2	95
ಕರಾವಳಿ ಮತ್ತು ಘಟ್ಟ	16,75,219	25798	1523,363	4,45,1550	20,566	41,12,969
ಶೇ	40.73	0.63	37.04	10.82	0.50	
ಸ್ಥಾನಗಳು	27	-	8	3	ಪಕ್ಷೇತರ 3	41
ಉತ್ತರ ಕರ್ನಾಟಕ	18,26,277	58,859	17,82,681	52,22,216	1,34,808	50,66,665
ಶೇ	36.04	1.16	35.18	10.31	2.60	
ಸ್ಥಾನಗಳು	25	-	13	4	2	
					ಪಕ್ಷೇತರ 5	49
ಒಟ್ಟು ಸ್ಥಾನಗಳು	79	-	65	58	5	
					4+13	224

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಜುಲೈ 12 ರಿಂದ ಅಗಸ್ಟ್ 11, 2004**
  ಕಟ್ಟಡ ಕಾರ್ಮಿಕರ ಬೇಡಿಕೆಗಳ ಬಗ್ಗೆ ಪ್ರಚಾರಾಂದೋಲನ
- **ಜುಲೈ 13-14, 2004**
  ಅಖಿಲ ಭಾರತ ಶೈಕ್ಷಣಿಕ ಸಮಾವೇಶ ಸ್ಪೀಕರ್ ಸಭಾಂಗಣ, ಕಾನ್‌ಸ್ಟಿಟ್ಯೂಶನ್ ಕ್ಲಬ್, ನವದೆಹಲಿ.
- **ಜುಲೈ 24-25, 2004**
  ಜೆ.ಎಂ.ಎಸ್, ಬೆಂಗಳೂರು ಜಿಲ್ಲಾ ಸಮ್ಮೇಳನ, ಅತ್ತಿಬೆಲೆ, ಆನೇಕಲ್ ತಾಲ್ಲೂಕು, ಬೆಂಗಳೂರು
  25 ರಂದು ಬಹಿರಂಗ ಸಭೆ
- **ಜುಲೈ 29, 2004**
  ಉನ್ನತ ಶಿಕ್ಷಣಕ್ಕೆ ಶೇ.15 ಅನುದಾನ ಕಡಿತ ವಿರೋಧಿಸಿ ರಾಜ್ಯದಾದ್ಯಂತ ಕಾಲೇಜ್ ಬಂದ್ - ಎಸ್‌ಎಫ್‌ಐ ಕರೆ
- **ಜುಲೈ 31, 2004**
  ಜೆಎಂಎಸ್ ವತಿಯಿಂದ ವಿಚಾರ ಸಂಕಿರಣ, ಬೆಳಿಗ್ಗೆ 10 ಕ್ಕೆ, ಸೆನೆಟ್ ಹಾಲ್, ಬೆಂಗಳೂರು
  ಉದ್ಘಾಟನೆ : ದೇವಕಿ ಜೈನ್
  ಅಧ್ಯಕ್ಷತೆ : ಡಾ. ಎಂ.ಎಸ್.ತಿಮ್ಮಪ್ಪ
- **ಆಗಸ್ಟ್ 3,4 ಆಗಸ್ಟ್ 5,2004**
  ಅಖಿಲ ಭಾರತ ವಿದ್ಯಾರ್ಥಿನಿಯರ ಸಮಾವೇಶ
  ರಾಜಸ್ಥಾನ ರಾಜ್ಯದ ಗಂಗಾ ನಗರದಲ್ಲಿ
- **ಆಗಸ್ಟ್ 8, 2004**
  ಪ್ರಾದೇಶಿಕ ಅಸಮಾನತೆ ಕುರಿತು ಸಮಾವೇಶ ಸ್ಥಳ : ಗುಲ್ಬರ್ಗಾ
  ಸಿದ್ಧತಾ ಸಮಿತಿ ಅಧ್ಯಕ್ಷರು : ಶಾಂತರಸ, ಸಾಹಿತಿಗಳು
  ಕಾರ್ಯಾಧ್ಯಕ್ಷ : ಮಾರುತಿ ಮಾನ್ಪಡೆ
  ಪ್ರ ಕಾರ್ಯದರ್ಶಿ : ಆರ್.ಕೆ.ಹುಡಗಿ
- **ಆಗಸ್ಟ್ 9 ರಿಂದ 24,2004**
  ಅಂಧಶ್ರದ್ಧೆ, ಮೌಢ್ಯದ ವಿರುದ್ಧ ಜನಜಾಗೃತಿ, 24 ರಂದು ಸಮಾರೋಪ ದಾವಣಗೆರೆಯಲ್ಲಿ 4 ಜಾಥಾ

ಸ್ಟ್ಯಾಂಪ್ ಹಗರಣದ ಹಣ - ವೀರಪ್ಪನ್‌ಗೆ ಸಮರ್ಪಣ
ಆಳ ತನಿಖೆಗೆ ಧರಂಸಿಂಗ್ ಸರ್ಕಾರ ಮುಂದಾಗಲಿ

ನರಹಂತಕ ವೀರಪ್ಪನ್‌ನಿಂದ ಡಾ. ರಾಜ್‌ರವರ ಅಪಹರಣದ ಘಟನೆಗೂ, ಕುಖ್ಯಾತ ಸ್ಟ್ಯಾಂಪ್ ಹಗರಣದ ಪ್ರಮುಖ ಕೊಂಡಿ ತೆಲಗಿಗೂ ಇರುವ ನಂಟನ್ನು, ಅಂದಿನ ಮುಖ್ಯಮಂತ್ರಿ ಒಳಗೊಂಡು ಪ್ರಮುಖರ ಪಾತ್ರವನ್ನು ಬಂಧಿತ ನಿವೃತ್ತ ಪೊಲೀಸ್ ಅಧಿಕಾರಿ ಸಂಗ್ರಾಮ್ ಸಿಂಗ್ ಬಹಿರಂಗಪಡಿಸಿದ್ದಾರೆ. ಈ ಆಘಾತಕಾರಿ ಸಂಗತಿಯನ್ನು ಹಗುರವಾಗಿ ತಳ್ಳಿಹಾಕಲಾಗದು. ಇದರ ಆಳ ತನಿಖೆ ಸಿಬಿಐ ಯಿಂದ ಆಗಬೇಕು. ಮಾತ್ರವಲ್ಲ ಪ್ರಸ್ತಾಪಿತ ರಾಜಕಾರಣಿಗಳನ್ನು ಸಚಿವ ಸ್ಥಾನದಿಂದ ತೆಗೆಯಬೇಕು. ಮೈತ್ರಿಕೂಟದ ಸರ್ಕಾರ ಇದನ್ನು ಹಗುರವಾಗಿ ಪರಿಗಣಿಸಲಾಗದು.

ಸಾವಿರಾರು ಕೋಟಿ ರೂಪಾಯಿಗಳ ಭಾರೀ ಕೋಲಾಹಲಕಾರಿಯಾದ ಸ್ಟ್ಯಾಂಪ್ ಹಗರಣದ ತನಿಖೆ ನಡೆಯುತ್ತಿದೆ. ಈ ಹಗರಣದಲ್ಲಿ ಭಾಗಿಯಾಗಿರುವ, ತೆಲಗಿಗೆ ಎಲ್ಲಾ ಸಹಾಯ ಮಾಡಿದ್ದರೆಂದು ಆರೋಪಿಸಲ್ಪಟ್ಟ ಹಿರಿಯ ಪೊಲೀಸ್ ಅಧಿಕಾರಿ ಎಸಿಪಿ ಸಂಗ್ರಾಮಸಿಂಗ್ ಮತ್ತಿತರರು ವಿಚಾರಣೆಗಾಗಿ ಬಂಧನದಲ್ಲಿದ್ದಾರೆ. ನ್ಯಾಯಾಲಯದ ಮುಂದೆ ಇವರನ್ನು ಕರೆತಂದಾಗ ಬಹಿರಂಗಪಡಿಸಿದ ಮಾಹಿತಿಗಳು ರಾಜ್ಯದ ರಾಜಕೀಯದಲ್ಲಿ ಕೋಲಾಹಲ ಉಂಟುಮಾಡುವಂತಹವು. ಡಾ. ರಾಜ್‌ರವರನ್ನು ನರಹಂತಕ ವೀರಪ್ಪನ್‌ನಿಂದ ಬಿಡುಗಡೆಗೊಳಿಸಲು 20 ಕೋಟಿ ರೂಪಾಯಿಗಳನ್ನು ತಾನೇ ಖುದ್ದಾಗಿ ತಮಿಳುನಾಡಿನ ಪ್ರಸಿದ್ಧ ನಟ ರಜನೀಕಾಂತ್ ಮ್ಯಾನೇಜರ್‌ಗೆ ಕೊಟ್ಟುಬಂದಿದ್ದೇನೆ. ಈ ಹಣ ಕರಿಂಲಾಲ್ ತೆಲಗಿಯಿಂದ ಪಡೆದದ್ದು' ಎಂಬ ಹೇಳಿಕೆಯನ್ನು ಸಂಗ್ರಾಮಸಿಂಗ್ ನೀಡಿದ್ದಾನೆ. ಇಷ್ಟು ಮಾತ್ರವಲ್ಲ "ಹಿಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಗೃಹಸಚಿವ ಮಲ್ಲಿಕಾರ್ಜುನ ಖರ್ಗೆ, ಸಚಿವರಾಗಿದ್ದ ಡಿ.ಕೆ.ಶಿವಕುಮಾರ್, ಸಚಿವ, ರೋಷನ್‌ಬೇಗ್'ರವರು ಇದರ ರುವಾರಿಗಳಾಗಿದ್ದು ಈಗ ತನ್ನನ್ನು ಬಲಿಪಶು ಮಾಡಲಾಗುತ್ತಿದೆ ಎಂದು ಆಸ್ಫೋಟಕರ ಸಂಗತಿಗಳನ್ನು ಹೊರಗೆಡವಿದ್ದಾರೆ. "ಮೇಲಾಧಿಕಾರಿಗಳ ಆದೇಶ ಜಾರಿ ಅಷ್ಟೆ ಆಗ ನನಗುಳಿದ ಮಾರ್ಗ' ಎಂದು ಸ್ಪಷ್ಟನೆ ನೀಡಿದ್ದಾರೆ.

ಡಾ.ರಾಜ್‌ರನ್ನು ವೀರಪ್ಪನ್‌ನಿಂದ ಬಿಡಿಸಿಕೊಂಡು ಬರಲು ಕೋಟ್ಯಾಂತರ ಹಣ ನೀಡಲಾಗಿದೆ ಎಂಬ ಆರೋಪ ಹೊಸದೇನಲ್ಲ. ಹಿಂದೆ ರಾಜ್ಯದ ಪೊಲೀಸ್ ಮಹಾನಿರ್ದೇಶಕರಾಗಿದ್ದ ಸಿ.ದಿನಕರ್ ಇದೇ ಆರೋಪ ಮಾಡಿದ್ದರು. ಅವರ ಪುಸ್ತಕ ಡಾ.ರಾಜ್‌ಪ್ರೈಜ್ ಕ್ಯಾಚ್‌ನಲ್ಲಿ ಈ ಮಾಹಿತಿಗಳನ್ನು ದಾಖಲಿಸಿದ್ದಾರೆ. ಒಬ್ಬ ಅತ್ಯಂತ ಹಿರಿಯ ಪೊಲೀಸ್ ಅಧಿಕಾರಿ ಇಂತಹ ಗುರುತರ ಆರೋಪ ಮಾಡಿದ್ದಾಗ ಅದನ್ನು ಗಂಭೀರವಾಗಿ ಪರಿಗಣಿಸಿ ತನಿಖೆಗೆ ಆದೇಶಿಸಬೇಕಿತ್ತು. ಆದರೆ ಹಾಗೆ ಮಾಡಲಿಲ್ಲ. ಮಾಡಬೇಕಾದವರೇ ಆರೋಪಿಗಳಾಗಿದ್ದರು. ಸ್ವತಃ ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣರವರೇ ದಿನಕರ್ ತಲೆತಿರುಕ, ಹುಚ್ಚ ಎಂದೆಲ್ಲಾ ಜರೆದು ಆರೋಪಗಳನ್ನು ತೇಲಿಸಿ, ತಿಪ್ಪೆಗೆಸೆದಿದ್ದರು. ಸಂಗ್ರಾಮಸಿಂಗ್‌ನ ಈ ಆರೋಪ ಆ ಅಂಶಗಳನ್ನು ಒಳಗೊಂಡಿದ್ದರೂ ಇಡೀ ಪ್ರಕರಣಕ್ಕೆ ಇನ್ನೊಂದು ತಿರುವು ಸಿಗುತ್ತಿದೆ. ಡಾ.ರಾಜ್ ಅಪಹರಣ ವೀರಪ್ಪನಿಗೆ ಹಣದ ಪ್ರಕರಣ ಮತ್ತು ಕುಖ್ಯಾತ ಕರೀಂಲಾಲ್ ಸ್ಟ್ಯಾಂಪ್‌ಹಗರಣದ ನಡುವಿನ ಸಂಬಂಧಗಳು - ವಿದ್ಯಮಾನಗಳು ಸ್ಫೋಟಕ ಆಘಾತಕಾರಿಯಾಗಿದೆ. ಸ್ಟ್ಯಾಂಪ್‌ಹಗರಣದಂತಹ ದೇಶದ್ರೋಹಿ ಚಟುವಟಿಕೆಯಿಂದ ಬಂದ ಹಣವನ್ನು ಅದರ ಪ್ರಮುಖ ಆರೋಪಿಯೊಬ್ಬನಿಂದ ಪಡೆದ ಈ ಕೃತ್ಯ ಸಾಮಾನ್ಯವಾದುದಲ್ಲ. ತೆಲಗಿಯಂತಹವನೊಂದಿಗೆ ಅಧಿಕಾರಸ್ಥರ ನಂಟು ಹೀಗೆ ಇರುವಾಗ ಅಂತಹ ಹಗರಣದ ತನಿಖೆ ಸುಸೂತ್ರವಾಗಿ ಸರಿಯಾಗಿ ನಡೆದೀತೆ? ಇನ್ಯಾರ್ಯಾರು ಇವನೊಂದಿಗೆ ಸಂಬಂಧ ಹೊಂದಿದ್ದಾರೆ. ಅವರ ಪಾತ್ರವೇನು? ಎಂಬ ಪ್ರಶ್ನೆ ಏಳುವುದು ಸಹಜ. ಆದ್ದರಿಂದ ಇಡೀ ಪ್ರಕರಣವನ್ನು ನಿಷ್ಠುರ ತನಿಖೆಗೆ ಒಪ್ಪಿಸಬೇಕು. ಈಗ ಸಂಗ್ರಾಮಸಿಂಗ್ ಪ್ರಾಸ್ತಾವಿಕ ವಿಷಯವನ್ನು ಸಹ ತನಿಖೆ ನಡೆಸುತ್ತಿರುವ ಸಿಬಿಐ ಕೈಗೆತ್ತಿಕೊಂಡು ಆಳವಾದ ತನಿಖೆ ನಡೆಸಿ ಸತ್ಯ ಸಂಗತಿ ಗಳನ್ನು ಬಹಿರಂಗ ಪಡಿಸಬೇಕು. ಯಾಕೆಂದರೆ ಸ್ಟ್ಯಾಂಪ್ ಹಗರಣ ಆರೋಪಿಗಳು



ವೀರಪ್ಪನ್ ಸಂಗ್ರಾಮ್ ಸಿಂಗ್

ಚಟು ವಟಿಕೆಗೆ ರಾಜ್ಯದಲ್ಲಿಯೂ ಹಗುರವಾದ ವಾತಾವರಣವಿತ್ತು ಎಂದು ಭಾವಿಸುವುದು ತಪ್ಪೇನಿಲ್ಲ. ಸಂಗ್ರಾಮ್‌ಸಿಂಗ್ ಈಗ ಬಂಧಿತನಾದ ಬಳಿಕವೇ, ಯಾಕೆ ಈ ಸಂಗತಿ ಹೇಳುತ್ತಿದ್ದಾನೆ, ಹತಾಶ ಸ್ಥಿತಿಯಲ್ಲಿ ಹೇಳುತ್ತಿದ್ದಾನೆಯೇ? ಹಾಗೆ ಹೇಳುತ್ತಿರಬಹುದಾದರೂ ಮಾಡಿರುವ ಆರೋಪಗಳನ್ನು ಕಡೆಗಣಿಸಲಾಗುವುದಿಲ್ಲ. ಈಗಾಗಲೇ ಖರ್ಗೆ ಅಂತಹ ಆರೋಪ ನಿರಾಕರಿಸಿಬಿಟ್ಟಿದ್ದಾರೆ, ತಮ್ಮ ವಿರುದ್ಧದ ರಾಜಕೀಯ ಪಿತೂರಿ ಇರಬಹುದೇ ಎಂಬುದನ್ನು ಮೌನವಾಗಿ ಹೇಳಿದ್ದಾರೆ. ಈ ಸ್ಥಿತಿಯಲ್ಲಿ ಖರ್ಗೆ ತನಿಖೆಗಾಗಿ ಸಂಗತಿ ಹೊರಬರಲಿ' ಎಂದು ಹೇಳಬಹುದಾಗಿತ್ತು. ಹಾಗೆ ಹೇಳಲಿಲ್ಲ. ಇನ್ನೂ ಡಿ.ಕೆ.ಶಿವಕುಮಾರ್, ರೋಷನ್‌ಬೇಗ್ ಅವರದ್ದು ಅಂತಹದ್ದೇ ಉತ್ತರ. ಇವರು ಮತ್ತೆ ಮಂತ್ರಿಯಾಗಲು 'ಲಾಭಿ' ನಡೆಸಿರುವ ಗಣ್ಯರು. ಸರ್ಕಾರ - ಆಡಳಿತದ ಜೊತೆ ಅಧಿಕಾರದ ವಲಯದಲ್ಲಿರುವುದರಿಂದ ಎಂತಹುದೇ ತನಿಖೆ ಸಮರ್ಪಕವಾಗಿ ನಡೆಯಲಾರದು. ಛಾಪಾಕಾಗದ ಹಗರಣ ಆರೋಪಿಯಿಂದ ಹಣ ಪಡೆದ ಯಾವನೇ ವ್ಯಕ್ತಿ ಆ ಕೃತ್ಯದಲ್ಲಿ ಭಾಗಿಯಾಗುತ್ತಾನೆ. ಆದ್ದರಿಂದ ಹಿಂದಿನ ಗೃಹಸಚಿವ, ಈಗಿನ ಜಲಸಂಪನ್ಮೂಲ ಸಚಿವರಾಗಿರುವ ಮಲ್ಲಿಕಾರ್ಜುನ ಖರ್ಗೆಯವರನ್ನು ಕೂಡಲೇ ಸಂಪುಟದಿಂದ ಕೈಬಿಡಬೇಕು. ಆರೋಪಿತರನ್ನು ಮಂತ್ರಿಮಂಡಲಕ್ಕೆ ಸೇರಿಸಕೂಡದು. ಈ ದಿಕ್ಕಿನಲ್ಲಿ ಧರಂಸಿಂಗ್ ನಿಷ್ಠುರ ಹೆಜ್ಜೆ ಇರಿಸಬೇಕು. ಅಂದರೆ ಮಾತ್ರ ನಿಷ್ಪಕ್ಷಪಾತ ತನಿಖೆ ಸಾಧ್ಯವಾಗುವುದು.

ಹಿಂದೆ 'ರಾಜ್ ಬಿಡುಗಡೆ - ಸಂಧಾನ' ವ್ಯವಹಾರ ದೀರ್ಘಕಾಲ ಲಂಬಿಸುತ್ತಿರುವಾಗ 'ಹೇಗಾದರೂ' ಮಾಡಿ ಬಿಡಿಸಿಕೊಂಡು ಬರಬೇಕೆಂಬ ವಾದಗಳು ಕೇಳಿಬಂದವು. ಆಗ ನಾವು ಯಾವುದೇ ಕಾನೂನುಬಾಹಿರ ಮಾರ್ಗಗಳನ್ನು ಹಿಡಿಯದೇ ಬಿಡುಗಡೆಗೆ (ಕಾರ್ಯಾಚರಣೆ ಮೂಲಕವಾದರೂ) ಯತ್ನಿಸಬೇಕೆಂದು ಆಗ್ರಹಿಸಿದ್ದೆವು. ಈ ಬಿಡುಗಡೆಗೊಂಡ ಸಂಗತಿಗಳು ಅಧಿಕಾರಸ್ಥರು, ಕರಾಳ-ಭೂಗತ ಮಾಫಿಯಾ- ದೇಶದ್ರೋಹಿಗಳು, ರಾಜಕಾರಣಿಗಳ-ಅಧಿಕಾರಿಗಳ ನಡುವಿನ ನಂಟನ್ನು ತೆರೆದುತೋರುತ್ತದೆ. ಇಂದಿನ ಕೊಳತೆನಾರುವ ಭೂಮಾಲಿಕ -ಬಂಡವಾಳಶಾಹಿ ವ್ಯವಸ್ಥೆಯ ನಿಜ ಮುಖವಿದು.

ಈ ವಾರ ಕರ್ನಾಟಕ
ಒಂದು ನೋಟ
ಎಸ್.ವೈ.ಗುರುಶಾಂತ್

ಪ್ರತ್ಯೇಕತಾ ಬೇಡಿಕೆ ಒಪ್ಪಲಾಗದು


ತೆಲಂಗಾಣ ರಾಜ್ಯದ ಬೇಡಿಕೆ ಪರಿಗಣಿಸುವ ಭರವಸೆಯಿಂದಾಗಿ ರಾಯಲ್ ಸೀಮಾ ರಾಜ್ಯದ ರಚನೆಯ ಪ್ರಶ್ನೆ ಎತ್ತಲಾಗಿದೆ. ಇದನ್ನು ಒಪ್ಪಲಾಗದು. ದೃಢವಾಗಿ ಇದನ್ನು ಎದುರಿಸಬೇಕಾಗಿದೆ.

ತೆಲಂಗಾಣ ರಾಜ್ಯದ ರಚನೆಯನ್ನು ಸಹಾನುಭೂತಿಯಿಂದ ಪರಿಗಣಿಸುವ ಹೇಳಿಕೆ ಕೇಂದ್ರ ಸರ್ಕಾರದಿಂದ ಬಂದ ಬಳಿಕ ಈಗ ಆಂಧ್ರಪ್ರದೇಶವನ್ನು ಮತ್ತೇ ವಿಭಜನೆ ಮಾಡುವ ಹೊಸಬೇಡಿಕೆ ಎತ್ತಲಾಗಿದೆ. ಅದು ರಾಯಲಸೀಮಾ ರಾಜ್ಯದ ಬೇಡಿಕೆ ಈ ಬೇಡಿಕೆಯ ರಾಜ್ಯದಲ್ಲಿ ಆಂಧ್ರದ ಜಿಲ್ಲೆಗಳಲ್ಲದೇ ಕರ್ನಾಟಕದ ಗಡಿ ಜಿಲ್ಲೆ ಬಳ್ಳಾರಿಯನ್ನು ಸೇರಿಸಿಕೊಳ್ಳಲಾಗಿದೆ. ಇದಕ್ಕೆ ಸಹಜವಾಗಿಯೇ ರಾಜ್ಯದಲ್ಲಿಯೂ ಪ್ರತಿಭಟನೆ ವ್ಯಕ್ತಗೊಂಡಿದೆ. ಆಡಳಿತದ ಅನುಕೂಲಕ್ಕಾಗಿಯೇ ಭಾಷಾವಾರು ಪ್ರಾಂತ್ಯಗಳನ್ನು ಒಡೆದು ಸಣ್ಣ ರಾಜ್ಯಗಳನ್ನು ನಿರ್ಮಿಸಲಾಗುವುದು ಎಂಬುದನ್ನು ಒಪ್ಪಲು ಸಾಧ್ಯವೇ ಇಲ್ಲ. ಇದು ಭಾಷಾವಾರು ಪ್ರಾಂತ್ಯಗಳ ರಚನೆಯ, ಜನಭಾಷೆ - ಸಂಸ್ಕೃತಿ - ಒಗ್ಗಟ್ಟನ್ನು ಕಾಯುವುದರ ವಿರುದ್ಧ ಒಕ್ಕೂಟದ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಕುತಂತ್ರವಾಗಿದೆ. ಈ ಪ್ರದೇಶಗಳಲ್ಲಿ ಹಲವಾರು ಸಮಸ್ಯೆಗಳಿವೆ. ಪ್ರಾದೇಶಿಕ ಅಸಮತೋಲನ ವಿದೆ. ಇದಕ್ಕೆ ಮೂಲ ಕಾರಣ ಬಂಡವಾಳಶಾಹಿ - ಭೂಮಾಲಿಕ ವ್ಯವಸ್ಥೆಯ ಆಡಳಿತದ ಫಲ. ಇಂತಹ ಸಮಸ್ಯೆಗಳ ಸೃಷ್ಟಿಕರ್ತರೇ, ರಾಜ್ಯಗಳನ್ನು ಒಡೆಯುವ ಬೇಡಿಕೆ ಮುಂದಿರಿಸಿ 'ಹೋರಾಡುವ' ನಾಟಕ ಆರಂಭಿಸಿರುವುದು. ಇಂತಹ ಪಾಳೇಗಾರಿ ಶಕ್ತಿಗಳೇ, ಈ ಬೇಡಿಕೆಗಳ ಹಿಂದಿರುವುದು. ಇಂತಹ ಬೆಳವಣಿಗೆಗಳನ್ನು ಪ್ರಬಲವಾಗಿ ವಿರೋಧಿಸಬೇಕಾಗಿದೆ.

ಕಾಂಗ್ರೆಸ್-ಜೆಡಿ(ಎಸ್) ಸರ್ಕಾರ : ದೃಷ್ಟಿಹೀನರು ನಡೆದದ್ದೇ ದಾರಿಯೇ ?

ಧರಂಸಿಂಗ್ ಸರ್ಕಾರ ಹಾಗೋಹೀಗೋ ತಡಕಾಡುತತಾ ಸಾಗಿದೆ. ನಡೆದದ್ದೇ ದಾರಿ ಎಂಬಂತಾಗಿದೆ. ಕಾಂಗ್ರೆಸ್-ಜೆಡಿ(ಎಸ್) ಪಕ್ಷಗಳು ರಾಜ್ಯದ ಮುಂದಿರುವ ಹೊಸ ಸನ್ನಿವೇಶ, ಸವಾಲುಗಳನ್ನು ಗುರುತಿಸಿಲ್ಲ. ಗಂಭೀರವಾಗಿ ಎದುರಿಸುವ ಇಚ್ಛೆಯೂ ಇಲ್ಲ. ಅತ್ಯಂತ ಆತಂಕಕಾರಿ ಸಂಗತಿಯೆಂದರೆ ಚುನಾವಣಾ ಫಲಿತಾಂಶ-ಜನಾದೇಶದ ಕುರಿತು, ಸೋಲು-ಸಾಧನೆ ಬಗ್ಗೆ ಎರಡೂ ಪಕ್ಷಗಳೂ ಆಳವಾದ ವಿಮರ್ಶೆಯನ್ನೇ ಮಾಡಿಕೊಳ್ಳದಿರುವುದು, ಇನ್ನೂ ಸರಿಪಡಿಸಿಕೊಳ್ಳುವ - ಪಾಠ ಕಲಿಯುವ ಇರಾದೆಯಾದರೂ ಎಲ್ಲಿ?

'ಧರಂಸಿಂಗ್ ಈಜ್ ಹಿಯರ್' 'ಇಲ್ಲಿರೋದು ಧರಂಸಿಂಗ್' ಎಂದು ಮುಕ್ತವಾಗಿ ಮಾತನಾಡಲಿ. ಅವರು ಸೀನಿಯರ್ ಲೀಡರ್ ಇದ್ದಾರೆ. ನಮ್ಮ ಸರ್ಕಾರ ನಡೆಯಲಿಕ್ಕೆ ಸಹಕಾರ ಕೊಡಬೇಕು'... ಟಿ.ವಿ. ಮಾಧ್ಯಮಗಳ ಮುಂದೆ ಮುಖ್ಯಮಂತ್ರಿಗಳು ಹೀಗೆ ಮಾತನಾಡುತ್ತಿರುವಾಗ ಅವರಲ್ಲಿ ಒಂದು ಬಗೆಯ ವಿಚಿತ್ರ ಆತ್ಮವಿಶ್ವಾಸ ಹಾಗೇ ಮುಗ್ಗುಲಲ್ಲಿ ಓಲೈಕೆಯ ಭಾವ ಪ್ರಕಟವಾಗುತ್ತಿತ್ತು. ಅವರು ಆಹ್ವಾನಿಸುತ್ತಿದ್ದ 'ಸೀನಿಯರ್ ಲೀಡರ್' ಬೇರಾರೂ ಅಲ್ಲ ಕ್ಯಾಪಿಟೇಷನ್, ಡೊನೇಷನ್ ಭಾರಿ ಕುಳ ಆರ್.ಎಲ್.ಜಾಲಪ್ಪನವರೇ. ವೃತ್ತಿ ಶಿಕ್ಷಣದ ಪ್ರವೇಶಕ್ಕೆ ಸಂಬಂಧಿಸಿ ಉದ್ಭವವಾಗಿರುವ ಬಿಕ್ಕಟ್ಟಿಗೆ ಪರಿಹಾರದ ಅಂಶ ಆ ಮಾತುಗಳಲ್ಲಿತ್ತು. ಮುಖ್ಯಮಂತ್ರಿಗಳ ಮಾತುಗಳೇನು ನಡೆದಂತೆ ಕಾಣುತ್ತಿಲ್ಲ. ಶಿಕ್ಷಣದ ವ್ಯಾಪಾರಿಗಳ ಮೇಲೆ ಮುಖ್ಯಮಂತ್ರಿಗಳಿಗೆ ವಿಶ್ವಾಸವಿದ್ದರೂ ಈ ವ್ಯಾಪಾರಿಗಳಿಗೆ ಅವರ ಮೇಲೆ ಇದ್ದಂತಿಲ್ಲ. ಅದೂ ಅವರ ವ್ಯಾಪಾರಕ್ಕೆ ಬೇಕಾಗಿಯೂ ಇರಲಿಕ್ಕಿಲ್ಲ. ಸರ್ಕಾರದ ಈ ಪ್ರಸ್ತಾಪಗಳು ಸಾಲದು ಇನ್ನಷ್ಟು



ಸಿದ್ದರಾಮಯ್ಯ - ಧರಂಸಿಂಗ್

ಬೇಕು ಎಂಬ ಹಠದಲ್ಲೇ ನ್ಯಾಯಾಲಯದ ತೀರ್ಪಿನ ಬಡಿಗೆ ಹಿಡಿದು ಕೋರ್ಟ್‌ಗಳ ಮೆಟ್ಟಿಲೇರಿ ಇಳಿಯುತ್ತಿದ್ದಾರೆ. ಇಲ್ಲಿ ಎದ್ದು ಕಾಣುವ ಅಂಶವೆಂದರೆ ಸರ್ಕಾರಕ್ಕೆ ದೃಢ ನಿರ್ಧಾರ ಇಲ್ಲದಿರುವುದು. ಹೊಸ ದಾರಿಗಳು ಕಾಣದಿರುವುದು.

ಈ ಸ್ಥಿತಿ ಸಿಇಟಿ ಬಿಕ್ಕಟ್ಟಿಗೆ ಮಾತ್ರ ಸೀಮಿತಗೊಂಡ ವಿಷಯವೇನಲ್ಲ.ಈ ಕಾಂಗ್ರೆಸ್-ಜೆಡಿ(ಎಸ್)ಮೈತ್ರಿಕೂಟ ಸರ್ಕಾರ ರಚಿತವಾಗಿ ತಿಂಗಳು ದಾಡಿದೆ. ಅದು ಸಿಇಟಿ ಯಾಗಿರಲಿ, ಬರಗಾಲವೇ ಅಥವಾ ರೈತರ ಪ್ರಶ್ನೆಯೇ, ಅಕ್ಕಿ ಹಗರಣವೇ,ನೀರಾವರಿ ಸಮಸ್ಯೆಯೇ, ರೇಷನ್ ಕಾರ್ಡೇ, ಬಿತ್ತನೆ ಬೀಜವೇ... ರೈತರ ಆತ್ಮಹತ್ಯೆಯೇ.... ನಿರ್ಣಾಯಕ ಗುರಿಯಿಲ್ಲ, ದಾರಿಯೂ ಇಲ್ಲ. ಹಾಗೂ ಹೀಗೂ ನಡೆದದ್ದೇ ದಾರಿ - ಕಂಡದ್ದೇ ಗುರಿ...

ಕೋಮುವಾದಿಗಳನ್ನು ಅಧಿಕಾರದಿಂದ ದೂರ ಇಡಲೆಂದೇ ಮೈತ್ರಿಕೂಟದ ಸರ್ಕಾರ ರಚಿತವಾಗಿದೆ. ಆದರೆ ಕೋಮುವಾದಿಗಳ ಅಟ್ಟಹಾಸವನ್ನು ಅಡಗಿಸಲು ರಾಜಕೀಯ, ಆಡಳಿತಾತ್ಮಕ ಕಾರ್ಯಯೋಜನೆ ಎಲ್ಲಿದೆ? ಇಡೀ ರಾಜ್ಯದ ಜನತೆ ಎದುರಿಸುತ್ತಿರುವ ಸಮಸ್ಯೆಗಳ ಬಗೆಗಾಗಲೀ, ಒಟ್ಟು ರಾಜ್ಯದ ಮುಂದಿರುವ ಸವಾಲುಗಳ ಬಗೆಗಾಗಲೀ ಗಹನವಾಗಿ ಅರ್ಥಮಾಡಿಕೊಂಡು ಕೆಲಸ ಮಾಡುವ ಒಂದು ಸರ್ಕಾರವಾಗಿ ಬಿಂಬಿತವಾಗಲೇ ಇಲ್ಲ. 84 ಶಾಸಕರ ಬಲದೊಂದಿಗೆ ಬಿಜೆಪಿ ಮೈತ್ರಿಕೂಟ ಅಧಿಕಾರ ಹಿಡಿಯಲು ಹೊಂಚುಹಾಕಿ,

ಪುಟ 3 ಕ್ಕೆ

ಎಸ್‌ಎಫ್‌ಐನಿಂದ ಯಶಸ್ವಿ ಕಾಲೇಜು ಬಂದ್

ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಜಿಲ್ಲಾ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಜುಲೈ 6 ರಂದು ಮಂಗಳೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕಾಲೇಜ್ ಬಂದ್‌ಗೆ ಕರೆ ನೀಡಿದ್ದು, ಜಿಲ್ಲೆಯಾದ್ಯಂತ ಯಶಸ್ವಿಯಾಗಿ ಬಂದ್ ಆಗಿದೆ. ಜಿಲ್ಲೆಯಾದ್ಯಂತ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸುವುದರ ಮೂಲಕ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು.

ನಂತರ ಎಸ್‌ಎಫ್‌ಐ ಮುಖಂಡರು ಹಾಗೂ ವಿದ್ಯಾರ್ಥಿಗಳು ಜಿಲ್ಲಾಧಿಕಾರಿಯವರ ಮುಖಾಂತರ ಕುಲಪತಿಗಳಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಕವಿರಾಜ್ ಎಸ್., ಕಾರ್ಯದರ್ಶಿ ಬಿ.ಎಂ.ನಾಸಿರ್, ಉಪಾಧ್ಯಕ್ಷ ಇಲಿಯಾಸ್ ನಾವುಂದ, ಸದಸ್ಯರಾದ ಶಿವಪ್ರಸಾದ್ ಹಾಗೂ ಮೋಬಿ, ಮಾಸ್ತಿ ನಾಯ್ಕ ವಿದ್ಯಾರ್ಥಿ ಸದಸ್ಯರು ಹಾಜರಿದ್ದರು.

ಉಡುಪಿಯ ಪೂರ್ಣಪ್ರಜ್ಞ ಕಾಲೇಜು, ಎಂ.ಜಿ.ಎಂ.ಕಾಲೇಜು, ಯು.ಪಿ.ಎಂ.ಸಿ., ಮೈಕ್ರೋ ಬಿ.ಬಿ.ಎಂ., ವೈಕುಂಠ ಬಾಳಿಗಾ ಕಾನೂನು ಕಾಲೇಜು, ಮಾಧವ ಪೈ ಮೆಮೋರಿಯಲ್ ಕಾಲೇಜು, ಪೂರ್ಣಪ್ರಜ್ಞ ಸಂಧ್ಯಾ ಕಾಲೇಜು, ಎಸ್.ಎಂ.ಎಸ್., ಕ್ರಾಸ್‌ಲ್ಯಾಂಡ್ ಬ್ರಹ್ಮಾವರ, ಸ.ಪ್ರ.ದ.ಕಾಲೇಜುಗಳು ಉಡುಪಿ, ಬಾರಕೂರು, ಸೈಂಟ್ ಮೇರೀಸ್, ಶಿರ್ವದ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದರು.

ಬೇಡಿಕೆಗಳು

ಮಂಗಳೂರು ವಿಶ್ವ ವಿದ್ಯಾನಿಲಯ ಕಾನೂನು ಮಹಾ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಡಿಗ್ರಿ ಫಲಿತಾಂಶ ಬರುವ ಮೊದಲೇ ಎಲ್‌ಎಲ್‌ಬಿ ಪ್ರಥಮ ವರ್ಷದ ವಿದ್ಯಾರ್ಥಿಗಳ ಜೂನ್ 26 ರ ಒಳಗೆ ಕಾಲೇಜು ಶುಲ್ಕವನ್ನು ಕಟ್ಟಬೇಕು. ಇಲ್ಲವಾದಲ್ಲಿ ರೂ.200 ದಂಡ ವಸೂಲಿ ಮಾಡಲಾಗುವುದು ಎಂದು ವಿಶ್ವ ವಿದ್ಯಾನಿಲಯ ಸ್ಪಷ್ಟನೆ ತಿಳಿಸಿದೆ. ಆದರೆ ಈಗಾಗಲೇ ರೂ.200 ದಂಡ ವಸೂಲಿ ಮಾಡಲಾಗುತ್ತಿದೆ. ಇದನ್ನು ವಿಶ್ವ ವಿದ್ಯಾನಿಲಯವು ತಕ್ಷಣ ವಾಪಾಸು ಮಾಡಬೇಕು.

ವಿಶ್ವ ವಿದ್ಯಾನಿಲಯ ಸುವರ್ಣ ಮಹೋತ್ಸವದ ಅಂಗವಾಗಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಕಾಲೇಜುಗಳಲ್ಲಿ ಪ್ರತಿ ಒಬ್ಬ ವಿದ್ಯಾರ್ಥಿಯಿಂದ ರೂ.50 ಸಂಗ್ರಹವನ್ನು ಮಾಡಲು ಮುಂದಾಗಿದೆ. ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಕಾಲೇಜುಗಳಲ್ಲಿ ಸುಮಾರು ಅಂದಾಜು 1 ಲಕ್ಷದ 50 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಇದರಿಂದ ಸರಿ ಸುಮಾರು 75 ಲಕ್ಷಕ್ಕೂ ಮಿಕ್ಕಿ ಸಂಗ್ರಹವಾಗುತ್ತದೆ. ಈ ತೀರ್ಮಾನವನ್ನು ತಕ್ಷಣ ಬಿಡಬೇಕು.

ಡಿಗ್ರಿ ಹಾಗೂ ಕಾಲೇಜುಗಳಲ್ಲಿ ಪರೀಕ್ಷಾ ಪತ್ರಿಕೆಯ ಮರು ಪರಿಶೀಲನೆಯ ಶುಲ್ಕವನ್ನು ಹೆಚ್ಚಿಸಿದ್ದು, ಅದನ್ನು ತಕ್ಷಣ ಕಡಿಮೆಗೊಳಿಸಬೇಕು.

ಮಂಗಳೂರು ವಿ.ವಿ.ಯು ಕೆಲವು ಕಾಲೇಜುಗಳಲ್ಲಿ ಕನ್ನಡ ಪಠ್ಯವನ್ನು ರದ್ದುಗೊಳಿಸುವ ಪ್ರಸ್ತಾಪವನ್ನು ತಕ್ಷಣ ಕೈಬಿಡಬೇಕು. ಮಾತ್ರವಲ್ಲದೆ ಕಾಲೇಜುಗಳಲ್ಲಿ ಅಧ್ಯಾಪಕರ ಕೊರತೆ ಕಂಡುಬಂದಿದ್ದು, ಅದನ್ನು ತಕ್ಷಣ ಸರಿಪಡಿಸಬೇಕು.

ಮಾತ್ರವಲ್ಲದೆ ಡಿಗ್ರಿ ಕಾಲೇಜು ಮತ್ತು ಕಾನೂನು ಕಾಲೇಜುಗಳಲ್ಲಿ ಇತ್ತೀಚೆಗೆ ಅನೇಕ ಸಮಸ್ಯೆಗಳು ಕಂಡುಬರುತ್ತಿದೆ. ಈ ಎಲ್ಲಾ ಬೇಡಿಕೆಗಳನ್ನು ಪರಿಶೀಲಿಸಿ ಈ ಕೂಡಲೇ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಿಕೊಡಬೇಕಾಗಿ ಈ ಮೂಲಕ ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್.ಎಫ್.ಐ) ಉಡುಪಿ ಜಿಲ್ಲಾ ಸಮಿತಿ ಒತ್ತಾಯಿಸುತ್ತಿದೆ.

ಕುಂದಾಪುರದಲ್ಲಿ ಭಂಡಾರ್‌ಕಾರ್ಸ್ ಹಾಗೂ ಇತರ ಕಾಲೇಜು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ನೂರಾರು ವಿದ್ಯಾರ್ಥಿಗಳು ಘೋಷಣೆ ಕೂಗಿ ಪ್ರತಿಭಟಿಸಿ ನಂತರ ಅಸಿಸ್ಟೆಂಟ್ ಕಮಿಷನರ್‌ರವರಿಗೆ ಮನವಿ ಸಲ್ಲಿಸಿದರು.

ಕಾರ್ಕಳದಲ್ಲಿ ಕೂಡ ಹೆಚ್ಚಿನ ಕಾಲೇಜು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು.

ಅಕ್ಕಿ ಹಗರಣ: ದರೋಡೆಕೋರರಿಗೆ ಶಿಕ್ಷೆ ಕೊಡಿ

ಅಕ್ಕಿ ಹಗರಣ ಮಾಡಿದ ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ಧಿಕ್ಕಾರ, ಬಡವರ ತುತ್ತು ಕಸಿದುಕೊಳ್ಳುತ್ತಿರುವ ಭ್ರಷ್ಟ ಅಧಿಕಾರಿಗಳಿಗೆ ಶಿಕ್ಷೆಯಾಗಲಿ, ಸಿಬಿಐ ತನಿಖೆ ಆಗಲೇಬೇಕು ಎಂಬ ಘೋಷಣೆಗಳೊಂದಿಗೆ ಸಿ.ಪಿ.ಐ(ಎಂ) ನೇತೃತ್ವದಲ್ಲಿ ಸುರಿಯುತ್ತಿರುವ ಮಳೆಯಲ್ಲಿಯೇ ರಾಮದುರ್ಗದಲ್ಲಿ ಪ್ರತಿಭಟನಾ ಮೆರವಣಿಗೆ ನಡೆದು ತಹಶೀಲದಾರ ಕಚೇರಿ ಹತ್ತಿರ ಬಹಿರಂಗ ಸಭೆ ನಡೆದು ಸರಕಾರಕ್ಕೆ ಮನವಿ ಸಲ್ಲಿಸಲಾಯಿತು.

ರಾಜ್ಯದಲ್ಲಿ ಸತತವಾಗಿ ನಾಲ್ಕು ವರ್ಷದಿಂದ ಬರಗಾಲ ಬಿದ್ದು ಕೂಲಿಕಾರರು ಊರು ಬಿಟ್ಟು ಬೇರೆ ಊರುಗಳಿಗೆ ಗೂಳೆ ಹೊರಟಿದ್ದಾರೆ. ಇಂತಹ ಸಮಯದಲ್ಲಿ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಬಡವರಿಗೆ ಕೆಲಸ ಕೊಟ್ಟು ಅವರಿಗೆ ಹಂಚಬೇಕಾಗಿದ್ದ ಅಕ್ಕಿಯನ್ನು ಹಗಲು ಧರೋಡೆ ಮಾಡಿದ, ಆಫ್ರೀಕಾಕ್ಕೆ ರವಾನೆ ಮಾಡುತ್ತಿರುವ ಭ್ರಷ್ಟ ರಾಜಕಾರಣಿಗಳಿಗೆ ಅಧಿಕಾರಿಗಳಿಗೆ ಶಿಕ್ಷೆಯಾಗಬೇಕೆಂದು ಸಿ.ಪಿ.ಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ವ್ಹಿ.ಪಿ. ಕುಲಕರ್ಣಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಈ ಹಿಂದೆ ಮೇವು ಹಗರಣ, ಸಕ್ಕರೆ ಹಗರಣ, ಟೆಲಿಫೋನ್ ಹಗರಣ ಮಾಡಿದಂತಹ ಕೇಸುಗಳು ನೋಡಿದ್ದೇವೆ. ಆದರೆ ಬಡವರ ಬಾಯಿಗೆ ಬರುವ ಅಕ್ಕಿಯ ಮೇಲೆ ಇಂದಿನ ಅಧಿಕಾರಿಗಳ ರಾಜಕಾರಣಿಗಳ ಕಣ್ಣು ಬಿದ್ದಿದೆ ಎಂದರೆ ಇದು ಬಡವರಿಗೆ ಜೀವಂತ ಕೊಲ್ಲುವ ಹುನ್ನಾರ ಎಂದು ಸಿ.ಪಿ.ಐ(ಎಂ) ಜಿಲ್ಲಾ ಸಮಿತಿ ಸದಸ್ಯರ ಗೈಬು ಎಂ. ಜೈನೆಖಾನ ಮಾತನಾಡಿದರು.

ನಾಗಪ್ಪ ಸಂಗೊಳ್ಳಿ, ಬಾಬು ಶಿಕಾಲಪುರೆ, ಹಣಮಂತ ಹೊಸಕೋಟೆ, ಸಿದ್ದಪ್ಪ ಕುಂಬಾರೆ, ಗಫೂರ ಪಠಾಣ, ಸುರೇಶ ಬಾರ್ಕಿ, ಶಕೀಲ ಅಬಾನೆ ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಬಿಜೆಪಿ ನೆಲೆಯೂರಿತ್ತಿದೆಯೇ ?

ಪುಟ 2 ರಿಂದ

ಗಲಭೆ-ವಿಷ ಪ್ರಚಾರ, ಬಾಬಾಬುಡನ್‌ಗಿರಿ ವಿವಾದವನ್ನು ಬಳಸ ಲಾಗಿದೆ. ಪ್ಲಾಂಟೇಷನ್, ಕೃಷಿ ಬಿಕ್ಕಟ್ಟನ್ನು ಕಾಂಗ್ರೆಸ್ ವಿರುದ್ಧ ಬಳಸಲಾಗಿದೆ. ದಕ್ಷಿಣ ಕರ್ನಾಟಕ- ಹೈ.ಕರ್ನಾಟಕದಲ್ಲಿಯೂ ಶೇ 22 ಶೇ 24 ರಷ್ಟು ಮತಗಳಿಸಿದೆ. ಅದು ಗಳಿಸಿದ ಹೆಚ್ಚಿನ ಸ್ಥಾನಗಳ ಬಲ ಹಾಗೂ ಪ್ರಭಾವದಿಂದ ಈಗಿನ ಮೈತ್ರಿ ಕೂಟದ ಸರ್ಕಾರ ವೈಫಲ್ಯ(ವರ್ಗ ಸ್ವರೂಪದಿಂದಾಗಿ) ಗಳನ್ನು ಬಳಸಿ ಅಧಿಕಾರ ಹಿಡಿಯುವ ಯತ್ನದಲ್ಲಿದೆ. ಜನತಾದಳ(ಎಸ್) ನೊಳಗಿನ ಭಿನ್ನಾಭಿಪ್ರಾಯ ಬಳಸುವ ಆತುರ ಹೊಂದಿದೆ.

ಈ ಬಾರಿ ಚುನಾವಣೆಯಲ್ಲಿ ಬಿಜೆಪಿ, ವಿಶೇಷವಾಗಿ ಮೇಲ್ಜಾತಿ-ಲಿಂಗಾಯತರ ಹಿಂದುಳಿದ ಜಾತಿಗಳನ್ನು ಸೆಳೆದಿದೆ. ಲಿಂಗಾಯತರ ಒಂದು ದೊಡ್ಡ ವಿಭಾಗದಲ್ಲಿ ಬಿಜೆಪಿ ತಮ್ಮ ಪಕ್ಷವೆಂಬ ಭಾವನೆ ಬೆಳೆಯುತ್ತಿದೆ. ದಲಿತರ ಒಂದು ವಿಭಾಗವನ್ನು ಆಕರ್ಷಿಸಿದೆ. ಸಾಂಸ್ಕೃತಿಕವಾಗಿ ಹಾಗೂ ಸಾಮಾಜಿಕ ಮಧ್ಯಪ್ರವೇಶದಿಂದ ಮಧ್ಯಮವರ್ಗದಲ್ಲಿ ಗಣನೀಯ ಪ್ರಭಾವವಿದೆ. ಬೆಂಗಳೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ, ಗುಲ್ಬರ್ಗಾದಂತಹ ಮಹಾನಗರ ಪಾಲಿಕೆ ಪ್ರದೇಶಗಳಲ್ಲಿ, ಪಟ್ಟಣದಲ್ಲಿ ಹೆಚ್ಚು ಬೆಂಬಲವಿರುವಾಗಲೇ ಅದು ಹಂತಹಂತವಾಗಿ ಗ್ರಾಮೀಣ ಪ್ರದೇಶಗಳತ್ತ ಹಬ್ಬುತ್ತಿರುವುದನ್ನು ಗಮನಿಸಬಹುದು. ಕಳೆದ ಚುನಾವಣೆಯ ಬಳಿಕ ಕುಗ್ಗಿದ ಬಿಜೆಪಿ ಪ್ರಭಾವ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಾದ ಮುಖಭಂಗದಿಂದ ಮತ್ತೆ ಬಿಜೆಪಿಗೆ ಬಲ ತುಂಬಿಸಲು ಹಿಂದುತ್ವದ ಕೋಮುವಾದಿ ಅಜೆಂಡಾ ಇರಿಸಿ ಆರ್‌ಎಸ್‌ಎಸ್, ವಿಹೆಚ್‌ಪಿ, ಭಜರಂಗದಳಗಳನ್ನು ಆಕ್ರಮಣಕಾರಿಯಾಗಿ ಬಳಸಿದೆ. ಈ ಬಾರಿ ಅಭ್ಯರ್ಥಿಗಳ ಆಯ್ಕೆಯಲ್ಲಿ ಬಜರಂಗದಳ, ಆರ್‌ಎಸ್‌ಎಸ್‌ನ ಹಿನ್ನೆಲೆಯ ಅನೇಕರು ಗಣನೀಯವಾಗಿದ್ದಾರೆ. ಬಂಗಾರಪ್ಪ ಮುಂತಾದವರ ಪಕ್ಷಾಂತರ, ರಾಮಕೃಷ್ಣ ಹೆಗಡೆ ಬಳಗ ಹಾಗೂ ಅಭಿಮಾನಿಗಳ ಬಳಕೆ, ಕೆಲವು ಪ್ರದೇಶಗಳಲ್ಲಿ ಬಿಜೆಪಿ ನೆರವಿಗೆ ಬಂದ ಅಂಶಗಳು.

ಪಕ್ಷಾಂತರ - ಒಳಗೊಂಡು ಏನೆಲ್ಲಾ ಕಸರತ್ತು ನಡೆಸಿದ ಬಳಿಕವೂ ಬಿಜೆಪಿ 79 ಸ್ಥಾನಗಳನ್ನು ಗಳಿಸಿ ಪ್ರಥಮ ಸ್ಥಾನದಲ್ಲಿದ್ದರೂ ಮತ ಗಳಿಕೆಯಲ್ಲಿ ಎರಡನೇ ಸ್ಥಾನದಲ್ಲಿದೆ (ಕಾಂಗ್ರೆಸ್ 35.27, ಬಿಜೆಪಿ 28.33, ಮೂರನೇ ಸ್ಥಾನದಲ್ಲಿ ಜೆಡಿಎಸ್-20.8). ಲೋಕಸಭೆ-ವಿಧಾನಸಭೆಯ ಮತಗಳಿಕೆಯಲ್ಲಿ ಗಮನಾರ್ಹ ಅಂತರವಿದೆ. ಲೋಕಸಭೆಗೆ ಶೇ. 34.77.ಆದರೆ ವಿಧಾನಸಭೆ 28.33. ಅಂತರ ಶೇ 6.44. ಈ ಅಂತರ 1999 ರಲ್ಲಿ ಶೇ 7.0, 1996 ರಲ್ಲಿ ಶೇ 8(ಲೋಕಸಭೆ ಹೆಚ್ಚು) ಇದೆ. ಅಂದರೆ ಕೇಂದ್ರ ಬಿಜೆಪಿ ಸರ್ಕಾರ ರಚನೆಗೆ ಮತದಾರರ ಹೆಚ್ಚಿನ ಒಲವು ಕಾಣುವುದು. ಕೆಲವು ಪ್ರದೇಶಗಳಲ್ಲಿ ಬಿಜೆಪಿ ಮತ ಗಳಿಕೆ ಅತಿ ಹೆಚ್ಚು ಕೇಂದ್ರೀಕರಿಸಿರುವುದು ಗಮನಿಸಬಹುದು. ಪ್ರಾದೇಶಿಕವಾರು ಮತಗಳಿಕೆಯ ಬೆಳವಣಿಗೆ ಅವಲೋಕಿಸಿದಲ್ಲಿ ವಿಶೇಷವಾಗಿ ಕರಾವಳಿ ಘಟ್ಟ-ಉತ್ತರ ಕರ್ನಾಟಕದಲ್ಲಿ ದೃಢವಾಗಿ ನೆಲೆಯೂರುತ್ತಿದೆ. ಆದರೆ ಈ ಎಲ್ಲಾ ಕಡೆಗಳಲ್ಲಿಯೂ ಕಾಂಗ್ರೆಸ್ - ಜನತಾದಳ(ಎಸ್) ಪಕ್ಷಗಳ ಶಕ್ತಿಯೂ ತೀರಾ ದುರ್ಬಲವೇನಲ್ಲ.

ವಿಧಾನಸಭೆ ಮತ್ತು ಲೋಕಸಭೆ - ಮತಗಳಿಕೆ ವ್ಯತ್ಯಾಸ (ಶೇಕಡಾವಾರು)

		ಕಾಂಗ್ರೆಸ್		ಜ.ದಳ	ಬಿಜೆಪಿ		ಜೆಡಿ(ಯು)	ಬಿಎಸ್‌ಪಿ
1989	ಲೋಕಸಭೆ	48.9		37.5	2.5	-	-	
	ವಿಧಾನಸಭೆ	41.2		36.5	3.1			
1994	ವಿಧಾನಸಭೆ	27.3	+ 3.0	33.2	16.7			
1996	ಲೋಕಸಭೆ	30.37		33.25	24.75	+ 8.0		
1999	ಲೋಕಸಭೆ	45.4	+ 4.4	10.00	27.1			
	ವಿಧಾನಸಭೆ	41.06		10.42	20.69	+ 7.0	13.00	
2004	ಲೋಕಸಭೆ	36.82	+ 1.5	20.45	34.77	+ 6.44	13.52	0.93
	ವಿಧಾನಸಭೆ	35.27		20.77	28.33		1.87	1.22
							2.06	1.74

ಕಾಂಗ್ರೆಸ್-ಜೆಡಿ(ಎಸ್) ಸರ್ಕಾರ

ಪುಟ 3 ರಿಂದ

ಪ್ರತಿನಿತ್ಯವೂ ಒಂದಲ್ಲ ಒಂದು ವಿಷಯಗಳನ್ನು ಕೆದಕಿ, ರಾದ್ಧಾಂತ ಮಾಡುತ್ತಿರುವಾಗ ಅದನ್ನು ಸಮರ್ಥವಾಗಿ ಎದುರಿಸುವ ರಾಜಕೀಯ ಇಚ್ಛಾಶಕ್ತಿ ಎಲ್ಲಿದೆ? ಇಲ್ಲಿಯವರೆಗೂ ಅದು ಪ್ರಕಟಗೊಂಡಿಲ್ಲ. ಧರಂಸಿಂಗ್ ರವರಿಗೆ ಎಲ್ಲವನ್ನೂ, ಎಲ್ಲರನ್ನೂ 'ಸಮಭಾವ-ಸ್ನೇಹದಿಂದ' 'ಮ್ಯಾನೇಜ್' ಮಾಡಿಬಿಡಬಹುದೆಂಬ ವಿಶ್ವಾಸವಿರಬಹುದು. ಆದರೆ ಜನತಾದಳ(ಎಸ್) ಗೆ ಇಂತಹ ಮೈತ್ರಿಕೂಟದಲ್ಲಿದ್ದು ತಾನೊಂದು ಭಿನ್ನ ಹೇಗೆ ಎಂದು ಜನರೆದುರು ನಿಲ್ಲಲು ಅದಕ್ಕಾದರೂ ದೃಷ್ಟಿ ಇದೆಯೇ? ಅಂತಹ ದೃಷ್ಟಿಯೇ ಇಲ್ಲವಾದಲ್ಲಿ ಈ ಸರ್ಕಾರವನ್ನು ಸರಿಹಾದಿಗೆ ತರಲು ಸಾಧ್ಯವೇ? ಖಂಡಿತ ಇಲ್ಲ. ದೃಷ್ಟಿಹೀನತೆಯು ಎರಡೂ ಪಕ್ಷಗಳ ಆಡಳಿತ ಕರ್ನಾಟಕದ ರಾಜಕೀಯ ಭವಿಷ್ಯತ್ತು - ಜನತೆಯ ಸಂಕಟಗಳ ಹೊರೆ ಇಳಿಸಿ, ಪರಿಹಾರ ನೀಡುವಲ್ಲಿ ವಿಫಲವಾಗಿ ನಕಾರಾತ್ಮಕ ಫಲಿತಾಂಶ ತರಬಹುದು.

ಹೋಗಲಿ ಒಂದು ವಿಭಿನ್ನ ಆಡಳಿತ ನೀಡುವ ದಿಸೆಯಲ್ಲಿ ನಡೆದ ಪ್ರಯತ್ನಗಳೂ ನಿರಾಶದಾಯಕ. ಅಧಿವೇಶನದ ಪ್ರಥಮಾರಂಭದಲ್ಲೇ ರಾಜ್ಯಪಾಲರ ಭಾಷಣದ ಅಂಶಗಳನ್ನು ಗಮನಿಸಿದರೆ ಬದಲಾದ ಸನ್ನಿವೇಶಕ್ಕೆ ಹೊಂದಿಕೊಳ್ಳುವುದಾಗಿರಲಿಲ್ಲ ಮತ್ತು ಮುಖ್ಯವಾಗಿ ಜನಾದೇಶವನ್ನು ಕಿಂಚಿತ್ತು ಪರಿಗಣಿಸಿಯೇ ಇರಲಿಲ್ಲ. ಜನರಿಂದ ತಿರಸ್ಕರಿಸಲ್ಪಟ್ಟ ಹಿಂದಿನ ಎಸ್.ಎಂ.ಕೃಷ್ಣರ ನೇತೃತ್ವದ ಸರ್ಕಾರ ಹಳಸಲು ನೀತಿಯೇ ಪ್ರತಿಫಲನವಾಗಿತ್ತು. ಇಷ್ಟಾದ ಬಳಿಕ ಇಲ್ಲಿಯವರೆಗೂ 'ಕನಿಷ್ಟ ಸಾಮಾನ್ಯ ಕಾರ್ಯಕ್ರಮ' ಪ್ರಕಟವಾಗಿಲ್ಲ - ಅದು ರೂಪುಗೊಳ್ಳುತ್ತಿದೆ. ಮಂತ್ರಿಮಂಡಲವು ಪೂರ್ಣ ಪ್ರಮಾಣದಲ್ಲಿ ರಚಿತವಾಗಿಯೇ ಇಲ್ಲ. ಕಾರಣ ಮಂತ್ರಿ-ಖಾತೆ ಹಂಚಿಕೆಗೆ ಜಗಳ ನಡೆದೇ ಇದೆ. ಪರಿಣಾಮ ಆಡಳಿತ ದಕ್ಷವಾಗಿ ನಡೆಯಲು ಅಡ್ಡಿಯಾಗಿದೆ. ಜನರ ಕಷ್ಟ-ಸುಖಗಳಿಗೆ ಗಮನ ನೀಡುವುದು ನಿಂತುಹೋಗಿದೆ. ಜನರಿಗೆ ಪರಿಹಾರ ತರುವ ಅಂತಹ ಪ್ರಮುಖ ಪ್ರಕಟಣೆಗಳೂ ಹೊರಬಂದಿಲ್ಲ. ಏನಿದ್ದರೂ ಜನನಿಯೋಗಗಳು ಒಂದು ಮನವಿ ಕೊಟ್ಟಾಗ ಒಂದು ಭರವಸೆಯ ಹೇಳಿಕೆ ಅಷ್ಟೇ. ಈಗ ಬಜೆಟ್‌ನಲ್ಲಿ ಅಂತಹದ್ದೊಂದು ಪ್ರಕಟಿಸುವ ಭರವಸೆ ಇದೆ. ಕಣ್ಣುಮುಚ್ಚಿ ದಾನ ನೀಡುವಂತೆ ಇದು ಇದ್ದೀತೆ?

ಬಹಳ ಮುಖ್ಯವಾದ ಇನ್ನೊಂದು ಸಂಗತಿಯೆಂದರೆ, ಈ ಚುನಾವಣಾ ಫಲಿತಾಂಶದ ಕುರಿತ ಕಾಂಗ್ರೆಸ್ ಆಗಲಿ, ಜೆಡಿ(ಎಸ್) ಪಕ್ಷವಾಗಲಿ ವಿಮರ್ಶೆಗೆ ತೊಡಗದೇ ಇರುವುದು. ಸೋಲು-ಗೆಲುವು, ಸವಾಲುಗಳ ಬಗ್ಗೆ ವಿಮರ್ಶೆಯನ್ನು ಮಾಡಿಕೊಳ್ಳಲು ತಿರಸ್ಕರಿಸುವ ಮೂಲಕ ಗಂಭೀರವಾದ ರಾಜಕೀಯ ಪ್ರಮಾದವನ್ನು ಮಾಡಿದೆ. ಇದು ಎಂತಹ ಅನಾಹುತಕ್ಕೆ ಎಳೆಸಬಹುದು.

ಜನತೆಯ ಮನಸ್ಸನ್ನು ಅರಿತು, ಅದರಂತೆ ಕಾರ್ಯನಿರ್ವಹಿಸುವ ಕನಿಷ್ಟ ಪ್ರಜಾಸತ್ತಾತ್ಮಕ ಪರಿಪಾಠ ಅತ್ಯಗತ್ಯ. ಇದರ ತಿರಸ್ಕಾರವೆಂದರೆ ಜನತೆಯ ಹಿತಗಳ ತಿರಸ್ಕಾರ. ಹಿಂದಿನ ಸರ್ಕಾರದ ದಾರಿಯ ಕೊಂಡಿ ಕಡಿದುಕೊಂಡು ಭಿನ್ನ ಹಾದಿ ಹಿಡಿಯದೇ ಹೋಗುವ ವಿಫಲತೆ ಕೋಮುವಾದಿ ಶಕ್ತಿಗಳು ಮೇಲುಗೈ ಸಾಧಿಸಲು ಅವಕಾಶ ಕಲ್ಪಿಸಬಹುದು.

ಈ ಸನ್ನಿವೇಶದಲ್ಲಿ ಈಗಲಾದರೂ ಸ್ಪಷ್ಟಗುರಿಯೊಂದಿಗೆ ದಾರಿ ಕಂಡುಕೊಳ್ಳಬೇಕು. ಎದ್ದು ಬರುತ್ತಿರುವ ಜನರ ಸಮಸ್ಯೆ, ರಾಜಕೀಯ ಸವಾಲುಗಳನ್ನೆದುರಿಸಲು ಎಡ ಶಕ್ತಿಗಳ ಮಧ್ಯಪ್ರವೇಶ ಮಹತ್ವದ್ದಿದೆ.

ಯುಪಿಎ ಸರ್ಕಾರ ಸದವಕಾಶವೊಂದನ್ನು ಕಳೆದುಕೊಂಡಿದೆ. ಸ್ವದೇಶಿ ಮುಖವಾಡದ ವಾಜಪೇಯಿ ಸರ್ಕಾರ ವಿದೇಶಿ ಆರ್ಥಿಕ ನೀತಿಯಿಂದ ಮೋಸಕ್ಕೆ ಒಳಗಾದ ಜನ ನೀಡಿದ ಜನಾದೇಶಕ್ಕೆ ವಿರುದ್ಧವಾಗಿ ವಿದೇಶಿ ಹೂಡಿಕೆಯತ್ತ ಬಾಯ್ತೆರದ ಬಜೆಟ್ ಎಷ್ಟರ ಮಟ್ಟಿಗೆ ಸ್ವಾಗತಾರ್ಹ? ಎಷ್ಟರ ಮಟ್ಟಿಗೆ ಆಕ್ಷೇಪಾರ್ಹ?

ಯುಪಿಎ ದ ಮೊದಲ ಬಜೆಟ್

ಒಟ್ಟಾರೆಯಾಗಿ ಸ್ವಾಗತಾರ್ಹ, ಆದರೆ ವಿದೇಶಿ ಹೂಡಿಕೆ ಮಿತಿ ಹೆಚ್ಚಳ ಅನಗತ್ಯ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) 2004-05 ರ ಕೇಂದ್ರ ಬಜೆಟ್ "ಸುಮಾರಾಗಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮ'ಕ್ಕೆ ಅನುಗುಣವಾಗಿದೆ' ಎಂದು ಸ್ವಾಗತಿಸಿದೆ. ಆದರೆ ವಿಮೆ, ಟೆಲಿಕಾಂ ಹಾಗೂ ನಾಗರಿಕ ವಿಮಾನಯಾನ ವಲಯಗಳಲ್ಲಿ ನೇರ ವಿದೇಶಿ ಹೂಡಿಕೆಗಳ ಮೇಲಿನ ಮಿತಿ ಹೆಚ್ಚಳವನ್ನು ಟೀಕಿಸಿದೆ.

ಸಂಸತ್ತಿನಲ್ಲಿ ಬಜೆಟ್ ಮಂಡಿಸಿದ ಸ್ವಲ್ಪವೇ ಸಮಯದ ನಂತರ ಪ್ರಾಥಮಿಕ ಪ್ರತಿಕ್ರಿಯೆಯಾಗಿ ಒಂದು ಸುದ್ದಿ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ರಾಜ್ಯಸಭೆಯಲ್ಲಿ ಸಿಪಿಐ(ಎಂ)ನ ಮುಖಂಡ ನೀಲೋತ್ಪಲ ಬಸುರವರು ಇದು ಯುಪಿಎ ಸರ್ಕಾರದ ಮೊದಲ ಬಜೆಟ್ ಆಗಿದ್ದು ಅದರ ಒಟ್ಟಾರೆ ದಿಕ್ಕನ್ನು ಪಕ್ಷ ಸುಮಾರಾಗಿ ಸ್ವಾಗತಿಸುತ್ತದೆ ಎಂದಿದ್ದಾರೆ. ಏಕೆಂದರೆ ಅದು ಬಡವರು, ಸಾಮಾಜಿಕವಾಗಿ ಪ್ರತಿಕೂಲ ಸ್ಥಿತಿಯಲ್ಲಿರುವವರು ಹಾಗೂ ಸಾರ್ವತ್ರಿಕ ಶಿಕ್ಷಣದ ಬಗ್ಗೆ ಕಾಳಜಿ ತೋರಿಸಿದೆ, ಅಷ್ಟೇ ಅಲ್ಲ ಸಾಮಾಜಿಕ ಮೂಲರಚನೆಗೆ ಹಣ ಒದಗಿಸಬೇಕಾದ ಅಗತ್ಯವನ್ನು ಮನಗಂಡಿದೆ ಎಂದು ಅವರು ಹೇಳಿದರು.

ಎಲ್ಲಾ ತೆರಿಗೆಗಳ ಮೇಲೆ ಶೇ 2 ಮೇಲು ತೆರಿಗೆಗಳನ್ನು ವಿಧಿಸಿರುವುದನ್ನು ಸ್ವಾಗತಿಸಿದ ಬಸುರವರು ಆದಾಯ ತೆರಿಗೆ ರಿಯಾಯ್ತಿ ಮಿತಿಯನ್ನು ಹೆಚ್ಚಿಸಿರುವುದರಿಂದ ಯಾರಿಗೂ ತೊಂದರೆಯಾಗಬಾರದು ಎಂದಿದ್ದಾರೆ. ಈ ಮೇಲುತೆರಿಗೆಯಿಂದ ಸಂಗ್ರಹಿಸುವ 4500 ಕೋಟಿ ರೂ.ಗಳು ಸರ್ವಶಿಕ್ಷಣ ಅಭಿಯಾನ ಮತ್ತು ಮಧ್ಯಾಹ್ನದ ಊಟ ಯೋಜನೆಗಳ ಜಾರಿಯಲ್ಲಿ ಬಹಳಷ್ಟು ನೆರವಾಗಬಲ್ಲದು ಎಂದು ಅವರು ಆಶಿಸಿದರು.

ಆರೋಗ್ಯ ವಿಮಾ ಯೋಜನೆಗಳ ಪುನರ್ರಚನೆ ಹಾಗೂ ಅವುಗಳನ್ನು ಒದಗಿಸುವಲ್ಲಿ ಸ್ವಯಂಸೇವಾ ಗುಂಪುಗಳನ್ನು ಒಳಗೊಳ್ಳುವುನದನ್ನೂ ನಿಲೋತ್ಪಲ ಬಸುರವರು ಸ್ವಾಗತಿಸಿದರು. ಅಂತ್ಯೋದಯ ಅನ್ನ ಯೋಜನೆಯ ವ್ಯಾಪ್ತಿಯ ವಿಸ್ತರಣೆ, ಅದರಡಿ ಇನ್ನಷ್ಟು ಕುಟುಂಬಗಳನ್ನು ಒಳಗೊಳ್ಳುವುದು ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ನೇರಗೊಳಿಸುವುದು ಇವೆಲ್ಲಾ ಸ್ವಾಗತಾರ್ಹ ಕ್ರಮಗಳು ಎಂದು ಅವರು ಹೇಳಿದರು.

ಸಾರ್ವಜನಿಕ ವಲಯದ ಉದ್ದಿಮೆಗಳ ಪುನರ್ರಚನಾ ಮಂಡಳಿಯನ್ನು ಸ್ವಾಗತಿಸಿದ ಬಸುರವರು ಅದು ರೋಗಗ್ರಸ್ತ ಸಾರ್ವಜನಿಕ ವಲಯದ ಘಟಕಗಳನ್ನು ಆರೋಗ್ಯಪೂರ್ಣಗೊಳಿಸಲು ನೆರವಾಗುತ್ತದೆ ಎಂದರು.

ಆದರೆ ಕೆಲವು ವಲಯಗಳಲ್ಲಿ ವಿದೇಶಿ ನೇರ ಹೂಡಿಕೆಗಳ ಮೇಲಿನ ಮಿತಿಯನ್ನು ಹೆಚ್ಚಿಸಿರುವುದನ್ನು ಅವರು ಟೀಕಿಸಿದರು. ಏಕಪಕ್ಷೀಯವಾಗಿ ಇದನ್ನು ಹೆಚ್ಚಿಸಿರುವುದರಿಂದ ವ್ಯಾಪಾರ ಮಾತುಕತೆಗಳಲ್ಲಿ ದೇಶದ ಚೌಕಾಸಿ ಸಾಮರ್ಥ್ಯ ಕುಗ್ಗುತ್ತದೆ ಎಂದು ಅವರು ಅಭಿಪ್ರಾಯ ಪಟ್ಟರು. ಒಂದು ಮಹತ್ವದ ವಲಯವಾದ ವಿಮಾ ವಲಯದಲ್ಲಿ ವಿದೇಶಿ ಕಂಪನಿಗಳು ಭಾರತೀಯ ಜನತೆಯ ಅಗತ್ಯಗಳನ್ನೇನೂ ಪೂರೈಸಿಲ್ಲ ಎಂದು ಅವರು ಹೇಳಿದರು.

ಟೆಲಿಕಾಂ ವಲಯದಲ್ಲೂ, ಪ್ರಸ್ತಾವಿತ ಮಿತಿಗಳನ್ನು ಜಾರಿಗೊಳಿಸಿದರೆ ಸಂಪೂರ್ಣ ಮಾಲಕತ್ವದ ಖಾಸಗಿ ಕಂಪನಿಗಳು ಬಂದು ಈ ವಲಯದಲ್ಲಿ ಈಗಾಗಲೇ ಇರುವ ಗ್ರಾಮೀಣ - ನಗರ ಅಂತರವನ್ನು ಹೆಚ್ಚಿಸುತ್ತದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು. ಈಗಲೇ ಗ್ರಾಮೀಣ ಪ್ರದೇಶದ ಪ್ರತಿ ಒಂದು ಟೆಲಿಫೋನ್‌ಗೆ ನಗರದಲ್ಲಿ 11 ಟೆಲಿಫೋನ್‌ಗಳಿವೆ ಎಂಬುದರತ್ತ ಅವರು ಗಮನ ಸೆಳೆದರು.



ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಬಜೆಟ್ ಕುರಿತು ನೀಡಿರುವ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ.

ಬಜೆಟ್ 2004-05 ರ ಕುರಿತು ಸಿಪಿಐ(ಎಂ) ಪೊಲಿಟ್‌ಬ್ಯೂರೋ

ಪ್ರಧಾನ ಮಂತ್ರಿಗಳ ಭಾಷಣ ಕೃಷಿ ಅಭಿವೃದ್ಧಿ, ಉದ್ಯೋಗವಕಾಶ ನಿರ್ಮಾಣ, ಆರೋಗ್ಯ, ಶಿಕ್ಷಣ ಮತ್ತು ಗ್ರಾಮೀಣ ಬಡವರ ಒಟ್ಟಾರೆ ಪರಿಸ್ಥಿತಿಗಳ ಬಗ್ಗೆ ಅವರ ಆತಂಕವನ್ನು ಸೂಚಿಸಿದೆ. ತೆರಿಗೆಗಳ ಮೇಲೆ ಶೇ 2 ಮೇಲು ತೆರಿಗೆಯನ್ನು ಶಿಕ್ಷಣ ವಲಯದ ಖರ್ಚಿಗೆ ತೆಗೆದಿಟ್ಟಿರುವುದು ಸ್ವಾಗತಾರ್ಹ. ಇತರ ಸಕಾರಾತ್ಮಕ ಕ್ರಮಗಳಲ್ಲಿ ಗ್ರಾಮೀಣ ಮೂಲರಚನೆ ಅಭಿವೃದ್ಧಿ ನಿಧಿಯನ್ನು ಪುನರುಜ್ಜೀವನ ಗೊಳಿಸಿರುವುದು, ನೀರಿನ ಆಗರಗಳ ರಿಪೇರಿಯ ಪ್ರಸ್ತಾವಗಳು ಮತ್ತು ರಾಷ್ಟ್ರವ್ಯಾಪಿ ನೀರು ಸಂಗ್ರಹ ಕಾರ್ಯತಂತ್ರ ಇತ್ಯಾದಿ ಸೇರಿವೆ. ಮೂರು ವರ್ಷಗಳಲ್ಲಿ ಕೃಷಿ ವಲಯದಲ್ಲಿ ಸಿಗುವ ಸಾಲ ಪ್ರಮಾಣವನ್ನು ದ್ವಿಗುಣ ಗೊಳಿಸುವ ಆಶಯ ಒಂದು ಬಜೆಟ್ ಕ್ರಮ ವಲ್ಲದಿದ್ದರೂ ಸರಿಯಾದ ದಿಕ್ಕಿನಲ್ಲಿ ಇಟ್ಟ ಒಂದು ಹೆಜ್ಜೆ.

ಸಾರ್ವಜನಿಕ ವಲಯದ ಉದ್ದಿಮೆಗಳ ಪುನರ್ರಚನಾ ಮಂಡಳಿಯ ರಚನೆಯಿಂದಾಗಿ ರೋಗಗ್ರಸ್ತ ಸಾರ್ವಜನಿಕ ವಲಯದ ಘಟಕಗಳ ಪುನರುಜ್ಜೀವನಕ್ಕೆ ದಾರಿಯಾಗುತ್ತದೆ ಎಂದು ಆಶಿಸಬಹುದು. ಕೇಂದ್ರ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ 14194 ಕೋಟಿ ರೂ. ಬಂಡವಾಳ ಬೆಂಬಲದ ಪ್ರಸ್ತಾಪವೂ ಸಾರ್ವಜನಿಕ ವಲಯದ ಆರೋಗ್ಯದ ಬಗ್ಗೆ ಕಾಳಜಿಯನ್ನು ತೋರಿಸುತ್ತದೆ. ಆದರೆ ಈ ಸಂದರ್ಭದಲ್ಲಿ ಎಲ್‌ಟಿಪಿಸಿಯ ಶೇರುಗಳ ವಿಕ್ರಯದ ನಿರ್ಣಯ ಕಳವಳಕಾರಿ.

ಇನ್ನು ಗ್ರಾಮೀಣ ಉದ್ಯೋಗ ಯೋಜನೆಗಳು, ಅಂತ್ಯೋದಯ ಅನ್ನ ಯೋಜನೆ ಇತ್ಯಾದಿ ಮಹತ್ವದ ಕಾರ್ಯಕ್ರಮಗಳಿಗೆ ನೀಡಿರುವ ಹಣ ಹಿಂದಿನ ಸರ್ಕಾರದ ಮಧ್ಯಂತರ ಬಜೆಟ್‌ನಲ್ಲಿ ಈಗಾಗಲೇ ನೀಡಿದ್ದಕ್ಕಿಂತ ಹೆಚ್ಚೇನೂ ಇಲ್ಲ. ಆದರೆ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಹೇಳಿರುವ ಆದ್ಯತೆಗಳಿಂದಾಗಿ ಈ ಎಲ್ಲಾ ಬಾಬ್ತುಗಳಿಗೆ, ಮುಖ್ಯವಾಗಿ ಗ್ರಾಮೀಣ ವಲಯಕ್ಕೆ ಇನ್ನೂ ಹೆಚ್ಚು ಹಣ ನೀಡುವ ನಿರೀಕ್ಷೆಯಿತ್ತು. ರೂ. 1000 ಕೋಟಿ ರೂ.ಗಳ ಕೇಂದ್ರ ಯೋಜನೆಗೆ ಬಜೆಟ್ ಬೆಂಬಲವನ್ನು ಹೆಚ್ಚಿಸಿರುವುದು ಸ್ವಾಗತಾರ್ಹವಾದರೂ, ಅದು ಸಾಕಷ್ಟಿಲ್ಲ, ಇಂತಹ ಖರ್ಚಿನಲ್ಲಿ ಇನ್ನಷ್ಟು ಹೆಚ್ಚಳ ಅಗತ್ಯವಾಗುತ್ತದೆ.

ವಾರ್ಷಿಕ ಆದಾಯ ರೂ. 1 ಲಕ್ಷಕ್ಕಿಂತ ಕಡಿಮೆಯಿರುವವರಿಗೆ ತೆರಿಗೆಯಿಂದ ವಿನಾಯ್ತಿ ನೀಡಿ ಮಧ್ಯಮವರ್ಗಗಳಿಗೆ ಸ್ವಲ್ಪ ಪರಿಹಾರ ನೀಡಲಾಗಿದೆ. ಪಿಪಿಎಫ್, ಜಿಪಿಎಫ್ ಮತ್ತು ವಿಶೇಷ ಠೇವಣಿ ಯೋಜನೆಗಳ ಮೇಲೆ ಶೇ 8 ಬಡ್ಡಿಯನ್ನೇ ಮುಂದುವರಿಸಿರುವುದು ಮತ್ತು ಇಇಟಿಯ ಅನ್ವಯ ನೌಕರರ ಮತ್ತು ನಿವೃತ್ತಿದಾರರ ಹಿತಾಸಕ್ತಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ಸೇವಾ ತೆರಿಗೆಗಳನ್ನು ಇನ್ನಷ್ಟು ಚಟುವಟಿಕೆಗಳಿಗೆ ವಿಸ್ತರಿಸಿರುವುದು ಹಾಗೂ ತೆರಿಗೆ ದರದಲ್ಲಿ ತುಸು ಹೆಚ್ಚಳ ಒಂದು ಸಕಾರಾತ್ಮಕ ಕ್ರಮ. ಶೇರು ಮಾರುಕಟ್ಟೆ ವ್ಯವಹಾರಗಳ ಮೇಲೆ ಮೊದಲ ಬಾರಿಗೆ ತೆರಿಗೆ ಹಾಕಿರುವುದು ಸ್ವಾಗತಾರ್ಹ. ಆದಾಯ ತೆರಿಗೆ ದರ ಬಹಳ ಕಮ್ಮಿಯಾಯ್ತು. ಆದರೆ ದೀರ್ಘಾವಧಿ ಬಂಡವಾಳ ಲಾಭಗಳ ಮೇಲೆ ತೆರಿಗೆಯನ್ನು ತೆಗೆದುಹಾಕುವ ಅಗತ್ಯವಿರಲಿಲ್ಲ. ಬದಲಿಗೆ ಅನುಷ್ಠಾನವನ್ನು ಇನ್ನಷ್ಟು ಪರಿಣಾಮಕಾರಿಯಾಗಿಸ ಬಹುದಿತ್ತು.

ಖರ್ಚಿನಲ್ಲಿ ಕಡಿತ ಬರದಿರಲಿ

ತೆರಿಗೆ ಬಾಕಿಯಿಂದ ಸಾಕಷ್ಟು ಪ್ರಮಾಣದಲ್ಲಿ ವಸೂಲಿಯಾಗಬಹುದು ಎಂಬ ಆಶಯ ಈ ಬಜೆಟ್ ಕಸರತ್ತಿನ ಹಿಂದೆ ಇದೆ. ಆದರೆ ಹಾಗಾಗದಿದ್ದರೆ ಜನತೆಯ ಕಲ್ಯಾಣವನ್ನು ಉತ್ತಮಗೊಳಿಸುವುದಕ್ಕೆ ಅಗತ್ಯವಾದ ಹಣ ಸಿಗಲಿಕ್ಕಿಲ್ಲ. ಏನೇ ಆಗಲಿ, ಹಣಕಾಸು ಮಂತ್ರಿಗಳು ಇಂತಹ ಖರ್ಚುಗಳನ್ನು ರಕ್ಷಿಸಬೇಕು, ಭರವಸೆ ನೀಡಿದಂತೆ ವಿಸ್ತರಿಸಬೇಕು ಇದು ಅನಿವಾರ್ಯ.

ಕೇಂದ್ರವು ರಾಜ್ಯಗಳಿಗೆ ನೀಡಿದ ಸಾಲಗಳ ಬಡ್ಡಿ ದರವನ್ನು ಶೇ. 10.5 ರಿಂದ ಶೇ 9 ಕ್ಕೆ ಇಳಿಸಿರುವುದು ಒಂದು ಅಗತ್ಯ ಕ್ರಮ. ಆದರೆ ಈ ಇಳಿಕೆ ಇನ್ನೂ ಹೆಚ್ಚಿರಬಹುದಿತ್ತು. ಅಲ್ಲದೇ ರಾಜ್ಯ ಸರ್ಕಾರಗಳ ಹಳೆಯ ಸಾಲಗಳ ಬಗ್ಗೆ ಪ್ರಸ್ತಾಪಿಸಿರುವ ಕ್ರಮಗಳು ಸಾಕಷ್ಟು ಇಲ್ಲ. ಯೋಜನಾ ಆಯೋಗ ಸಣ್ಣ ಉಳಿತಾಯ ಗಳಲ್ಲದ ಸಾಲವನ್ನು ಮನ್ನಾ ಮಾಡಬೇಕು ಎಂದು ಸೂಚಿಸಿತ್ತು. ಅದನ್ನು ಮಾಡಿಲ್ಲವಷ್ಟೇ ಅಲ್ಲ, ಈಗ ಈ ಬಗ್ಗೆ ಇಟ್ಟಿರುವ ಪ್ರಸ್ತಾವಗಳು ತೀರಾ ಅಸಮರ್ಪಕ.

ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಗುರಿಗಳನ್ನು ಈಡೇರಿಸುವಲ್ಲಿ ರಾಜ್ಯ ಸರ್ಕಾರಗಳು ಒಂದು ಮಹತ್ವದ ಪಾತ್ರವನ್ನು ವಹಿಸಬೇಕಾದ್ದರಿಂದ ಅವುಗಳ ಹಣಕಾಸು ಶಕ್ತಿಯನ್ನು ಬಲಪಡಿಸುವುದು ಅತ್ಯಗತ್ಯ.

ಹಣಕಾಸು ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣೆ ಕಾನೂನು, 2003 ರೆವಿನ್ಯೂ ಮತ್ತು ಹಣಕಾಸು ಕೊರತೆಗಳ ಮೇಲೆ ಏನೇನೋ ಮಿತಿಗಳನ್ನು ಹಾಕಿದೆ. ಇದರ ಹಿಂದಿನ ಸಿದ್ಧಾಂತ ಪ್ರಶ್ನಾರ್ಹವಾಗಿದೆ. ಆದರೆ ಹಣಕಾಸು ಮಂತ್ರಿಗಳು ಇದಕ್ಕೆ ಬದ್ಧರಾಗಿರುವುದರಿಂದ ಕೇಂದ್ರ ಸರ್ಕಾರ ಮಾಡಬೇಕಾದ ಅಗತ್ಯ ಖರ್ಚುಗಳ ಮೇಲೂ ಮಿತಿ ಬಿದ್ದಿದೆ.

ಅಸಮರ್ಥನೀಯ ಕ್ರಮಗಳು

ಬಜೆಟ್ ಭಾಷಣದಲ್ಲಿ ಪ್ರಕಟಿಸಿದ ಕೆಲವು ಕ್ರಮಗಳು ಅಸಮರ್ಥನೀಯ ಹಾಗೂ ಆಂತರಿಕ ಸಂಗತಿಗಳು. ಟೆಲಿಕಾಂ, ವಿಮೆ ಮತ್ತು ನಾಗರಿಕ ವಿಮಾನಯಾನದ ಮೂರು ನಿರ್ಣಾಯಕ ವಲಯಗಳಲ್ಲಿ ನೇರ ವಿದೇಶಿ ಹೂಡಿಕೆಯ ಮಿತಿಯನ್ನು ಏರಿಸುವ ನಿರ್ಣಯದಿಂದಾಗಿ ಈ ಮಹತ್ವದ ವಲಯಗಳ ಮೇಲೆ ರಾಷ್ಟ್ರೀಯ ಹತೋಟಿ ಕಡಿಮೆಯಾಗುತ್ತದೆ ಹಾಗೂ ವಿದೇಶಿ ವಿನಿಮಯ ಲಾಭದ ಪಾವತಿ ರೂಪದಲ್ಲಿ ದೇಶದಿಂದ ಹೊರಹರಿದು ಹೋಗುತ್ತದೆ. ಟೆಲಿಕಾಂ ವಲಯ ಭದ್ರತೆಯ ದೃಷ್ಟಿಯಿಂದ ಒಂದು ಸೂಕ್ಷ್ಮ ವಲಯ. ಅಲ್ಲಿ ವಿದೇಶೀ ಕಂಪನಿಗಳಿಗೆ ಶೇ 74 ಪಾಲಿಗೆ ಅವಕಾಶ ನೀಡುವ ಅಗತ್ಯವೇನೂ ಇಲ್ಲ. ವಿಮಾ ವಲಯದಲ್ಲಿ ಶೇ 49 ಮಿತಿ ಹಿಂದಿನ ಸರ್ಕಾರ ಹಾಕಿದ ಮಿತಿಗಿಂತ ಬಹಳ ಮುಂದೆ ಹೋಗಿದೆ. ಕೆಲವು ವಲಯಗಳಲ್ಲಿ ಆಂತರಿಕ ಸಾಲ ಪತ್ರಗಳಲ್ಲಿ ಮತ್ತು ಸೆಕ್ಯೂರಿಟಿಗಳಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆಗಳ ಮಿತಿಯಲ್ಲಿ ಹೆಚ್ಚಳ ಮತ್ತು ಬ್ಯಾಂಕುಗಳು ಬಂಡವಾಳ ಮಾರುಕಟ್ಟೆಗೆ ಇನ್ನೂ ಹೆಚ್ಚು ಪ್ರಮಾಣದಲ್ಲಿ ಹೋಗಲು ಅವಕಾಶದಂತಹ ಕ್ರಮಗಳು ಚಂಚಲತೆ ಹೆಚ್ಚಿಸಬಹುದೇ ಹೊರತು ಅದರಿಂದ ದೇಶದ ಆರ್ಥಿಕಕ್ಕೇನೂ ಲಾಭವಾಗುವುದಿಲ್ಲ. ವಿದೇಶಿ ಸಾಂಸ್ಥಿಕ ಹೂಡಿಕೆಗಳು 'ಭಾರತವನ್ನು ತಮ್ಮ ಡಾಲರುಗಳ ತಾತ್ಕಾಲಿಕ ನಿಲ್ದಾಣಗಳಾಗಿ ಬಳಸುತ್ತವೆಯಷ್ಟೇ' ಎಂಬುದು ಸ್ವಯಂ ವೇದ್ಯವಾಗಿರುವಾಗ, ಅವು ಹೂಡಿಕೆ ದರಗಳನ್ನೇನೂ ಹೆಚ್ಚಿಸಿಲ್ಲವಾದ್ದರಿಂದ ಅವಕ್ಕೆ ಇನ್ನಷ್ಟು ಪ್ರೋತ್ಸಾಹ ನೀಡುವ ಅಗತ್ಯವೇನೂ ಇಲ್ಲ.


ಸಂಯುಕ್ತ ಪ್ರಗತಿಶೀಲ ಮೈತ್ರಿಕೂಟದ ಈ ಮೊದಲ ಬಜೆಟ್ಟನ್ನು ಜನತೆ ಲೋಕಸಭಾ ಚುನಾವಣೆಗಳಲ್ಲಿ ನೀಡಿದ ತೀರ್ಮಾನದ ಹಿನ್ನೆಲೆಯಲ್ಲಿ ನೋಡಬೇಕು. ಜನತೆಯ ಹಿತಾಸಕ್ತಿಗಳಿಗೆ ಅನುಗುಣವಾಗಿರದ ಬಜೆಟ್ ಪ್ರಸ್ತಾವಗಳನ್ನು ಸಿಪಿಐ(ಎಂ) ಸರ್ಕಾರದ ಬಳಿ ಎತ್ತಿಕೊಳ್ಳುತ್ತದೆ. ಈ ಪ್ರಶ್ನೆಗಳಲ್ಲಿ ಜನತೆಯ ಬೆಂಬಲವನ್ನು ಅಣಿನೆರೆಸಲು ಅದು ಜನರ ಬಳಿ ಹೋಗುತ್ತದೆ.

ಅನುಕಂಪದ ಅನ್ವೇಷಣೆಯಲ್ಲಿ ನಕ್ಸಲೀಯರು

ಕರ್ನಾಟಕದಲ್ಲಿ ನಕ್ಸಲೀಯರು ಸುದ್ದಿಯಾಗಬಯಸಿದ್ದಾರೆ. ಅದೊಂದು ಬೆಳೆಯುವ ಚಳುವಳಿಯೇ ? ಅಥವಾ ದಾರಿಯ ಕೊನೆಯೇ?

ನಿತ್ಯಾನಂದಸ್ವಾಮಿ

ಅಂದು ಕಾರ್ಕಳದ ಹೊಸ್ಮಾರು ಬಳಿಯ ಈದು ಗ್ರಾಮದಲ್ಲಿ ಪಾರ್ವತಿ ಮತ್ತು ಹಾಜಿಮಾ ಎಂಬ ನಕ್ಸಲೀಯ ಯುವತಿಯರನ್ನು ಕರ್ನಾಟಕದ ಪೊಲೀಸರು ಗುಂಡು ಹಾರಿಸಿ ನಿರ್ದಯವಾಗಿ ಕೊಂದು ಹಾಕಿದ್ದಾಗ ಮರುಗದಿದ್ದವರು ಯಾರೂ ಇರಲಿಲ್ಲ. ನಕ್ಸಲೀಯರನ್ನು ಒಪ್ಪದವರು ಸಹ ಪೊಲೀಸರ ಕ್ರೌರ್ಯವನ್ನು ಖಂಡಿಸಿದ್ದರು. ಅವರು ಕೈಯಲ್ಲಿ ಶಸ್ತ್ರವನ್ನು ಹಿಡಿದಿದ್ದರು ಎನ್ನುವುದನ್ನು ಬಿಟ್ಟರೆ ಬೇರೆ ಯಾವ ಅಪರಾಧವನ್ನು ಮಾಡಿರುವ ಬಗ್ಗೆ ಎಲ್ಲಿಯೂ ದೂರುಗಳು ದಾಖಲಾಗಿರಲಿಲ್ಲ. ಶಸ್ತ್ರ ಹಿಡಿದಿರುವುದು ಕಾನೂನುಬಾಹಿರವಾಗಿದ್ದರೆ, ಅಂತಹವರನ್ನು ಕಾನೂನು ಕ್ರಮಕ್ಕೆ ಒಳಪಡಿಸಬೇಕೇ ಹೊರತು ಎನ್‌ಕೌಂಟರ್ ಹೆಸರಿನಲ್ಲಿ ಸಾಯಿಸುವುದು ಯಾವ ಕಾರಣಕ್ಕೂ ಸಮರ್ಥನಿಯವಲ್ಲ ಎಂದು ಒಕ್ಕೊರಲಿನಿಂದ ಖಂಡಿಸಲಾಗಿತ್ತು. ಹೀಗೆ ನಕ್ಸಲೀಯರ ಸಿದ್ಧಾಂತವನ್ನು ಅರಿತವರ ಮತ್ತು ಅರಿಯದಿರುವವರ ಅನುಕಂಪದ ಹೊಳೆ ಏಕಭಾವದಿಂದ ಹರಿದಿತ್ತು.



ಆದರೆ ಇತ್ತೀಚಿಗೆ, ಪಶ್ಚಿಮ ಘಟ್ಟದ ಪ್ರದೇಶಗಳಲ್ಲಿ ನೆಲೆ ಮಾಡಿಕೊಂಡಿದ್ದಾರೆ ಎನ್ನಲಾದ ನಕ್ಸಲೀಯರು ಕೆಲವು ಪ್ರಮುಖ ಪತ್ರಕರ್ತರನ್ನು ಕಾಡಿಗೆ ಕರೆಯಿಸಿಕೊಂಡು ಪತ್ರಿಕಾ ಗೋಷ್ಠಿ ನಡೆಸಿದ್ದನ್ನು ನೋಡಿದರೆ, ಜನರ ಅನುಕಂಪವನ್ನು ಬಂಡವಾಳ ಮಾಡಿಕೊಳ್ಳಲು ಹೊರಟಂತೆ ಕಾಣುತ್ತದೆ. ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳಿಂದ ಅದು ಸ್ಪಷ್ಟವಾಗುತ್ತದೆ. ಪತ್ರಕರ್ತರು ತುಂಬಾ ಭಾವುಕರಾಗಿಯೇ ಬರೆದಿದ್ದಾರೆ. ದಟ್ಟವಾದ ಕಾಡು, ಸುರಿಯುತ್ತಿದ್ದ ಮಳೆ, ಹರಿಯುತ್ತಿದ್ದ ಹಳ್ಳಗಳು, ಇಂಬಳಗಳ ಅಪ್ಪುಗೆಯನ್ನೊಳಗೊಂಡ ಪರಿಸರವು ಅವರ ಮೇಲೆ ಗಾಢವಾದ ಪ್ರಭಾವ ಬೀರಿರುವುದರಲ್ಲಿ ಅತಿಶಯವೇನಿಲ್ಲ. ಅವರನ್ನು ಕರೆದೊಯ್ದ ವಾಹನವು ಹಾದು ಹೋದ ಸ್ಥಳಗಳನ್ನು ರಹಸ್ಯವಾಗಿಯೇ ಇಟ್ಟಿರುವುದನ್ನು ಗಮನಿಸಿದರೆ ಅದೊಂದು ಮೊದಲೇ ನಿರ್ಧರಿಸಲ್ಪಟ್ಟ ಒಪ್ಪಂದ ಎಂದು ವ್ಯಕ್ತವಾಗುತ್ತದೆ.

ಎಲ್ಲವೂ ರಹಸ್ಯವಾಗಿರುವಂತೆ ನೋಡಿಕೊಳ್ಳುವುದರಲ್ಲಿ ನಕ್ಸಲೀಯರು ನಿಪುಣರು. ಅವರು ತಮ್ಮ ಹೆಸರುಗಳನ್ನು ಬದಲಾಯಿಸಿಕೊಂಡು ಓಡಾಡುತ್ತಾರೆ. ತಮ್ಮ ನೆಲೆಗಳ ಗೌಪ್ಯತೆಯನ್ನು ಕಟ್ಟುನಿಟ್ಟಾಗಿ ಕಾಪಾಡಿಕೊಂಡು ಹೋಗುತ್ತಾರೆ. ತಮ್ಮ ಸುತ್ತ ನಿಗೂಢತೆಯ ಒಂದು ಪ್ರಭಾವಳಿಯನ್ನೇ ಸೃಷ್ಟಿಸಿ ತಮ್ಮತ್ತ ಒಂದು ಭಾವನಾತ್ಮಕವಾದ ಆಕರ್ಷಣೆಯನ್ನು ಉಂಟುಮಾಡುತ್ತಾರೆ. ಎಂತಹ ದುರ್ಗಮವಾದ ಸ್ಥಳಗಳಲ್ಲಿ ಅವರು ನೆಲೆಸುತ್ತಾರೆ, ಅವರ ದಿನಚರಿ ಹೇಗಿರುತ್ತದೆ ಎಂಬುದನ್ನು ಪತ್ರಕರ್ತರ ಮೂಲಕ ನಾಡಿನ ಜನಗಳಿಗೆ ತೋರಿಸಿ ಆ ಮೂಲಕ ಅವರ ಸಹಾನುಭೂತಿಯನ್ನು ಸಂಪಾದಿಸಲು ಇದೊಂದು ವಿನೂತನ ಪ್ರಯೋಗ.

ಎಡ ಸಾಹಸವಾದದ ದಾರಿ : ಬಡತನ, ನೋವು ಬಂಡವಾಳಶಾಹಿ ಸುಲಿಗೆ, ಭೂಮಾಲೀಕರ ಶೋಷಣೆ, ಪೊಲೀಸ್ ದೌರ್ಜನ್ಯಗಳಿಂದ ಆಘಾತಕ್ಕೊಳಗಾಗಿ, ಸೇಡು ತೀರಿಸಿಕೊಳ್ಳುವ ಛಲ ತೊಟ್ಟು ಇಂತಹ ಸಶಸ್ತ್ರ ಪಡೆಗಳಲ್ಲಿ ಭರ್ತಿಯಾಗುವ ನಮ್ಮ ಯುವಕ ಯುವತಿಯರಲ್ಲಿ ಕಂಡುಬರುತ್ತಿರುವ ಸಾಹಸದ ಪ್ರವೃತ್ತಿಯನ್ನು ಅವಹೇಳನ- ಮಾಡುವ ಪ್ರಶ್ನೆ ಇಲ್ಲ. ಅನ್ಯಾಯದ ವಿರುದ್ಧದ ಅವರ ರೊಚ್ಚು, ಶೋಷಿತರ ಪರವಾದ ಅವರ ಕಾಳಜಿ ಅಮೋಘವಾದದ್ದೇ. ಆದರೆ ಈ ದಮನಕಾರಿ ಪ್ರಭುತ್ವದಿಂದ ನನಗೆ ಆಗಿರುವ ಅನ್ಯಾಯದ ಸೇಡು ತೀರಿಸಿಕೊಳ್ಳಲು ಈ ಪ್ರಭುತ್ವದ ಯಾವನೊಬ್ಬ ಪ್ರತಿನಿಧಿಯನ್ನು ನನ್ನ ಕೈಯಲ್ಲಿರುವ ಕೋವಿಯಿಂದ ಬಲಿತೆಗೆದುಕೊಳ್ಳುವ ದಾರಿ ಎಷ್ಟರ ಮಟ್ಟಿಗೆ ಸರಿ ಎಂಬುದು ಇಲ್ಲಿ ಪ್ರಶ್ನೆ. ಇಂತಹ ವೈಯಕ್ತಿಕ ಅಥವಾ ಒಂದು ಗುಂಪಿನ ಸಾಹಸದಿಂದ ದಮನಕಾರೀ ಪ್ರಭುತ್ವ ಕೊನೆಗೊಳ್ಳುವುದಿಲ್ಲ. ಇದು ವೈಯಕ್ತಿಕ ನೆಲೆಗಟ್ಟಿನ ಭಯೋತ್ಪಾದನೆ ಅಷ್ಟೇ ಆಗುತ್ತದೆ. ಶೋಷಿತ ಜನತೆ ಅದನ್ನು ಅರ್ಥ ಮಾಡಿಕೊಳ್ಳುವುದರ ಒಳಗಾಗಿ ಅದು ಪ್ರಭುತ್ವದ ಕ್ರೌರ್ಯಕ್ಕೆ ಬಲಿಯಾಗಿ ನಾಶವಾಗುತ್ತದೆ. ಪಾರ್ವತಿ ಮತ್ತು ಹಾಜಿ ಮಾಳಿಗೆ ಆದಂತೆ, ಅನ್ಯಾಯದ ವಿರುದ್ಧ ಸಿಡಿದೆದ್ದ ನಮ್ಮ ಯುವಕ ಯುವತಿಯರ ಅಮೂಲ್ಯ ಜೀವ ವ್ಯರ್ಥವಾಗುತ್ತದೆ. ಆ ನಂತರ ಉಳಿದವರು, ಜನರಿಲ್ಲದ ಜಾಗದಲ್ಲಿ ಕುಳಿತು, ಅವರ ತ್ಯಾಗ ಬಲಿದಾನದ ಕುರಿತು ಕವನ ರಚಿಸಿ ಹಾಡುತ್ತಾರೆ.

ಪ್ರಭುತ್ವದ ರುಚಿಯುಂಡ ಶೋಷಕ ವರ್ಗಗಳು ತಾವಾಗಿಯೇ ಪ್ರಭುತ್ವವನ್ನು ತ್ಯಜಿಸುವುದಿಲ್ಲ ನಿಜ. ಅವರ ಕೈಯಿಂದ ಪ್ರಭುತ್ವವನ್ನು ಕಿತ್ತುಕೊಳ್ಳುವುದೊಂದೇ ದಾರಿ. ಇದುವೇ ಕ್ರಾಂತಿ. ಕ್ರಾಂತಿಯನ್ನು ಪಶ್ಚಿಮ ಘಟ್ಟಗಳಲ್ಲಿ ಅವಿತುಕೊಂಡು ಕೆಲವರೇ ಗುಟ್ಟಾಗಿ ನಡೆಸಲು ಸಾಧ್ಯವಿಲ್ಲ. ಜನ ಕ್ರಾಂತಿ ಮಾಡುತ್ತಾರೆ. ಜನ ಇತಿಹಾಸ ನಿರ್ಮಿಸುತ್ತಾರೆ. ವಸ್ತುನಿಷ್ಠ ಪರಿಸ್ಥಿತಿ ಪಕ್ವವಾದಾಗ, ಜನತೆ ಕ್ರಾಂತಿಯ ದಾರಿಯಲ್ಲಿ ಚಲಿಸಲು ಆರಂಭಿಸುತ್ತಾರೆ. ಆಗ ಶಸ್ತ್ರವನ್ನು ಕೈಗೆತ್ತಿಕೊಳ್ಳುವುದನ್ನೂ ಅವರು ನಿರ್ಧರಿಸುತ್ತಾರೆ. ವೈಯಕ್ತಿಕವಾಗಿ ಶಸ್ತ್ರವನ್ನು ಕೈಗೆತ್ತಿಕೊಳ್ಳುವುದು ಕೇವಲ ಭಯೋತ್ಪಾದನೆಯಾಗುತ್ತದೆ. ಶೋಷಕ ಪ್ರಭುತ್ವದ ವಿರುದ್ಧ ದಂಗೆಯೆದ್ದ ಜನತೆ ಶಸ್ತ್ರವನ್ನು ಕೈಗೆತ್ತಿಕೊಂಡಾಗ ಅದು ಕ್ರಾಂತಿಯ ಸಾಧನವಾಗುತ್ತದೆ.

ಪಾಲೆಸ್ತೀನ್ ಜನತೆ ಸಾಮ್ರಾಜ್ಯಶಾಹಿ ಬೆಂಬಲದ ಇಸ್ರಾಯೇಲ್ ದಮನದ ವಿರುದ್ಧ ದಂಗೆ ಎದ್ದಿದೆ. ತಮ್ಮ ತಾಯ್ನಾಡಿಗಾಗಿ ಅವರು ಶಸ್ತ್ರಗಳನ್ನು ಹಿಡಿದುಕೊಂಡು ಹೋರಾಡುತ್ತಿದ್ದಾರೆ. ಅವರದೊಂದು ಕ್ರಾಂತಿಕಾರಿ ಹೋರಾಟವಾಗಿದೆ. ರಷ್ಯಾ, ಚೀನಾ, ವಿಯೆಟ್‌ನಾಂ, ಕ್ಯೂಬಾ ಮೊದಲಾದ ದೇಶಗಳಲ್ಲಿ ಜನತೆ ಸಶಸ್ತ್ರ ಹೋರಾಟಗಳ ಮೂಲಕವೇ ಸಮಾಜವಾದಿ ಕ್ರಾಂತಿಯನ್ನು ಯಶಸ್ವಿಗೊಳಿಸಿದ್ದಾರೆ. ದಕ್ಷಿಣ ಆಫ್ರಿಕಾದಂತಹ ರಾಷ್ಟ್ರಗಳ ರಾಷ್ಟ್ರೀಯ ವಿಮೋಚನಾ ಹೋರಾಟಗಳು ಸಹ ಸಶಸ್ತ್ರ ಹೋರಾಟಗಳೇ. ಕ್ರಾಂತಿಗಳ ಸಂದರ್ಭದಲ್ಲಿ ಜನತೆ ಕ್ರಾಂತಿಕಾರಿ ಪಕ್ಷವೊಂದರ ಸ್ಪಷ್ಟ ಮಾರ್ಗದರ್ಶನದ ಅಡಿಯಲ್ಲಿ ಕೈಯಲ್ಲಿ ಅಸ್ತ್ರವನ್ನು ಹಿಡಿದು ಗೆರಿಲ್ಲಾ ಹೋರಾಟಗಳಲ್ಲಿ ತೊಡಗುತ್ತದೆ. ಅದೆಲ್ಲವೂ ಕ್ರಾಂತಿಕಾರಿ ಶಕ್ತಿಗಳನ್ನು ಬಲಪಡಿಸುತ್ತಾ ಪರಿಣಾಮಕಾರಿಯಾಗಿಸುತ್ತಾ ಹೋಗುತ್ತದೆ. ವೈಯಕ್ತಿಕ ಧೈರ್ಯ, ಸಾಹಸ, ತ್ಯಾಗ ಮನೋಭಾವಕ್ಕೆ ಗರಿಷ್ಠವಾದ ಆದ್ಯತೆ ಇದೆ. ದೇಶಪ್ರೇಮದಿಂದ ಹಾಗೂ ಶೋಷಣೆಯ ವಿರುದ್ಧದ ಆಕ್ರೋಷದಿಂದ ತುಂಬಿದ ಸಮಧೀರರು ಅಸಂಖ್ಯಾತ ಸಂಖ್ಯೆಯಲ್ಲಿ ಸೇರಿಕೊಳ್ಳುವ ಮೂಲಕ ಕ್ರಾಂತಿಯ ಕನಸನ್ನು ನನಸು ಮಾಡುತ್ತಾರೆ.

ಭಾರತದಲ್ಲೂ ಅಂತಹ ಒಂದು ಸಂದರ್ಭ ಬಂದಿತ್ತು. ದೇಶವನ್ನು ಬ್ರಿಟೀಷ್ ಸಾಮ್ರಾಜ್ಯಶಾಹಿಗಳ ಸುಲಿಗೆಯಿಂದ ವಿಮೋಚನೆ ಮಾಡುವ ಸಂದರ್ಭ. ಒಂದೇ ಏಟಿಗೆ ಸಾಮ್ರಾಜ್ಯಶಾಹಿಗಳನ್ನು ಮತ್ತು ಅವರ ಜೊತೆ ಕೈಜೋಡಿಸಿಕೊಂಡಿದ್ದ ಭೂಮಾಲಕರನ್ನು ಮತ್ತು ಬಂಡವಾಳಗಾರರನ್ನು ಏಕಕಾಲಕ್ಕೆ ಸೋಲಿಸುವ ಸಂದರ್ಭ. ಆದರೆ ಅಂದು ಕ್ರಾಂತಿಕಾರಿ ಶಕ್ತಿಗಳು ಇನ್ನೂ ಭ್ರೂಣಾವಸ್ಥೆಯಲ್ಲಿದ್ದವು. ವಿಮೋಚನಾ ಹೋರಾಟದ ನೇತೃತ್ವ ಶೋಷಕ ವರ್ಗಗಳ ಕೈಗಳಿಗೆ ಜಾರಿಹೋಯಿತು. ಇದರಿಂದಾಗಿ ಸ್ವಾತಂತ್ರ್ಯವೇನೋ ದೊರಕಿತಾದರೂ ಕ್ರಾಂತಿಯ ಕರ್ತವ್ಯಗಳು ಈಡೇರಲಿಲ್ಲ. ಕ್ರಾಂತಿಯ ಈ ಘಟ್ಟದ ಕರ್ತವ್ಯಗಳನ್ನು ಪೂರ್ಣಗೊಳಿಸುವ ಇನ್ನೊಂದು ಸಂದರ್ಭಕ್ಕಾಗಿ ಜನತೆಯನ್ನು ಅಣಿನೆರಸುವುದು ಕ್ರಾಂತಿಕಾರಿ ಶಕ್ತಿಗಳ, ಸಂಘಟನೆಗಳ ಗುರಿಯಾಗಿರಬೇಕಾಗಿದೆ. ವೈಯಕ್ತಿಕ ಮಟ್ಟದ ಹಿಂಸಾಚಾರದಲ್ಲಿ ತೊಡಗುವುದರಿಂದ ಜನತೆಯನ್ನು ಒಗ್ಗೂಡಿಸುವ ಕೆಲಸಕ್ಕೆ ಧಕ್ಕೆಯಾಗುತ್ತದೆ. ಒಬ್ಬ ಭೂಮಾಲಿಕನನ್ನೋ, ಒಬ್ಬ ಮಂತ್ರಿಯನ್ನೋ, ಒಬ್ಬ ಪೊಲೀಸ್ ಅಧಿಕಾರಿಯನ್ನೋ ಕೊಲೆ ಮಾಡುವುದೇ ಕ್ರಾಂತಿ ಎಂಬ ಭ್ರಮೆಯನ್ನು ಬೆಳೆಸಿದಂತಾಗುತ್ತದೆ.

ಆಂಧ್ರದ ಚಂದ್ರಬಾಬು ನಾಯ್ಡು ಸರ್ಕಾರದ ನೀತಿಗಳು ಅತ್ಯಂತ ಜನವಿರೋಧಿಯಾಗಿದ್ದವು ಎನ್ನುವ ಬಗ್ಗೆ ಯಾರಿಗೂ ಭಿನ್ನಭಿಪ್ರಾಯವಿಲ್ಲ. ಖೊಟ್ಟಿ ಎನ್‌ಕೌಂಟರುಗಳಲ್ಲಿ ಆತ ಜನಗಳನ್ನು ಬಲಿತೆಗೆದುಕೊಂಡದ್ದನ್ನು ಒಪ್ಪಲಾಗುವುದಿಲ್ಲ. ಚಂದ್ರಬಾಬು ನಾಯ್ಡು ಮೇಲೆ ಸೇಡಿನ ಕ್ರಮಕ್ಕೆ ಪ್ರಯತ್ನ ಪಡಲಾಯಿತು. ಆದರೆ ಅದು ಯಶಸ್ವಿಯಾಗಲಿಲ್ಲ. ಆ ನಂತರ ನಡೆದ ಚುನಾವಣೆಯಲ್ಲಿ ಜನ ಆತನ ತೆಲುಗು ದೇಶಂ ಪಕ್ಷವನ್ನು ಗುಡಿಸಿ ಹಾಕಿದರು. ಚಂದ್ರಬಾಬು ಬಾಂಬ್ ದಾಳಿಯಲ್ಲಿ ಸತ್ತಿದ್ದರೆ, ಅನುಕಂಪದ ಅಲೆಯಲ್ಲಿ ಅದೇ ಜನವಿರೋಧಿ ತೆಲುಗು ದೇಶಂ ಇನ್ನಷ್ಟು ಬಲಿಷ್ಠವಾಗಿ ಮೈತಾಳುವಂತಾಗುತ್ತಿತ್ತು. ಆದರೆ ಆಂಧ್ರದ ಸಮರಶೀಲ ಜನತೆ ಮಾಡಿದ 'ಮೌನಕ್ರಾಂತಿ'ಯಲ್ಲಿ ಚಂದ್ರಬಾಬು ನಾಯ್ಡು ಸತ್ತೇ ಹೋಗಿದ್ದಾರೆ.

ಸಮಾಜದ ಬದಲಾವಣೆಯಲ್ಲಿ ಜನತೆಯ ಪಾತ್ರವನ್ನು ಕಡೆಗಣಿಸುವುದು ಸಲ್ಲದು. **ಕೆಲವೇ ಕೆಲವು ಬಿಸಿರಕ್ತದ ತರುಣ ತರುಣಿಯರು ಸೇರಿ ಕ್ರಾಂತಿ ಮಾಡಬಹುದು ಎಂಬುದು ಒಂದು ಭ್ರಮೆ ಮಾತ್ರ. ಜನತೆಯನ್ನು ಅವರವರ ಪ್ರಜಾಸತ್ತಾತ್ಮಕ ಬೇಡಿಕೆಗಳ ಆಧಾರದಲ್ಲಿ ಸಂಘಟಿಸಿ, ಚಳುವಳಿಗಿಳಿಸುವುದು ಸುಧಾರಣಾವಾದ ಎಂಬ ಈ ನಕ್ಸಲೀಯರ ತಿಳುವಳಿಕೆ ದೋಷಪೂರ್ಣವಾಗಿದೆ.**

ಕಾಡಿನಲ್ಲೇ ಹುಟ್ಟಿ ಕಾಡಿನಲ್ಲೇ ಬೆಳೆದ ಆದಿವಾಸಿಗಳನ್ನು ಹೊರಗಟ್ಟಲು ಸರ್ಕಾರ ನಡೆಸುತ್ತಿರುವ ಪ್ರಯತ್ನದ ವಿರುದ್ಧ ಆದಿವಾಸಿಗಳನ್ನು ಸಂಘಟಿಸಲು ನಕ್ಸಲೀಯರು ನಿಜವಾಗಿಯೂ ಶ್ರಮಿಸುತ್ತಿದ್ದರೆ ಆ ಪ್ರಯತ್ನವನ್ನು ಎಲ್ಲರೂ ಬೆಂಬಲಿಸಲೇಬೇಕು. ಆದರೆ ಅದಕ್ಕಾಗಿ ನಿರ್ಜನ ಪ್ರದೇಶಗಳಲ್ಲಿ ಅಡಗುತಾಣಗಳನ್ನು ಮಾಡಿಕೊಂಡು, ಕೈಯಲ್ಲಿ ಕೋವಿ ಹಿಡಿದುಕೊಂಡು ಅಲೆಯಬೇಕಾಗಿಲ್ಲ.



ಜನರ ನಡುವಿನಲ್ಲೇ ಇದ್ದುಕೊಂಡು, ಜನರ ರಕ್ಷಣೆಯನ್ನೇ ಅವಲಂಭಿಸಿ ಈ ಕಾರ್ಯ ಮಾಡಲು ಆಗಬೇಕು. ಚಳುವಳಿಗಳನ್ನು ಹತ್ತಿಕ್ಕಲು ಪ್ರಭುತ್ವವು ದಮನಕಾರಿ ಕ್ರಮಗಳನ್ನು ಅನುಸರಿಸಲಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಈ ದಮನವನ್ನು ಪ್ರಜಾಸತ್ತಾತ್ಮಕ ಚೌಕಟ್ಟಿನಲ್ಲೇ ಎದುರಿಸಲು ಸಾಧ್ಯವಾಗಬೇಕು. ಜನತೆಯು ನಡಸುವ ಹೋರಾಟದಲ್ಲಿ ಪ್ರಭುತ್ವದ ದಮನಕ್ಕೆ



ಒಳಗಾಗಿ ಸಾಯುವುದು ಚಳುವಳಿಯನ್ನು ಬಲಪಡಿಸುತ್ತದೆ. ಆದರೆ ಪರಸ್ಪರ ಗುಂಡಿನ ಚಕಮಕಿಯಲ್ಲಿ ಸಾಯುವುದು ಅಥವಾ ಸಾಯಿಸುವುದು ಯಾವುದೇ ಜನಪರ ಉದ್ದೇಶಕ್ಕೆ ನೆರವಾಗದು. ಇಂತಹ ಪ್ರವೃತ್ತಿಗಳ ಪ್ರಚಾರದಿಂದ 'ಮಟ್ಟೆಣ್ಣವರ' ಅಂತಹವರು ಸೃಷ್ಟಿಯಾಗಬಹುದಷ್ಟೆ.

ದಾಳಿ ಬಂದಾಗ ಅಲೆಮಾರಿಗಳಂತೆ ತಮ್ಮ ಕಾರ್ಯಕ್ಷೇತ್ರವನ್ನು ಬದಲಾಯಿಸುವ ನಕ್ಸಲೀಯರ ಪ್ರವೃತ್ತಿ ಅವರನ್ನು ನಂಬಿ ಬೆನ್ನು ಹತ್ತುವವರನ್ನು ಬೀದಿಪಾಲು ಮಾಡುತ್ತದೆ. ಕ್ರಾಂತಿಯಿಂದ ಅವರು ದೂರ ಸರಿಯುತ್ತಾರೆ. ಮತ್ತು ಕ್ರಾಂತಿ ವಿರೋಧಿಗಳಾಗುತ್ತಾರೆ. ಹೀಗೆ ನಕ್ಸಲೀಯರು ಸಾಮ್ರಾಜ್ಯವಾದಿಗಳಿಗೆ, ಇತರ ಶೋಷಕ ವರ್ಗಗಳಿಗೆ ನೆರವಾಗುತ್ತಾರೆ.

ಪುಟ್ಟ ಬಂಡವಾಳಶಾಹಿ ಪ್ರವೃತ್ತಿ:

60 ರ ದಶಕದಲ್ಲಿ ಆರಂಭವಾದ ನಕ್ಸಲ್‌ವಾದಿ ಆಂದೋಲನವು ಇಂದು ಒಂದು ಆಂದೋಲನವಾಗಿ ಉಳಿದಿಲ್ಲ. ಅದು ಅಸಂಖ್ಯಾತ ಗುಂಪುಗಳಾಗಿ ಛಿದ್ರವಾಗಿದ್ದು ಒಂದು ಇನ್ನೊಂದರ ವಿರುದ್ಧ ಕತ್ತಿ ಮಸಿಯುತ್ತಾ ನಿರ್ನಾಮದತ್ತ ಸಾಗಿದೆ. ಕೆಲವು ವ್ಯಕ್ತಿಗಳು ಮತ್ತು ಗುಂಪುಗಳು ತಮ್ಮ ಎಡ ಸಾಹಸವಾದದ ವಿಫಲತೆಯನ್ನು ಮನಗಂಡು, ಅದನ್ನು ತ್ಯಜಿಸಿ ಎಡ ಚಳುವಳಿಯ ಮುಖ್ಯ ಪ್ರವಾಹಕ್ಕೆ ಬಂದು ಸೇರಿಕೊಳ್ಳುತ್ತಿದ್ದಾರೆ. ಅಳಿದುಳಿದಿರುವ ಗುಂಪುಗಳ ನಡುವೆ ಪರಸ್ಪರ ಕೂಡುವ, ಕಳೆಯುವ ಪ್ರಕ್ರಿಯೆ ನಡೆಯುತ್ತಲೇ ಇದೆ. ಪುಟ್ಟ ಬಂಡವಾಳಶಾಹಿ ಮನೋವೃತ್ತಿಯ ಬುದ್ಧಿಜೀವಿಗಳು ನಕ್ಸಲೀಯ ವಿಚಾರಗಳಿಗೆ ಆಕರ್ಷಿತವಾಗುತ್ತಿರುತ್ತಾರೆ. ಈಗ ಸಧ್ಯ ಕರ್ನಾಟದಲ್ಲಿ ನಡೆದಿರುವುದು ಸಹ ಅದೇ. ವಿಶ್ವವಿದ್ಯಾಲಯಗಳಲ್ಲಿರುವ ಕೆಲವು ಜನ ಪ್ರಾಧ್ಯಾಪಕರು ಕಾರ್ಮಿಕ ವರ್ಗದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲು ಸಾಧ್ಯವಾಗದೆ, ಅವರ ಚಳುವಳಿಗಳಲ್ಲಿ ಭಾಗವಹಿಸದೇ ದಂತಗೋಪುರಗಳಲ್ಲಿ ವಿಹರಿಸುತ್ತಾ ಕ್ರಾಂತಿಯ ಬಗ್ಗೆ ಚಿಂತಿಸುತ್ತಾರೆ. ಆಗ ಅವರಿಗೆ ದಟ್ಟವಾದ ಅಡವಿಯಲ್ಲಿ ಅವಿತುಕೊಂಡ ನಕ್ಸಲೀಯರು ತುಂಬಾ ಕ್ರಾಂತಿಕಾರಿಯಾಗಿ ಕಾಣುತ್ತಾನೆ. ಅವರು ಇವರಿಗಾಗಿ ಕ್ರಾಂತಿ ಮಾಡುತ್ತಾರೆ ಎಂದು ಕನಸು ಕಾಣುತ್ತಾರೆ. ಅವರ ಸಶಸ್ತ್ರ ಹೋರಾಟಕ್ಕೆ ತಾವು ಸೈದ್ಧಾಂತಿಕ ನೆಲೆ ಒದಗಿಸುವ ಭ್ರಮೆಯಲ್ಲಿ ತೇಲುತ್ತಾರೆ. ಕೆಲವು ಪತ್ರಕರ್ತರು ಸಹ ಇದೇ ದಾರಿಯಲ್ಲಿ ಹೆಜ್ಜೆ ಹಾಕಲು ಆರಂಭಿಸಿದ್ದಾರೆ.

ನಕ್ಸಲಿಯರನ್ನು ಬೆಂಬಲಿಸುತ್ತಿರುವ ಅಥವಾ ಅವರ ಬಗ್ಗೆ ಸಹಾನುಭೂತಿ ಹೊಂದಿರುವ ಬುದ್ಧಿಜೀವಿಗಳ ಜನಪರ ಧೋರಣೆಯು ಪ್ರಶ್ನಾತೀತವಾಗಿದೆ. ಶೋಷಿತರ ಪರವಾದ ಅವರ ಕಾಳಜಿ ಪ್ರಶಂಸಾರ್ಹವಾಗಿದೆ. ಆದರೆ ಕ್ರಾಂತಿಯ ಕುರಿತು ನಕ್ಸಲೀಯ ಧೋರಣೆಯಲ್ಲಿ ಎದ್ದು ಕಾಣುವ ವಿರೋಧಾಭಾಸಗಳನ್ನು ಅವರು ಗುರುತಿಸಿ ಪ್ರಶ್ನೆ ಮಾಡದಿರುವುದು ಆಕ್ಷೇಪಾರ್ಹವಾಗುತ್ತದೆ. ಜನಪರ ಹೋರಾಟಗಳಲ್ಲಿ ಎಲ್ಲ ಸಮಾನ ಮನಸ್ಕರನ್ನು ಒಂದುಗೂಡಿಸುವ ವಿಷಯದಲ್ಲಿ ನಕ್ಸಲೀಯರಿಗೆ ಆಸಕ್ತಿ ಇಲ್ಲದಿರುವುದನ್ನು ಈ ಬುದ್ಧಿಜೀವಿಗಳು ಗಂಭೀರವಾಗಿ ಪರಿಗಣಿಸುವುದಿಲ್ಲ. ಉದಾಹರಣೆಗೆ, ಬಾಬಾಬುಡನ್‌ಗಿರಿ ಚಳುವಳಿಯ ವಿಷಯದಲ್ಲಿ ಎಡಪಕ್ಷಗಳನ್ನು ಆದಷ್ಟು ದೂರವಿಡಲು ಏನು ಮಾಡಬೇಕೋ ಅದೆಲ್ಲವನ್ನೂ ನಕ್ಸಲೀಯರು ಮಾಡಿದಾಗ ಇವರೆಲ್ಲರೂ ಸುಮ್ಮನಿದ್ದರು. ಬಾಬಾಬುಡನ್‌ಗಿರಿಯಲ್ಲಿ ಕೋಮುವಾದಿ ಶಕ್ತಿಗಳ ಅಟ್ಟಹಾಸವನ್ನು ತಡೆಯಲು ನಕ್ಸಲೀಯರು ಮುತುವರ್ಜಿ ವಹಿಸಿದ್ದು ಶ್ಲಾಘನೀಯವೇ. ಆದರೆ ಎಡಪಕ್ಷಗಳು ಮತ್ತು ಇತರ ಪ್ರಗತಿಪರ ಸಾಮೂಹಿಕ ಸಂಘಟನೆಗಳೂ ಸಹ ಬಾಬಾಬುಡನ್‌ಗಿರಿ ಪ್ರಶ್ನೆಯನ್ನು ಎತ್ತಿಕೊಂಡು ಕಳೆದ ಕೆಲವು ವರ್ಷಗಳಿಂದ ತಮ್ಮದೇ ಆದ ರೀತಿಯಲ್ಲಿ ಜನಜಾಗೃತಿ ಮಾಡುತ್ತಾ ಬಂದಿವೆ. ಕೋಮುವಾದಿ ಶಕ್ತಿಗಳ ವಿರುದ್ಧದ ಹೋರಾಟವನ್ನು ಬಲಪಡಿಸುವುದರಲ್ಲಿ ನಕ್ಸಲೀಯರಿಗೆ ನಿಜವಾದ ಕಾಳಜಿ ಇದ್ದಿದ್ದರೆ ಅವರು ಚಳುವಳಿಯನ್ನು ವಿಶಾಲವಾಗಿಯೂ ಪ್ರಜಾಸತ್ತಾತ್ಮಕ ವಾಗಿಯೂ ಬೆಳೆಯಲು ಬಿಡುತ್ತಿದ್ದರು.

ಬಾಬಾಬುಡನ್‌ಗಿರಿ ಪ್ರಶ್ನೆಯನ್ನು ಎತ್ತಿಕೊಳ್ಳುವ ಮೂಲಕ ನಕ್ಸಲೀಯರು ಕರ್ನಾಟಕದ ಬುದ್ಧಿಜೀವಿಗಳ ನಡುವೆ ತಮಗೊಂದು ಸಹಾನುಭೂತಿಯ ನೆಲೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಹಾಗೆ ಮಾಡುವ ಸ್ವಾತಂತ್ರ್ಯ ಅವರಿಗೆ ಇದ್ದೇ ಇದೆ. ಬಾಬಾಬುಡನ್‌ಗಿರಿ ಪ್ರಶ್ನೆಯಲ್ಲಿ ನಕ್ಸಲೀಯರು ಇರಿಸಿದ ಸಕಾಲಿಕ ಹೆಜ್ಜೆಯನ್ನು ಮೆಚ್ಚಿಕೊಂಡ ಬುದ್ಧಿಜೀವಿಗಳು ಮೇಲೆ ಪ್ರಸ್ತಾಪಿಸಲಾದಂತಹ ಕೆಲವು ವಿಷಯಗಳ ಬಗ್ಗೆ ಅವರೊಂದಿಗೆ ಅರ್ಥಪೂರ್ಣ ಚರ್ಚೆ ಮಾಡುವುದು ಅಗತ್ಯವಿದೆ. ಕ್ರಾಂತಿ ಒಂದು ವಿಜ್ಞಾನ. ಅದು ಯಾರ ಗುತ್ತಿಗೆಯೂ ಅಲ್ಲ.

ನಕ್ಸಲೀಯ ಬೆಳವಣಿಗೆಯ ದಿನಗಳಿಂದ ದೇಶದ ಎಡ ಚಳುವಳಿಗೆ ತೀವ್ರ ಹಾನಿಯಾಗಿದೆ. ಶಸ್ತ್ರ ಹಿಡಿದು, ದಾಳಿ ಮಾಡಿ ತಲೆಮರೆಸಿಕೊಳ್ಳುವ ಇವರು ಭೂಮಾಲಕ ಬಂಡವಾಳಶಾಹಿ ವರ್ಗ ಶತ್ರುಗಳನ್ನು ಬಲಿ ತೆಗೆದುಕೊಳ್ಳುವುದಕ್ಕಿಂತ ಹೆಚ್ಚಾಗಿ ಎಡಪಕ್ಷಗಳ ಕಾರ್ಯಕರ್ತರನ್ನು ಬಲಿತೆಗೆದುಕೊಂಡಿದ್ದಾರೆ. ಆದಾಗ್ಯೂ ಎಡ ಪಕ್ಷಗಳಿಗೆ ನಕ್ಸಲೀಯರ ಬಗ್ಗೆ ದ್ವೇಷವಿಲ್ಲ. ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರಗಳು ಅಧಿಕಾರಕ್ಕೆ ಬಂದಾಗಲೆಲ್ಲಾ ಜೈಲಿನಲ್ಲಿದ್ದ ನಕ್ಸಲೀಯರ ವಿರುದ್ಧ ಇರುವ ಪ್ರಕರಣಗಳನ್ನು ವಾಪಸ್ ಪಡೆದು ಅವರನ್ನು ಬಿಡುಗಡೆ ಮಾಡಿದೆ. ಅವರ ನಡುವೆ ಅರ್ಪಣಾಭಾವದಿಂದ ಶ್ರಮಿಸುತ್ತಿರುವ ಒಳ್ಳೆಯ ಕಾರ್ಯಕರ್ತರನ್ನು ಎಡಚಳುವಳಿಯ ಮುಖ್ಯ ಪ್ರವಾಹಕ್ಕೆ ತರುವ ಪ್ರಯತ್ನ ನಡೆಯಬೇಕಾಗಿದೆ. ▲

ದರ ಹೆಚ್ಚಳವಿಲ್ಲದ ರೈಲ್ವೆ ಬಜೆಟ್

ಪ್ರಯಾಣಿಕ ದರವಾಗಲಿ, ವಸ್ತು ಸಾಗಾಣಿಕೆ ದರವಾಗಲೀ ಹೆಚ್ಚಳ ಮಾಡದಿರುವ ರೈಲ್ವೆ ಬಜೆಟ್ ಇತ್ತೀಚಿನ ವರ್ಷಗಳಲ್ಲಿ ಅಪರೂಪವಾಗಿದ್ದು, ಇದು ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಸಾಗಾಣಿಕೆ ದರದಲ್ಲಿ ಮಧ್ಯಾವಧಿ ಬಜೆಟ್‌ನಲ್ಲಿ ಮಂಡಿಸಲಾಗಿದ್ದಕ್ಕಿಂತ 645 ಕೋಟಿ ರೂ.ಹೆಚ್ಚು ಗಳಿಕೆ ನಿರೀಕ್ಷಿಸಲಾಗಿದ್ದು ಇದು ರೈಲ್ವೆ ಆದಾಯವನ್ನು ಹೆಚ್ಚಿಸಲಿದೆ.



15 ಹೊಸ ರೈಲು ಸಂಪರ್ಕಗಳನ್ನು ಘೋಷಿಸಿದ ರೈಲ್ವೆ ಮಂತ್ರಿ ಲಾಲೂ ಪ್ರಸಾದ್, ಮಧ್ಯಾವದಿ ರೈಲ್ವೆ ಬಜೆಟ್‌ನಲ್ಲಿ ಉಲ್ಲೇಖಿಸಿದ್ದ 17 ಸಂಪರ್ಕಕ್ರಾಂತಿ ಯೋಜನೆಗಳನ್ನು ಜಾರಿಗೊಳಿಸುವುದಾಗಿ ತಿಳಿಸಿದ್ದಾರೆ. ಅಂದರೆ ಒಟ್ಟು 32 ಹೊಸ ರೈಲು ಸಂಪರ್ಕಗಳನ್ನು ಕಲ್ಪಿಸಿದಂತಾಯ್ತು.

ಇದರಲ್ಲಿ ಬೆಂಗಳೂರು, ನವದೆಹಲಿ ನಡುವಣ ಸಂಪರ್ಕ ಕ್ರಾಂತಿ ರೈಲು ಈಗಾಗಲೇ ಜಾರಿಯಲ್ಲಿದ್ದು, ವಾರಕ್ಕೆ 3 ದಿನ ಸಂಚರಿಸುತ್ತಿದ್ದ ರೈಲನ್ನು 6 ದಿನಗಳಿಗೆ ವಿಸ್ತರಿಸಲಾಗಿದೆ.

ಹಿಂದುಳಿದ ಪ್ರದೇಶಗಳಾದ ಜಮ್ಮು-ಕಾಶ್ಮೀರ, ತ್ರಿಪುರ ಮತ್ತು ಮೇಘಾಲಯ ಮೊದಲಾದ ಈಶಾನ್ಯ ರಾಜ್ಯಗಳಿಗೆ ರೈಲು ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಇಲ್ಲಿನ ಯೋಜನೆಗಳಿಗೆ ಒತ್ತು ನೀಡಲಾಗಿದೆ. ಪ್ರಪ್ರಥಮ ಬಾರಿಗೆ ಜೋಡಿ ಮಾರ್ಗಗಳ ಅಳವಡಿಕೆಗೆ ಒತ್ತು ನೀಡಲಾಗಿದ್ದು ಇದು ಹೆಚ್ಚುತ್ತಿರುವ ರೈಲು ಸಂಚಾರಕ್ಕೆ ದಾರಿ ಸುಗಮ ಮಾಡಿದಂತಾಗುತ್ತದೆ.

ಕೇಂದ್ರ ಸರಕಾರಿ ನೌಕರಿ ಆಕಾಂಕ್ಷಿ ನಿರುದ್ಯೋಗಿಗಳಿಗೆ ಸಂದರ್ಶನಗಳಿಗೆ ಹಾಜರಾಗಲು ದ್ವಿತೀಯ ಸ್ಲೀಪರ್ ದರ್ಜೆಯಲ್ಲಿ ಉಚಿತ ಪ್ರಯಾಣ ಘೋಷಿಸಿದ ರೈಲ್ವೆ ಮಂತ್ರಿಯವರು ರಕ್ಷಣಾ ಸಿಬ್ಬಂದಿಯ ಯೋಧರು ಭಯೋತ್ಪಾದಕರ ಕಾರ್ಯಾಚರಣೆಯಲ್ಲಿ ಮೃತಗೊಂಡರೆ ಅವರ ಪತ್ನಿಗೆ ಶೇ.75 ರಷ್ಟು ರಿಯಾಯ್ತಿ ಘೋಷಿಸಿದ್ದು, ಅಂಗ ವಿಕಲರಿಗೆ, ರೋಗಿಗಳಿಗೂ ರಿಯಾಯಿತಿಯನ್ನು ಘೋಷಿಸಿದ್ದಾರೆ.

ರೈಲ್ವೆ ಕ್ಯಾಂಟೀನುಗಳಲ್ಲಿ ಮಜ್ಜಿಗೆ, ಲಸ್ಸಿ ಮಾರಾಟ, ಲಿನನ್ ಮತ್ತಿತರ ಬಟ್ಟೆಗಳ ಬದಲಾಗಿ ಕೈಮಗ್ಗ, ಖಾದಿ ಬಟ್ಟೆಗಳ ಉಪಯೋಗ ಕಡ್ಡಾಯ ಮಾಡಿರುವುದರಿಂದಾಗಿ ಗುಡಿಕೈಗಾರಿಕೆ, ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ಸಿಕ್ಕಿ, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಅವಕಾಶಗಳು ಹೆಚ್ಚಲಿವೆ ಎಂದು ರೈಲ್ವೆ ಮಂತ್ರಿಗಳು ತಿಳಿಸಿದ್ದಾರೆ.

ರೈಲ್ವೆಯಲ್ಲಿ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ 'ಬ್ಯಾಕ್‌ಲಾಗ್' ಹುದ್ದೆಗಳನ್ನು ಭರ್ತಿಗೊಳಿಸುವುದಾಗಿ ಬಜೆಟ್‌ನಲ್ಲಿ ತಿಳಿಸಲಾಗಿದೆ. ಒಟ್ಟಿನಲ್ಲಿ ಜನಪರ ದಿಕ್ಕಿನಲ್ಲಿ ಆಲೋಚಿಸಿದ ಬಜೆಟ್ ಸ್ವಾಗತಾರ್ಹವಾಗಿದೆ.

ಅಭಿವೃದ್ಧಿ ಮತ್ತು ಸುರಕ್ಷತೆ : ಆದರೆ ಬಜೆಟ್‌ನಲ್ಲಿ ಅಭಿವೃದ್ಧಿ ಮತ್ತು ಸುರಕ್ಷತೆಗೆ ನೀಡಿದ ಆಧ್ಯತೆ ಸಾಲದು. 63,000 ಕಿ.ಮೀ ಉದ್ದದ ಭಾರತದ ರೈಲು ಸಂಪರ್ಕ ಜಾಲ ಜಗತ್ತಿನಲ್ಲೇ ಅತಿ ದೊಡ್ಡ ಜಾಲಗಳಲ್ಲೊಂದು. ಇದು ದೇಶದ ಆರ್ಥಿಕ ಚಟುವಟಿಕೆಗಳಿಗೆ ದೊಡ್ಡ ಕಾಣಿಕೆನೀಡುತ್ತಿದೆ.


ಇಷ್ಟೊಂದು ಬೃಹತ್ತಾದ ರೈಲ್ವೆ. ಸಂಪರ್ಕಕ್ಕೆ ಸುರಕ್ಷತೆ ಅತಿ ಅಗತ್ಯ. ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಅಫಘಾತಗಳನ್ನು ಗಮನಿಸಿ, ಸಾಕಷ್ಟು ಬಂಡವಾಳವನ್ನು ಈ ದಿಕ್ಕಿನಲ್ಲಿ ಹೂಡುವುದು ಅಗತ್ಯವಿದೆ. ಹಲವಾರು ವರ್ಷಗಳಿಂದ ನಿರ್ಲಕ್ಷಕ್ಕೆ ಒಳಗಾಗಿದ್ದು ಸುರಕ್ಷತೆ ಮೊದಲ ಬಜೆಟ್ಟಿನಲ್ಲೇ ಸರಿಹೋಗುತ್ತದೆ ಎಂದು ಭಾವಿಸುವಂತಿಲ್ಲ. ಆದರೆ ಬಜೆಟ್ಟಿನಲ್ಲಿ ಉಲ್ಲೇಖಿಸಲಾದ ಸುರಕ್ಷಾ ವಿಧಾನಗಳ ಜಾರಿಗೆ ತೀವ್ರ ಗಮನ ನೀಡಬೇಕು.

ರಾಜ್ಯಕ್ಕೆ 3 ಹೊಸ ರೈಲು : ಬೆಂಗಳೂರು, ಬಂಗಾರಪೇಟೆ, ಮೈಸೂರು - ಧಾರವಾಡ ನಡುವಣ ಹೊಸ ರೈಲು ನಿತ್ಯ ಸಂಚರಿಸಲಿದ್ದು, ಚೆನ್ನೈ ಮತ್ತು ಹುಬ್ಬಳ್ಳಿ ನಡುವಣ ಹೊಸರೈಲು ವಾರಕ್ಕೊಮ್ಮೆ ಚಲಿಸಲಿದೆ.

ಅದರ ಜತೆಯಲ್ಲಿ ಬೆಂಗಳೂರು- ದೆಹಲಿ ನಡುವಣ ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್ ಹಾಗೂ ಬೆಂಗಳೂರು-ಮುಂಬೈ ಚಾಲುಕ್ಯ ಎಕ್ಸ್‌ಪ್ರೆಸ್ ವಾರಕ್ಕೆ 3 ದಿನಗಳ ಬದಲಿಗೆ 6 ದಿನಗಳು ಓಡಲಿವೆ. ಬಹುಕಾಲದಿಂದ ನೆನೆಗುದಿಗೆ ಬಿದ್ದಿರುವ ಹಾಸನ-ಮಂಗಳೂರು ಗೇಜ್ ಪರಿವರ್ತನೆ ಮತ್ತು ಹೊಸಪೇಟೆ- ಗುಂತಕಲ್ ಜೋಡಿ ಮಾರ್ಗಗಳನ್ನು ಪೂರ್ಣಗೊಳಿಸುವ ಭರವಸೆಯನ್ನು ರೈಲ್ವೆ ಮಂತ್ರಿಯವರು ನೀಡಿದ್ದಾರೆ. ಬೆಂಗಳೂರು - ಹಾಸನ ಹೊಸ ಮಾರ್ಗಕ್ಕೆ ಸೇರುವ ಹಾಸನ-ಶ್ರವಣಬೆಳಗೊಳ ಮಾರ್ಗವನ್ನು ಒಂದು ವರ್ಷದ ಒಳಗೆ ಪೂರ್ಣಗೊಳಿಸುವುದಾಗಿ ಸಚಿವರು ತಿಳಿಸಿದ್ದು, ಇದು 2006ರ ಮೊದಲು ಪೂರ್ಣಗೊಳ್ಳುವ ನಿರೀಕ್ಷೆ ಇದೆ. 6 ವರ್ಷಗಳಿಂದ ಅಧಿಕಾರದಲ್ಲಿದ್ದ ಬಿಜೆಪಿ ನೇತೃತ್ವದ ಸರಕಾರಕ್ಕೆ ಇದನ್ನು ಪೂರ್ಣಗೊಳಿಸಲು ಸಾಧ್ಯವಾಗಿರಲಿಲ್ಲ ಎಂಬುದನ್ನು ಗಮನಿಸಬೇಕು. ಸೊಲ್ಲಾಪುರ- ಗದಗ ಗೇಜ್ ಪರಿವರ್ತನೆಗೂ ಬಜೆಟ್‌ನಲ್ಲಿ 15 ಕೋಟಿ ರೂ. ತೆಗೆದಿರಿಸಲಾಗಿದ್ದು, ಯಶವಂತಪುರ-ತುಮಕೂರು ಜೋಡಿ ಮಾರ್ಗಕ್ಕೆ 38.19 ಕೋಟಿ ರೂ. ನೀಡಲಾಗಿದೆ. ಬೆಂಗಳೂರಿನಲ್ಲಿ 'ಅಫಘಾತ ರಕ್ಷಣೆ ಮತ್ತು ವೈದ್ಯಕೀಯ ಪರಿಹಾರ ಸಂಸ್ಥೆ'ಯ ಸ್ಥಾಪನೆ ರಾಜ್ಯಕ್ಕೆ ನೀಡಿದ ಇನ್ನೊಂದು ಕೊಡುಗೆ. ಈ ಯೋಜನೆಗಳು ಜಾರಿಗೆ ಬಾರದೇ ಹೋದಲ್ಲಿ ಸಾರ್ವಜನಿಕ ಒತ್ತಡ ಅಗತ್ಯ.

ಜುಲೈ 1, ದುಡಿವವರ್ಗದ ಸಿಂಹ ಕಾಮ್ರೇಡ್ ಸೂರಿ ನಮ್ಮೆಲ್ಲರನ್ನು ಅಗಲಿದ ದಿನ. ಈಗಲೂ ನೆನ್ನೆ ಮೊನ್ನೆ ಅವರು ಜೊತೆಗಿದ್ದಂತೆ, ಮಾತನಾಡಿದಂತೆ ನೆನಪು. ಅವರ ಅಗಲಿಕೆಯ ಸಂದರ್ಭದಲ್ಲಿ ಐಕ್ಯರಂಗ ಒಂದು ವಿಶೇಷ ಸಂಚಿಕೆ ತಂದು ಸೂರಿಯವರ ಬದುದು, ಬೆಳದ ಬಗೆ, ಕೊಡುಗೆಗಳನ್ನು ಸಂಗ್ರಹಿಸಿ ಜನತೆಯ ಕೈಗಿಟ್ಟಿತ್ತು. ಸೂರಿಯವರ ಕುರಿತು ಅವರ ಕುಟುಂಬದವರ ಅಮೂಲ್ಯ ನೆನಪುಗಳನ್ನು ಸಹ. ಅದರ ಎರಡನೇ ಭಾಗ.

ಕುಟುಂಬದವರ ನೆನಪಿನಂಗಳದಲ್ಲಿ



ಸೂರಿ ನೆನಪು

ಸೂರಿಯವರನ್ನು ಹಲವು ವರ್ಷಗಳಿಂದ ಬಲ್ಲವರಿಗೂ ಅವರ ಖಾಸಗಿ ಬದುಕಿನ ಬಗ್ಗೆ ಏನೂ ಗೊತ್ತೇ ಇಲ್ಲ ಎಂದರೂ ನಡೆದೀತು. ಸೂರಿಯವರ ಕುಟುಂಬದವರ ಜತೆ ನೆನಪಿನಂಗಳದಲ್ಲಿ ಪ್ರಭಾ. ಎನ್ ಕಂಡದ್ದನ್ನು ಹಂಚಿಕೊಂಡಿದ್ದಾರೆ ಇಲ್ಲಿ.

ಆಸ್ಪತ್ರೆಗೆ ಸೇರಿಸಿ ಔಷಧಿ ಕೊಡಿಸಿ

ಸೂರಿಯವರು ಸಭೆಯ ಮೇರೆಗೆ ದೂರದ ಊರಿಗೆ ಹೋಗಿದ್ದರು. ಇದೇ ಸಂದರ್ಭಕ್ಕೆ ಅಪಘಾತವೊಂದರಲ್ಲಿ ಯಶೋದಾರವರ ಕಾಲಿನ ಮೂಳೆ ಮುರಿದಿತ್ತು. ಹೇಗೋ ಸೂರಿಯವರನ್ನು ಸಂಪರ್ಕಿಸಿ ವಿಷಯ ಮುಟ್ಟಿಸಲಾಗಿ ಸೂರಿ ಹೇಳಿದರಂತೆ. "ನಾನು ಮುಖ್ಯವಾದ ಕೆಲಸದ ಮೇಲೆ ಬಂದಿದ್ದೇನೆ. ಅರ್ಧಕ್ಕೆ ಹೋಗುವಂತಿಲ್ಲ. ಇಷ್ಟಕ್ಕೂ ನಾನೇನು ವೈದ್ಯನಲ್ಲ ಆಸ್ಪತ್ರೆಗೆ ಸೇರಿಸಿ ಉಪಚಾರ ಮಾಡಿಸಿ. ಆಕೆಯ ಅಕ್ಕ ಮತ್ತು ಶಾಲೆಯವರು ನೋಡಿಕೊಳ್ಳುತ್ತಾರೆ ಎಂದಿದ್ದರಂತೆ. ಮೂರು ದಿನ ಬಿಟ್ಟು ಮನೆಗೆ ಬಂದು ವಿಚಾರಿಸಿದ್ದರಂತೆ.

ಹಿರಿಯ ಮಗಳು ಮೀರಾಗೆ ಮದುವೆ ನಿಶ್ಚಯವಾಗಿತ್ತು. ಮದುವೆ ಕೇವಲ ವಾರವಿದ್ದಾಗ ಬೆಂಗಳೂರಿನ ಬಿ.ಇ.ಎಲ್. ಕಛೇರಿಯ ಮುಂದೆ ಸೂರಿಯವರು ಉಪವಾಸ ಸತ್ಯಾಗ್ರಹ ಹೂಡಿದ್ದರು.


ಛತ್ರದ ಸ್ಥಳ ವಿಳಾಸಗಳನ್ನು ಮಕ್ಕಳಿಗೆ ತಿಳಿಸಿ, ದಿನಾಂಕ ಕಾಯ್ದಿರಿಸಲು ಸೂಚಿಸುತ್ತಿದ್ದರು. ಮದುಮಗಳು ಮೀರಾ ಕಿರಿಮಗಳು ರೇಖಾ ತಾವೇ ಛತ್ರ ಗೊತ್ತು ಮಾಡಿ ಅಪ್ಪನಿಗೆ ತಿಳಿಸಿದ್ದರು. ಬಂಧು ಬಳಗದವರನ್ನೆಲ್ಲಾ ಹೆಚ್ಚು ಕಡಿಮೆ ಅವರೇ ಆಮಂತ್ರಿಸಿದ್ದರು. ಚಿಕ್ಕಪ್ಪ ದೊಡ್ಡಪ್ಪ ಬಂಧುಗಳು ನೆರವಾಗಿದ್ದರು.

ಮಕ್ಕಳ ಆರೈಕೆ ಅಮ್ಮನದ್ದು, ವಿದ್ಯಾಭ್ಯಾಸ ಅಮ್ಮನ ರಿಸ್ಕು, ಬೇಕು - ಬೇಡಗಳ ವಿಚಾರಣೆ ಅಮ್ಮನಿಂದ, ಕುಟುಂಬಕ್ಕೆ ದುಡಿಮೆ ಅಮ್ಮ ಮಾಡಿದ್ದು, ವಾಸಕ್ಕೊಂದು ಮನೆಯೂ ಅಮ್ಮನಿಂದಲೆ. ಹಾಗೆಂದ ಮಾತ್ರಕ್ಕೆ ಮಕ್ಕಳಿಗೆ ಅಪ್ಪ ಬೇಡವಾಗಿದ್ದರೆ? ಪತ್ನಿಗೆ ಪತಿ ಅಸಹನೀಯ ವಾಗಿದ್ದರೆ. ಒಂದೂ ಅಲ್ಲ. ಒಬ್ಬರಿಗೊಬ್ಬರು ಬದ್ಧರಾಗಿದ್ದರು. ಆದರ್ಶ ವೊಂದನ್ನು ಅನುಕರಿಸಿದ್ದರು. ಮಾನವೀಯ ಮೌಲ್ಯಗಳನ್ನು ಬೆಸೆದುಕೊಂಡಿದ್ದರು. ಹಾಗಾಗಿಯೆ ಮಕ್ಕಳು ಮೊಮಕ್ಕಳು ಮರಿಮಕ್ಕಳ ಸಲುವಾಗಿ ಕೋಟ್ಯಾಂತರ ರೂಪಾಯಿಗಳ ಹಣ, ಆಸ್ತಿ ಮಾಡುವ ಕುಟುಂಬದಲ್ಲೂ ಇಲ್ಲದಷ್ಟು ಬಾಂಧವ್ಯ, ಮಿಡಿತ, ಆಸೆ, ಪ್ರೀತಿ, ಅಪ್ಪನ ಬಗೆಗಿನ ಅಭಿಮಾನ, ಬಾಳಸಂಗಾತಿಯ ಬಗೆಗಿನ ಹೆಮ್ಮೆ ಈ ಕುಟುಂಬದಲ್ಲಿದೆ.

ಎಷ್ಟು ಜನಕ್ಕೆ ಮನೆ ಇದೆ ನಿನಗೆ ದುರಾಸೆ ಬಂದಿದೆ

ಯಶೋದಾರವರ ತಾಯಿ ಒಡವೆ, ವಸ್ತ್ರ ಹಾ ಏನಾದರೊಂದು ಸಹಾಯ ಮಾಡುವ ಕುರಿತಾಗಿ ಮಗಳ ಬಳಿ ಪ್ರಸ್ತಾಪಿಸಿದರಂತೆ. ಬಾಡಿಗೆ ಮನೆಯಲ್ಲಿ ವಾಸವಿದ್ದ ಯಶೋದಾ ಸಹಾಯ ಮಾಡುವಂತಿದ್ದರೆ ಸೈಟು ಕೊಡಿಸುವ ಮೂಲಕ ಎಂದರಂತೆ. ಯಶೋದಾರವರ ತಾಯಿ ಒಪ್ಪಿಗೆ ಸೂಚಿಸಿ ಜಾಗ ಹುಡುಕಲು ಹೇಳಿದರಂತೆ. ಜಾಗದ ಬಗ್ಗೆ ಹೆದರಿಕೆಯಿಂದಲೆ ಸೂರಿಯವರ ಮುಂದೆ ವಿಚಾರಿಸಿದಾಗ ಸೂರಿಯವರು ತಕ್ಷಣವೇ ಸಿಟ್ಟಾಗಿ ಮಡದಿಯನ್ನು ದೂರಿದ್ದು, ನಿನಗೆ ದುರಾಸೆ ಬಂದಿದೆ, ನಮ್ಮಲ್ಲಿ ಎಷ್ಟು ಜನರಿಗೆ ತಾನೆ ಮನೆ ಇದೆ ಎಂದು. ಹಾಗೂ ಹೀಗೂ ಮಾಡಿ ಯಶೋದಾರವರ ಪ್ರಯತ್ನದಿಂದಲೆ ಒಂದು ಜಾಗ ಸಿಕ್ಕಿತು. (ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾದ್ದಕ್ಕೆ ಪ್ರತಿಯಾಗಿ ಅಂದಿನ ಹೌಸಿಂಗ್ ಬೋರ್ಡ್ ಅಧ್ಯಕ್ಷರಾಗಿದ್ದ ಹೆಚ್.ಕೆ. ಕುಮಾರಸ್ವಾಮಿ ಎಂಬುವವರು ಜಾಗ ಮಾಡಿ ಕೊಟ್ಟಿದ್ದರು). ಆದರೆ ಜಾಗ ನೋಡಲೂ ಹೋಗದ ಸೂರಿಯವರು ಅಗತ್ಯವಿದ್ದ ಸಹಿಯೊಂದನ್ನು ಹಾಕಲು ನಿರಾಕರಿಸಿದಾಗ ಸಂಧಾನಕ್ಕೆ ತೆರಳಿದವರು ಕಾಂ। ರಾಮಚಂದ್ರರಾವ್. ಹಾಗೆಯೇ ಸೂರಿಯವರ ತಾಯಿ. ವಾಸಕ್ಕೊಂದು ಸ್ವಂತ ಮನೆಯಾದರೆ ನಿನಗೂ ಸಲೀಸು, ಮಕ್ಕಳು ಮರಿ ಎಳ್ಕೊಂಡು ನಿನ್ಹೆಂಡ್ತಿ ಎಲ್ಲಿ ಸುತ್ತಾಡ್ತಾಳೆ. ಇಷ್ಟಕ್ಕು ಆಕೆಯ ತಾಯಿ ಆಸೆ ಪಟ್ಟು ಕೊಡ್ತಾ ಇದ್ದಾರೆ. ನೀನು ಅಡ್ಡಿ ಆಗ್ಬೇಡ ಮುಂತಾಗಿ ಮನವೊಲಿಸಲಾಗಿ ಸೂರಿಯವರು ಸಹಿ ಹಾಕಿದ್ದಂತೆ. ಮನೆ ಕಟ್ಟುವ ಸಲುವಾಗಿ ಸಾಲ ಮಾಡಿದ್ದು, ಸಾಲಕ್ಕೆ ಓಡಾಡಿದ್ದು, ಸಾಲ ತೀರಿಸಿದ್ದು ಹೆಂಡತಿ ಮಕ್ಕಳೆ. ಆದ್ದರಿಂದಲೇ ಯಶೋಧಾರವರು ಈ ರೀತಿ ಹೇಳಿದ್ದು "ಮನೆ ಕಟ್ಟೋ ಆಸಕ್ತಿ ನನ್ನದಾಗಿದ್ದರೆ ಪಕ್ಷ ಕಟ್ಟೋ ಆಸಕ್ತಿ ಅವರದಾಗಿತ್ತು."

ಉಳುವವನಿಗೂ ಮಹಿಳೆಗೂ ವಾರಸುದಾರಿಕೆ



ಮೂಲತಃ ಸೂರಿಯವರು ಹಾಸನ ಜಿಲ್ಲೆಯ ಅರಕಲಗೂಡಿ ನವರು. ಆನಂತರ ಬಂದು ಸೇರಿದ್ದು ಬೆಂಗಳೂರನ್ನು. ಬೆಂಗಳೂರಿಗೆ ಬಂದು ನೆಲೆಸಿದಾಗ ಸೂರಿಯವರ ಹಿರಿಯರು ಅಲ್ಲಿನ ಜಮೀನನ್ನು 'ಪಾಲಿಗೆ ಕೊಟ್ಟು ಬಂದಿದ್ದರು. ವರ್ಷಕ್ಕೊಮ್ಮೆ ಭತ್ತ, ಕಾಳು ಕಡಿ ತರುತ್ತಿದ್ದರು. ಮುಂದೆ ಸೂರಿಯವರೆ ಮುತುವರ್ಜಿ ವಹಿಸಿ "ಉಳುವವನನೆ ಭೂಮಿಗೆ ಒಡೆಯ ನನ್ನಾಗಿಸಿದರು". ಇದಕ್ಕಾಗಿ ಸರ್ಕಾರ ಪರಿಹಾರ ಹಣ ನೀಡಲಾಗಿ ಆಸ್ತಿಯಿಂದ ಬಂದ ಹಣ ಹೆಣ್ಣುಮಗಳಿಗೆ ಸೇರಲಿ ಎಂದು ತೀರ್ಮಾನಿಸಿ ತಂಗಿಗೆ ಕೊಡಿಸಿದ್ದರು.

ಇಬ್ಬರು ಹೆಣ್ಣು ಮಕ್ಕಳ ತಂದೆಯಾಗಿದ್ದ ಸೂರಿಯವರು ಪುರುಷ ಪ್ರಧಾನ ಸಮಾಜದ ಮೌಲ್ಯಗಳನ್ನ ದೂರವಿಟ್ಟವರು. ದುಡಿಯುವ ಮಹಿಳೆಯನ್ನ ಸಂಗಾತಿಯಾಗಿ ಪಡೆದಿದ್ದ ಸೂರಿಯವರು ಮಹಿಳೆಯರ ಔದ್ಯೋಗಿಕ ಅವಕಾಶ ಗಳಿಗಾಗಿ, ಆರ್ಥಿಕ ಸ್ವಾತಂತ್ರ್ಯ, ಆಸ್ತಿಯ ಒಡೆತನ ಕ್ಕಾಗಿ ಪ್ರತಿಪಾದಿಸಿದರು. ಮಹಿಳೆಯರು ಎದುರಿಸುತ್ತಿರುವ ಸಂಕೀರ್ಣ ಸಮಸ್ಯೆಗಳ ಅರಿವನ್ನು ಹೊಂದಿದವರಾಗಿದ್ದರು. ಮಹಿಳೆಯರ ವಿಮೋಚನಾ ಚಿಂತನೆ, ಹೋರಾಟಗಳಲ್ಲಿ ಸದಾ ಭಾಗಿಯಾಗಿರುತ್ತಿದ್ದರು.

ಜಾತಿ, ಧರ್ಮ, ಕೋಮುವಾದಗಳ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿರುತ್ತಿದ್ದ



ಸೂರಿಯವರು ತಮ್ಮ ಎರಡನೆಯ ಪುತ್ರಿ ಮುಸ್ಲಿಂ ಯುವಕನನ್ನು ಬಾಳ ಸಂಗಾತಿಯಾಗಿ ಆಯ್ಕೆ ಮಾಡಿಕೊಂಡಾಗ ವಿವಾಹಕ್ಕೆ ಒಪ್ಪಿಗೆ ನೀಡಿದ್ದರು. ಜಾತಿ-ಧರ್ಮಗಳ ಎಲ್ಲೆಗಳನ್ನ ಮೀರಿ ಬದುಕನ್ನ ನಡೆಸಿದರು.

ತುರ್ತು ಪರಿಸ್ಥಿತಿ ಘೋಷಣೆ ಮಾಡಿದ್ದ ದಿನ ಸೂರಿಯವರು ಬೇಗನೆ ಮನೆಗೆ ಬಂದರಂತೆ. ಮಡದಿಗೆ ಅಚ್ಚರಿಯೋ ಅಚ್ಚರಿ. ಹಸಿವಾಗಿದೆ ಊಟ ಬಡಿಸು ಎಂದ ಸೂರಿಯವರು ಕೈ-ಕಾಲು ತೊಳೆದು ಬರುವಷ್ಟರಲ್ಲಿ ಅವರನ್ನು ಬಂಧಿಸುವ ಸಲುವಾಗಿ ಪೊಲೀಸರು ಹಾಜರಾಗಿದ್ದರಂತೆ. ಅಯ್ಯೋ ಅವರಿನ್ನು ಊಟವೇ ಮಾಡಿಲ್ಲಾ ಎಂದು ಯಶೋದಾರವರು ದುಃಖಿಸಿದಾಗ ಪೊಲೀಸ್ ಇನ್ಸ್‌ಪೆಕ್ಟರ್ ಊಟಕ್ಕೆ ಅವಕಾಶ ನೀಡಿ ಕೂಡಲೇ ಬಂಧಿಸಿದ್ದರಂತೆ.

ಕಷ್ಟದಲ್ಲಿರುವ ಕಾರ್ಮಿಕರು, ಅಸಹಾಯಕರಾದ ಸಾಮಾನ್ಯರು, ಕ್ರಾಂತಿಕಾರಿ ಚಳುವಳಿಯ ಮುಂಚೂಣಿಯಲ್ಲಿದ್ದ ಎಕೆಜಿ, ಸುಶೀಲಾ ಗೋಪಾಲನ್, ಬಿ.ಟಿ.ರಣದಿವೆ, ಪಿ.ರಾಮಮೂರ್ತಿ, ಬಾಲನಂದನ್, ಮುಂತಾದ ಅಗ್ರಗಣ್ಯ ನಾಯಕರು ಸೂರಿಯವರ ಮನೆಗೆ ಭೇಟಿ ನೀಡುತ್ತಿದ್ದರು. ಒಂದು ಕಡೆ ಕಷ್ಟ ತೋಡಿಕೊಳ್ಳುವ ದುಡಿಯುವ ಜನ - ಮತ್ತೊಂದು ಕಡೆ ದುಡಿಯುವ ವರ್ಗದ ನೇತಾರರ ಪರಿಶ್ರಮ ಇದರಿಂದ ಪ್ರಭಾವಿತರಾದ ಕುಟುಂಬದವರು ಸೂರಿಯವರನ್ನು ಎಂದೂ ಅಡ್ಡಿಪಡಿಸದೆ ಬೆಂಗಾವಲಾಗಿಯೇ ಮುನ್ನಡೆಸಿದ್ದಾರೆ. ಮಾತ್ರವಲ್ಲ ಸೂರಿಯವರ ಕೆಲಸವನ್ನು ಮತ್ತೂ ಮುನ್ನಡೆಸುವ, ಆ ಮೂಲಕ ಸೂರಿಯವರಿಗೆ ಗೌರವ ಸಲ್ಲಿಸುವ ನಿರ್ಧಾರ ಕೈಗೊಂಡಿದ್ದಾರೆ.

ಅಪಾಯಿಂಟ್‌ಮೆಂಟ್ ಕೇಳಿದ ಮಕ್ಕಳು - ಮೊಮ್ಮಕ್ಕಳು!

ಕಾರ್ಮಿಕ ಸಂಘಟನೆ, ಸಭೆ, ಕೇಸು, ಪಕ್ಷ ಹೀಗೆ ಯಾವಾಗಲೂ ಒತ್ತಡದಲ್ಲಿರುತ್ತಿದ್ದ ಸೂರಿಯವರನ್ನು ನೋಡಲು ಮಕ್ಕಳು-ಮೊಮ್ಮಕ್ಕಳಿಗೆ ಸಾಧ್ಯವಾಗುತ್ತಿರಲಿಲ್ಲ.

ಹುಡುಕಿಕೊಂಡು ಮನೆಗೆ ಬಂದರೂ ಯಾವುದಾದರೊಂದು ಸಭೆಯನ್ನು ಮನೆಯಲ್ಲಿಯೇ ಏರ್ಪಡಿಸಿಕೊಂಡಿರುತ್ತಿದ್ದ ಸೂರಿಯವರು ಕೆಲವೊಮ್ಮೆ ಹಾಯ್-ಬಾಯ್ ಮಾತ್ರಕ್ಕೆ ಸಿಗುತ್ತಿದ್ದರೆಂದು ಹೇಳಿಕೊಂಡ ಮಕ್ಕಳು, ಮೊಮ್ಮಕ್ಕಳು, appointment ಕೊಡಿ ನಮಗೂ ನಿಮ್ಮನ್ನು ಭೇಟಿ ಮಾಡುವ ಹಕ್ಕಿದೆಯೆಂದು ಕೋಪ ಮಾಡುತ್ತಿದ್ದುದನ್ನು ನೆನೆಪಿಸಿದರು.

ಮೀರಾ ಮತ್ತು ರೇಖಾರಿಗಿರುವ ಸಮಾಧಾನವೆಂದರೆ ನಮ್ಮಪ್ಪ ನಮಗೆ ದುಬಾರಿಯಾಗಿದ್ದರಾದರೂ ಅವರ ಮೊಮ್ಮಕ್ಕಳಿಗೆ ಸ್ವಲ್ಪ ಲಭ್ಯವಿದ್ದರೆಂಬುದು. ಇತ್ತೀಚಿನ ದಿನಗಳಲ್ಲಿ ತಾತ ಮೊಮ್ಮಕ್ಕಳಿಗಾಗಿ ಕೆಲವೊಂದು ಶನಿವಾರ ಅಥವಾ ಭಾನುವಾರಗಳನ್ನು ಕಾಯ್ದಿರಿಸುತ್ತಿದ್ದರಂತೆ. ದೂರದ ಊರುಗಳಿಗೆ ಹೋದಾಗ ಪುಟ್ಟ ಮಕ್ಕಳಿಗಾಗಿ ಏನಾದರೂ ತರುತ್ತಿದ್ದರಂತೆ. ಹೀಗೆ ನೆನಪಿಸಿಕೊಳ್ಳುತ್ತಾ ಹಿರಿಯ ಮೊಮ್ಮಗಳು ಸಿಂಧು ಒಮ್ಮೆ ವಿದೇಶಕ್ಕೆ ಹೋಗಿದ್ದಾಗ ತಾತ ತಂದಿದ್ದ ಫ್ರಾಕಿನ ಬಗ್ಗೆ ಹೇಳಿದಳು. "ತಾತ ಒಮ್ಮೆ USA ಗೆ ಹೋಗಿದ್ದರು. ಪ್ರವಾಸ ಮುಗಿಸಿ ಹಿಂದಿರುಗುವಾಗ ನಮಗೆಲ್ಲಾ ಫ್ರಾಕುಗಳನ್ನು ಖರೀದಿಸಿದ್ದರು. ಬೆಂಗಳೂರಿಗೆ ಬಂದವರೆ ನಮ್ಮನ್ನೆಲ್ಲ ಮನೆಗೆ ಕರೆಸಿಕೊಂಡರು. ನಿಮಗೆಲ್ಲರಿಗೂ ಫ್ರಾಕ್ಸ್ ತಂದಿದ್ದೀನಿ. ತಗೊಳ್ಳಿ ಎಂದರು ನಾವು USA ಫ್ರಾಕ್ಸು ಅಂತ ಖುಷಿಯಿಂದ ಬಿಚ್ಚಿದೆವು. 'ಆದರೆ ಅವೆಲ್ಲಾ ನೈಟಿಗಳು' ಪಾಪ ತಾತಂಗೆ ಗೊತ್ತಾಗೇ ಇರಲಿಲ್ಲ ವೆಂದು ಛೇಡಿಸಿದಳು ಮೊಮ್ಮಗಳು.

ಹಾಗೆ ಇನ್ನೊಂದು ಘಟನೆಯನ್ನು ಮೆಲುಕು ಹಾಕಿ ನಮ್ಮ ತಾತ ಯಾರಿಗೂ ಹೆದರುತ್ತಿರಲಿಲ್ಲ ವೆಂದಳು.

ಸಿಂಧೂ ಹುಟ್ಟುಹಬ್ಬದ ಸಲುವಾಗಿ ಸಿಂಧೂ ಅಮ್ಮ ಮೀರಾ ಜಯನಗರದ ಮನೆಯ ಹತ್ತಿರವೇ ಇದ್ದ ಸಾಧಾರಣ ಹೋಟೆಲೊಂದಕ್ಕೆ ಮನೆಯವರನ್ನೆಲ್ಲಾ ಕರೆದುಕೊಂಡು ಊಟಕ್ಕೆ ಹೋಗಿದ್ದರಂತೆ. ಒತ್ತಾಯ ಮಾಡಿ ಸೂರಿಯವರನ್ನು ಪಾಲ್ಗೊಳಿಸಿದ್ದರಂತೆ. ಸರಿ ಬೇಕಾದ್ದನ್ನು ಆರ್ಡರ್ ಮಾಡಿ ಊಟ ಮುಗಿಸಿ ಟೇಬಲ್ಲಿನ ಮೇಲಿದ್ದ ಬಿಲ್ಲಿನ ಕಡೆಗೆ ನೋಡಿದವರೆ ಹೌಹಾರಿದರಂತೆ ಸೂರಿಯವರು. ಸಪ್ಲೆಯರ್ ಕರೆದು "ಏನಯ್ಯಾ ಇದು ಯಾವ ಸೀಮೆ ಊಟ ಯಾವ ಸೀಮೆ ಬಿಲ್ಲು. ಏನು ಮಹಾ ಕೊಟ್ಟಿದ್ದು ನೀನು. ಲೆಕ್ಕ-ಗಿಕ್ಕ ಏನೂ ಬೇಡವಾ, ಅವ್ನ ಯಾವನಯ್ಯಾ ಮಾಲೀಕ ಕರೀ ಇಲ್ಲಿ" ಎಂದು ಗುಡುಗುತ್ತಿದ್ದಂತೆ, ಹೋಟೇಲಿನ ಗಿರಾಕಿಗಳೆಲ್ಲ ಇವರ ಕಡೆಗೆ ಗಮನ ನೆಟ್ಟರಂತೆ. ಅಪ್ಪನನ್ನ ಸಮಾಧಾನಪಡಿಸುವ ಸಲುವಾಗಿ ಮೀರಾ "ಬಿಡಿ ಅಣ್ಣ ಮನೆಯವರೆಲ್ಲಾ ಊಟ ಮಾಡಿದೆವಲ್ಲಾ" ಎಂದಾಗ "ನೀನು ಸುಮ್ಮನಿರಮ್ಮ ಏನ್ ನೂರು ಜನ ಊಟ ಮಾಡಿದ್ದ, ಐದಾರು ಜನ ತಾನೆ. ಅದಕ್ಕೆ ಇಷ್ಟೊಂದು ಬೆಲೆಯಾ. **ನಿನಗೆ ದುಡ್ಡು ಜಾಸ್ತಿಯಿದ್ದರೆ ನಮ್ ಪಾರ್ಟಿಗೆ ಕೊಡು ಹೀಗೆಲ್ಲಾ ಖರ್ಚು ಮಾಡಬೇಡ"** ಎಂದು ಸುಮ್ಮನಿರಿಸಿದ್ದರಂತೆ.

ಸಪ್ಲೆಯರ್‌ನನ್ನು ಕರೆದು ಎಷ್ಟು ಸಂಬಳ? ಕೇಳಿದರಂತೆ. ಅವ ಎರಡು ಸಾವಿರ ಎನ್ನುತ್ತಿದ್ದಂತೆ ನೋಡು ಸುಲಿಗೆ ಅಂದ್ರೆ ಹೇಗಿರುತ್ತೆ ಅಂತ. ಮತ್ತೂ ಕೂಗಾಡಿದ್ದರಂತೆ.

ಸುಲಿಗೆಯನ್ನೇ ಆಡಂಬರವೆಂದು ಮೌನದಿಂದ ಸ್ವೀಕರಿಸುವ ಡಂಭಾಚಾರಕ್ಕೆ, ಅನವಶ್ಯಕ ಗಾಂಭೀರ್ಯಕ್ಕೆ ಸೂರಿಯವರು ಒಗ್ಗಲೇ ಇಲ್ಲ. ವರ್ಗಗುಣವನ್ನು ಹೋಟೇಲಿನಲ್ಲೂ ಪ್ರದರ್ಶಿಸಿ ಬಂದಿದ್ದರು. ಹೊರಗೆ ಬಂದಾಗ ಕದ್ದು ಬಂದಿದ್ದ ಸಪ್ಲೆಯರ್ ಹೇಳಿದನಂತೆ, ಸರ್ ಇಷ್ಟು ದಿನಕ್ಕೆ ಇವತ್ತು ನನಗೆ ಖುಷಿಯಾಯಿತೆಂದು.

ಈ ಘಟನೆಯನ್ನು ನೆನೆದು ಸಿಂಧೂ ಉದ್ಘರಿಸಿದ್ದು ನಮ್ಮ ತಾತ ಯಾರಿಗೂ ಹೆದರುತ್ತಿರಲಿಲ್ಲ ವೆಂದು. ಒಬ್ಬ ಅಣ್ಣ, ಒಬ್ಬ ಅಕ್ಕ, ಒಬ್ಬ ತಮ್ಮ ಒಬ್ಬಳು ತಂಗಿಯನ್ನು ಹೊಂದಿದ್ದ ಸೂರಿಯವರು ಅಗಲಿದಾಗ ಉಳಿದಿದ್ದವರು ತಮ್ಮ ಮಾತ್ರ. ಪತ್ನಿ ಇಬ್ಬರು ಹೆಣ್ಣುಮಕ್ಕಳು ಅಳಿಯಂದಿರು, ನಾಲ್ಕು ಜನ ಮೊಮ್ಮಕ್ಕಳನ್ನು ಅಗಲಿರುವ ಸೂರಿಯವರ ಸ್ಫೂರ್ತಿ, ಪ್ರಭಾವ ಎಲ್ಲರ ಮೇಲೂ ಇದೆ. ಸೂರಿಯವರ ಹೆಸರನ್ನು ಉಳಿಸುವ ಆಸೆಯೂ ಇದೆ.

‘ಎಡಪಕ್ಷಗಳೆಂದರೆ ಸುಧಾರಣೆಗಳ ವಿರುದ್ಧ’ ಎಂಬ ಭಾವನೆ ಪ್ರಚಲಿತದಲ್ಲಿರುವ ಇಂದಿನ ಸಂದರ್ಭದಲ್ಲಿ ಜನರ ಸಲುವಾಗಿ ಎಡಪಕ್ಷಗಳು ಸುಧಾರಣೆಗಳನ್ನು ಬಯಸುತ್ತವೆ ಎಂಬುದು ಬಹಳ ಜನಕ್ಕೆ ಗೊತ್ತಿಲ್ಲ. ನಮ್ಮ ಸಮೂಹ ಮಾಧ್ಯಮಗಳು ಎಡಪಕ್ಷಗಳ ಬಗ್ಗೆ ಅಂತಹ ತಪ್ಪು ಕಲ್ಪನೆಗಳನ್ನು ಬೆಳೆಸಿವೆ. ಇತರೆ ರಾಜ್ಯಗಳ ದಿವಾಳಿತನದೊಂದಿಗೆ ಸಮೀಕರಿಸಲು ಯತ್ನಿಸಿವೆ. ಪ.ಬಂಗಾಳದ ಎಡರಂಗ ಸರ್ಕಾರದ ಮುಖ್ಯಮಂತ್ರಿ ‘ದಿ ಹಿಂದೂ ಬಿಸಿನೆಸ್ ಲೈನ್’ ಹಣಕಾಸು ದಿನಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ತಮ್ಮ ಸರ್ಕಾರ ‘ಎಷ್ಟು ಸುಧಾರಣೆ ಪರ ಹಾಗೂ ಇತರೆ ರಾಜ್ಯಗಳಂತೆ ತಾವಲ್ಲ’ ಎಂಬುದನ್ನು ವಿವರಿಸಿದ್ದಾರೆ.

(ಕಾಂ. ಬುದ್ಧದೇವ್ ಭಟ್ಟಾಚಾರ್ಯ ಬಿಸಿನೆಸ್ ಲೈನ್ ಪತ್ರಿಕೆಯ ರಣಬೀರ್ ರಾಯ್ ಚೌದರಿಯವರಿಗೆ ನೀಡಿದ ಸಂದರ್ಶನದ ಸಂಗ್ರಹಾನುವಾದ ಮಾಡಿದ್ದಾರೆ ಜಿ.ಎಸ್.ಮಣಿಯವರು)

“ನಮ್ಮದು ಹೂಡಿಕೆ ಪರ ಸರ್ಕಾರ”

ಬುದ್ಧದೇವ್ ಭಟ್ಟಾಚಾರ್ಯ, ಪ.ಬಂಗಾಳದ ಮುಖ್ಯಮಂತ್ರಿ

ಪ್ರ: ಪ.ಬಂಗಾಳದ ಮುಖ್ಯಮಂತ್ರಿಗಳಾಗಿ ಕಳೆದ ಮೂರು ವರ್ಷಗಳಲ್ಲಿ ಆರ್ಥಿಕ ವಲಯದಲ್ಲಿ ನಿಮ್ಮ ಮುಖ್ಯ ಸಾಧನೆಗಳೇನು?

ಉ: ಮೊದಲನೆಯದು ಕೃಷಿಯಲ್ಲಿನ ನಮ್ಮ ಸಾಧನೆಗಳನ್ನು ಕ್ರೋಢೀಕರಿಸುವುದು ಅದು ನಮ್ಮ ಮೊದಲ ಆದ್ಯತೆ. ಯಾಕೆಂದರೆ ಶೇ 70 ರಷ್ಟು ಕೃಷಿಭೂಮಿ ಬಡ ಮತ್ತು ಅತಿ ಬಡರೈತರಿಗೆ ಸಿಕ್ಕಿದೆ. ಈ ರೈತರು ಸಂಖ್ಯೆಯಲ್ಲಿ ಶೇ 94 ರಷ್ಟಾಗುತ್ತದೆ. ಎರಡನೆಯದಾಗಿ ನಾವು ಈಗ ಹೊಮ್ಮುತ್ತಿರುವ ಕೃಷಿ-ವ್ಯಾಪಾರದ ಮೇಲೂ ಗಮನವನ್ನು ಕೇಂದ್ರೀಕರಿಸುತ್ತಿದ್ದೇವೆ.

ಪ್ರ: ಇವನ್ನು ಸ್ವಲ್ಪ ವಿವರಿಸುತ್ತೀರಾ?

ಮುಖ್ಯವಾಗಿ ಭತ್ತವನ್ನು ತೆಗೆದುಕೊಂಡರೆ ಕಳೆದ ಕೆಲವು ವರ್ಷಗಳಲ್ಲಿ ಒಳ್ಳೆಯ ಬೆಳವಣಿಗೆ ಆಗಿದೆ. ಪ.ಬಂಗಾಳಕ್ಕೆ ಇದರಿಂದ ಆಹಾರ ಭದ್ರತೆ ಸಾಧ್ಯವಾಗಿದೆ. ತೋಟಗಾರಿಕೆ ಮತ್ತು ಪುಷ್ಪ ಕೃಷಿಯಲ್ಲಿ ಒಳ್ಳೆಯ ಸಾಧನೆಗಳಾಗಿವೆ. ಐದು ವರ್ಷಗಳ ಹಿಂದೆ ಹಣ್ಣು ಮತ್ತು ಹೂಗಳ ರಫ್ತಿನ ಬಗ್ಗೆ ನಾವು ವಿಚಾರ ಮಾಡುವಂತಿರಲಿಲ್ಲ. ಈ ವರ್ಷ ನಾವು ಮಾಲ್ಡಾದ ಮಾವಿನ ಹಣ್ಣುಗಳನ್ನು ಚೀನಾಕ್ಕೆ ರಫ್ತು ಮಾಡುತ್ತಿದ್ದೇವೆ. ಕಳೆದ ವರ್ಷದಿಂದ ಮಾವು ಮತ್ತು ಲಿಚಿ ಹಣ್ಣುಗಳನ್ನು ಯುರೋಪಿನ ಆರು ದೇಶಗಳಿಗೆ ರಫ್ತು ಮಾಡುತ್ತಿದ್ದೇವೆ.

ಪ್ರ: ಕೃಷಿಯಲ್ಲಿ ಮೌಲ್ಯವರ್ಧನೆ ಹೇಗೆ ಆಗುತ್ತದೆ?

ಉ: ಹೌದು. ನಾವು ಆಹಾರ ಸಂಸ್ಕರಣವನ್ನು ದೊಡ್ಡ ಪ್ರಮಾಣದಲ್ಲಿ ತೆಗೆದುಕೊಳ್ಳುತ್ತಿದ್ದೇವೆ. ಐದು ಕೃಷಿ ರಫ್ತು ಕ್ಷೇತ್ರಗಳನ್ನು ಗುರುತಿಸಲಾಗಿದೆ. ಅನಾನಸ್, ಮಾವು, ಆಲೂಗಡ್ಡೆ, ಲಿಚಿ ಮತ್ತು ತರಕಾರಿಗಳನ್ನು ಈ ವಲಯಗಳಲ್ಲಿ ಸಂಸ್ಕರಿಸಲಾಗುತ್ತದೆ. ಈ ವಲಯಗಳಲ್ಲಿ ಸರ್ಕಾರ ಉಗ್ರಾಣ, ಬಹುಪಯೋಗಿ ಶೈತ್ಯೀಕರಿಸಿದ ಉಗ್ರಾಣಗಳು ಇತ್ಯಾದಿ ಸೌಲಭ್ಯಗಳನ್ನು ಸೃಷ್ಟಿಸಿದೆ.

ಪ್ರ: ಈ ಎಲ್ಲ ಯೋಜನೆಗಳು ಅನುಷ್ಠಾನದ ಯಾವ ಹಂತದಲ್ಲಿವೆ?

ಉ: ಆಹಾರ ಸಂಸ್ಕರಣ ಯೋಜನೆಗಳು ಆಗಲೇ ಪ್ರಾರಂಭವಾಗಿವೆ. ಕಳೆದೆರೆಡು ವರ್ಷಗಳಲ್ಲಿ ನಾವು ತಾಜಾ ಹಣ್ಣಿನ ಸಂಸ್ಕರಣದ ಮೇಲೆ ಗಮನ ಕೇಂದ್ರೀಕರಿಸಿದೆವು. ಮುಂದಿನ ಬೇಸಿಗೆಯುಷ್ಟೊತ್ತಿಗೆ ಅನಾನಸ್ ರಸವನ್ನು ರಫ್ತು ಮಾಡಲಿದ್ದೇವೆ.

ಆಹಾರ ಧಾನ್ಯ, ತೋಟಗಾರಿಕೆ ಮತ್ತು ಪುಷ್ಪ ಕೃಷಿಯ ನಂತರ ನಮ್ಮ ಮೊದಲ ಆದ್ಯತೆ ಬೆಳೆಗಳ ವೈವಿಧ್ಯತೆ ಜಾರಿಗೊಳಿಸುವುದು. ಗೋಧಿ, ದ್ವಿದಳ ಧಾನ್ಯ ಮತ್ತು ಎಣ್ಣೆಕಾಳುಗಳ ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸಲಿದ್ದೇವೆ. ನಾನು ಎಲ್ಲ ವಿಸ್ತರಣಾಧಿಕಾರಿಗಳನ್ನು ಭೇಟಿ ಮಾಡಿ ಇದನ್ನು ಅವರಿಗೆ ವಿವರಿಸಲಿದ್ದೇನೆ.

ಮೀನುಗಾರಿಕೆ ಮತ್ತು ಪಶುಸಂಗೋಪನೆ ಇತರ ಎರಡು ಮುಖ್ಯ ಕ್ಷೇತ್ರಗಳು. ಮೀನುಗಾರಿಕೆಯಲ್ಲಿ ನಾವು ದೇಶದಲ್ಲೇ ಅತಿದೊಡ್ಡ ಉತ್ಪಾದಕರಾಗಿ ಯಶಸ್ಸನ್ನು ಪಡೆದಿದ್ದೇವೆ (1.3 ದಶಲಕ್ಷ ಟನ್ನುಗಳು)

ಈ ಎಲ್ಲಾ ಯಶಸ್ಸುಗಳನ್ನು ಕ್ರೋಢೀಕರಿಸಿ ಗಟ್ಟಿಗೊಳಿಸುವುದು ನಮ್ಮ ಆದ್ಯತೆ. ಈ ಆರ್ಥಿಕ ಕ್ಷೇತ್ರಗಳಲ್ಲಿ ತಕ್ಕಮಟ್ಟಿಗಿನ ಯಶಸ್ಸು ಪಡೆಯಲು ಸಾಧ್ಯವಾಗಿರುವುದರಿಂದಲೇ ನಮ್ಮಲ್ಲಿ ಆಡಳಿತ ವಿರೋಧಿ ಅಲೆ ಕೆಲಸ ಮಾಡಲಿಲ್ಲವೆಂದೆನಿಸುತ್ತದೆ. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಇದರಲ್ಲಿ ದೊಡ್ಡ ಪಾತ್ರ ವಹಿಸಿದೆ.

> **ಆರ್ಥಿಕ ಕ್ಷೇತ್ರಗಳಲ್ಲಿ ತಕ್ಕಮಟ್ಟಿಗಿನ ಯಶಸ್ಸು ಪಡೆಯಲು ಸಾಧ್ಯವಾಗಿರುವುದರಿಂದಲೇ ನಮ್ಮಲ್ಲಿ ಆಡಳಿತ ವಿರೋಧಿ ಅಲೆ ಕೆಲಸ ಮಾಡಲಿಲ್ಲವೆಂದೆನಿಸುತ್ತದೆ. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಇದರಲ್ಲಿ ದೊಡ್ಡ ಪಾತ್ರ ವಹಿಸಿದೆ.**

ಪ್ರ: ಕೃಷಿಯ ಹೊರತಾಗಿ ನೀವು ಉದ್ದಿಮೆಗಳಿಗೆ ಏನು ಮಾಡಿದ್ದೀರಿ?

ಉ: 1994 ರಲ್ಲಿ ನಾವು ನಮ್ಮ ಔದ್ಯಮಿಕ ನೀತಿಯನ್ನು ಪ್ರಕಟಿಸಿದ ನಂತರ ವಿವಿಧ ಉದ್ದಿಮೆಗಳಲ್ಲಿ ಹೂಡಿಕೆ ಆಕರ್ಷಿಸುವ ಪ್ರಯತ್ನ ಮಾಡಿದ್ದೇವೆ. ಕಳೆದ ಮೂರು ವರ್ಷಗಳಲ್ಲಿ ಈ ದಿಸೆಯಲ್ಲಿ ನಾವು ಹೆಚ್ಚಿನ ಯಶಸ್ಸು ಕಂಡಿದ್ದೇವೆ. 2002 ರಲ್ಲಿ 2300 ಕೋಟಿ ರೂಪಾಯಿಗಳ ಹೂಡಿಕೆ ಹರಿದುಬಂದಿತು. 2004 ರಲ್ಲಿ ಹೂಡಿಕೆ 2500 ಕೋಟಿ ರೂಪಾಯಿಗಳನ್ನು ಮೀರಲಿದೆ. ಹೂಡಿಕೆಯ ಮುಖ್ಯ ಕ್ಷೇತ್ರ ಉಕ್ಕು ಮತ್ತು ಕಬ್ಬಿಣ. ಅದೂ ಗಣಿಗಾರಿಕೆ ಪ್ರದೇಶಗಳ ಸುತ್ತಮುತ್ತ.

ಎರಡನೆಯದಾಗಿ ಪೆಟ್ರೋ ರಸಾಯನಿಕಗಳು, ರಾಸಾಯನಿಕಗಳು ಮತ್ತು ಪ್ಲಾಸ್ಟಿಕ್, ಹಾಲ್ಡಿಯಾ ಇವುಗಳಿಗೆ ಮುಖ್ಯಕೇಂದ್ರ ಭಾರತದಲ್ಲೇ ಅತಿ ಹೆಚ್ಚು ಜಪಾನೀ ಹೂಡಿಕೆ ಪ.ಬಂಗಾಳದಲ್ಲಿ ಅಂದರೆ ಹಾಲ್ಡಿಯಾದಲ್ಲಿ ಆಗಿದೆ (ಮಿತ್ಸುಬಿಷಿ ಕಂಪನಿಯಿಂದ). ಮೂರನೆಯದಾಗಿ ಕೃಷಿ ವ್ಯಾಪಾರ, ನಾಲ್ಕನೆಯದು ಮಾಹಿತಿ ತಂತ್ರಜ್ಞಾನ.

ಪ್ರ: ಮಾಹಿತಿ ತಂತ್ರಜ್ಞಾನ ಬಹಳ ಸುದ್ದಿಯಲ್ಲಿದೆ. ಅದರ ಬಗ್ಗೆ ಸ್ವಲ್ಪಹೇಳುತ್ತೀರಾ?

ಉ: ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಈ ಶತಮಾನದ ವಿಜ್ಞಾನಗಳು. ಇಂದು ಈ ತಂತ್ರಜ್ಞಾನಗಳಿಲ್ಲದೆ ಯಾವುದೇ ದೇಶ ಪ್ರಗತಿ ಹೊಂದಲಾರದು. ಮಾಹಿತಿ ತಂತ್ರಜ್ಞಾನದ ವಿಷಯದಲ್ಲಿ ನಾವು ತಡವಾಗಿ ಅಡಿಯಿರಿಸಿದ್ದೇವೆ. ಆದರೆ ಕಳೆದ ಸಾರಿ ಹೈದರಾಬಾದಿನಲ್ಲಿ ಚಂದ್ರಬಾಬು ನಾಯ್ಡು ಅವರನ್ನು ಭೇಟಿ ಮಾಡಿದಾಗ ಇನ್ನು ಎರಡು ಮೂರು ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ನಿಮ್ಮ ರಾಜ್ಯವನ್ನು ನಾವು ಹಿಂದೆ ಹಾಕುತ್ತೇವೆ ಎಂದು ಹೇಳಿದ್ದೇನೆ.

ಕಳೆದ ಒಂದು ವರ್ಷದಲ್ಲಿ ದೊಡ್ಡ ದೊಡ್ಡ ವಿದೇಶಿ ಮತ್ತು ದೇಶಿ ಕಂಪನಿಗಳನ್ನು ಆಕರ್ಷಿಸುವಲ್ಲಿ ನಾವು ಯಶಸ್ವಿಯಾಗಿದ್ದೇವೆ - ಐಬಿಎಂ, ಕಾಗ್ನಿಸೆಂಟ್, ವಿಪ್ರೋ, ಸತ್ಯಮ್, ರಿಲೆಯನ್ಸ್, ಟಾಟಾ, ಐಟಿಸಿ, ಜಿಇ.... ಇತ್ಯಾದಿ ನಮಗೆ ಈ ಕಂಪನಿಗಳಿಗೆ ಸ್ಥಳ ನೀಡುವುದೇ ಕಷ್ಟವಾಗಿದೆ. ಇಲ್ಲಿ ಹೈದರಾಬಾದಿನಂತೆ ಮರಳುಗಾಡಿಲ್ಲ. ನೋಡಿ ಆದ್ದರಿಂದಲೇ ಭೂಮಿ ಒದಗಿಸುವುದು ಕಷ್ಟ.


ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಪ.ಬಂಗಾಳದಲ್ಲಿ ನಿಜವಾದ ಪ್ರಗತಿ ಆಗಿದೆ ಎಂದು ಹೇಳಬಲ್ಲೆ. ಸಾಲ್ಟ್ ಲೇಕ್‌ನಲ್ಲಿ 137 ಕಂಪನಿಗಳಿವೆ. ಎರಡನೇ ಮಾಹಿತಿ ತಂತ್ರಜ್ಞಾನ ಕೇಂದ್ರ ಸನ್‌ರೈಸ್ ಸಿಟಿಯಲ್ಲಿ ಬರಲಿದೆ. ಮೂರನೇ ಕೇಂದ್ರ ರಾಜರ್‌ಹಾಟ್‌ನಲ್ಲಿ ಬರಲಿದೆ.

ಪ್ರ: ನಿಮ್ಮ ಉಳಿದೆರಡು ವರ್ಷಗಳ ಅವಧಿಯಲ್ಲಿ ಯಾವ ಕ್ಷೇತ್ರಗಳಿಗೆ ಒತ್ತು ನೀಡಲಿದ್ದೀರಿ?

ಉ: ಗ್ರಾಮೀಣ ಅಭಿವೃದ್ಧಿ ಮತ್ತು ಔದ್ಯಮಿಕ ಹೂಡಿಕೆಗಳಿಗೆ ಒತ್ತು ಇರುತ್ತದೆ ಎಂಬುದನ್ನು ಹೇಳುವ ಅವಶ್ಯಕತೆ ಇಲ್ಲವೆಂದೆನಿಸುತ್ತದೆ. ಇದಲ್ಲದೆ, ಶಿಕ್ಷಣದ ಗುಣಮಟ್ಟ, ಅದರಲ್ಲೂ ವಿಶೇಷವಾಗಿ ಬೋಧನೆಯ ಗುಣಮಟ್ಟದ ಮೇಲೆ ಪ್ರಾಥಮಿಕ ಹಂತದಿಂದಲೂ ಒತ್ತು ನೀಡಲಾಗುವುದು.

ಪ್ರ: ಆರೋಗ್ಯ ಕ್ಷೇತ್ರ?

ಉ: ಶಿಕ್ಷಣದ ಜೊತೆಗೆ ಆರೋಗ್ಯ ಸೇವೆಗಳ ಬಗೆಗೂ ನಾವು ಒತ್ತು ನೀಡುತ್ತಿದ್ದೇವೆ. ನಾವು



ರಾಜ್ಯದ ಜನಸಂಖ್ಯೆಯ ಶೇ 70 ರಷ್ಟು ಭಾಗಕ್ಕೆ ಉತ್ತಮ ಆರೋಗ್ಯ ಸೇವೆ ಒದಗಿಸುವುದು ಸಾಧ್ಯವಾಗಿದೆ. ದೇಶದ ಬೇರೆ ಯಾವುದೇ ರಾಜ್ಯವೂ ಶೇ 50 ಕ್ಕಿಂತ ಹೆಚ್ಚು ಜನಸಂಖ್ಯೆಗೆ ಈ ಸೇವೆ ಒದಗಿಸಲು ಶಕ್ತವಾಗಿಲ್ಲ. ನಾವು ಖಾಸಗಿಯವರನ್ನು ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸುಧಾರಣೆ ಮಾಡಲು ಆಹ್ವಾನಿಸುತ್ತಿದ್ದೇವೆ.

ಇಲ್ಲಿಗೆ ಅಪೊಲೊ ಬಂದಿದೆ. ಡಾ. ದೇವಿಶೆಟ್ಟಿ (ಹೃದ್ರೋಗ), ಡಾ. ಬದರಿನಾಥ್(ಕಣ್ಣು) ಇವರೆಲ್ಲ ಉತ್ತಮ ಪ್ರತಿಕ್ರಿಯೆ ತೋರಿಸಿದ್ದಾರೆ. ಆಸ್ಪತ್ರೆಗಳೊಳಗಿನ ವಾತಾವರಣವನ್ನು ಸುಧಾರಿಸುವುದೇ ಸ್ವಲ್ಪ ಕಷ್ಟಕರವಾದ ಕೆಲಸವಾಗಿದೆ.

ಪ್ರ: ಉದ್ದಿಮೆಗಳನ್ನು ತೆಗೆದುಕೊಳ್ಳುವುದಾದರೆ ಹಾಲ್ಡಿಯಾ ಹೊರತಾಗಿ ಬೇರಾವ ಪ್ರದೇಶದಲ್ಲೂ ಹೂಡಿಕೆಗಳಾಗುತ್ತಿಲ್ಲವೇ? ಹಾಲ್ಡಿಯಾ ಒಂದೇ ಉದಾಹರಣೆಯೇ?

ಉ: ಹಾಲ್ಡಿಯಾ ಹೊಸತು. ಇದೊಂದೇ ಉದಾಹರಣೆಯಲ್ಲ. ಕಲ್ಯಾಣಿ, ಉಲುಬೇರಿಯಾ, ದುರ್ಗಾಪುರ, ಅಸನ್ಸೋಲ-ಬಂಕುಲಾ ಕ್ಷೇತ್ರ ಮತ್ತು ಸಿಲಿಗುರಿ ಇತರ ಉದಾಹರಣೆಗಳು.

ಹಾಲ್ಡಿಯಾಕ್ಕೆ ಹಲವು ಅನುಕೂಲಗಳಿವೆ. ಆದ್ದರಿಂದಲೇ ಅದಕ್ಕೆ ಆ ಪ್ರಾಮುಖ್ಯತೆ. ಇಲ್ಲಿ ರಷ್ಯನ್ನರು ಒಂದು ಟ್ರಕ್ ಕಂಪನಿ ಪ್ರಾರಂಭಿಸಿದ್ದಾರೆ. ಅದು ನಮ್ಮ ರಕ್ಷಣಾ ವ್ಯವಸ್ಥೆಗೆ ಪೂರೈಕೆಗಳನ್ನು ಮಾಡುತ್ತಿದೆ.

ಪ್ರ: ಪ.ಬಂಗಾಳದ ಹಣಕಾಸು ಸ್ಥಿತಿ ಹೇಗಿದೆ?

ಉ: ಅಷ್ಟು ಅನುಕೂಲಕರವಾಗಿಲ್ಲ. ಬೇರೆ ಹಲವು ರಾಜ್ಯಗಳಲ್ಲಿನಂತೆ. ಇದು ಪ.ಬಂಗಾಳದ್ದೊಂದೇ ಸಮಸ್ಯೆಯಲ್ಲ. ರಾಜ್ಯದ ಹಣಕಾಸು ಮಂತ್ರಿ ಡಾ. ಅಸಿಮ್ ದಾಸ್ ಗುಪ್ತ ಕೇಂದ್ರದ ಹಣಕಾಸು ಮಂತ್ರಿ ಪಿ.ಚಿದಂಬರಂ ಅವರ ಜೊತೆಗೆ ಆಗಲೇ ಮಾತನಾಡಿದ್ದಾರೆ. ನಿಮಗೆ ಗೊತ್ತಿರುವಂತೆ ನಾವು ಆಗಲೇ 1ನೇ ಹಣಕಾಸು ಆಯೋಗಕ್ಕೆ ಮನವಿಯೊಂದನ್ನು ಸಲ್ಲಿಸಿದ್ದೇವೆ.

ಮೊದಲನೆಯದು ಕೇಂದ್ರ ತನ್ನ ಹಣಕಾಸು ನೆರವಿನ ಮೇಲೆ ಬಡ್ಡಿಯ (ಶೇ. 12) ಹೊರೆಯನ್ನು ಹೇರಿದೆ. ಇದು ನ್ಯಾಯಯುತವಾದದ್ದಲ್ಲ. ಬ್ರಿಟಿಷ್ ಸರ್ಕಾರದಿಂದ ನಾವು ಶೇ 1.65 ಬಡ್ಡಿ ದರದಲ್ಲಿ ನಾಗರಿಕ ಸೌಲಭ್ಯಗಳಿಗಾಗಿ ನೆರವಿನ ಪ್ರಸ್ತಾಪವನ್ನು ಇದೀಗ ತಾನೆ ಪಡೆದಿದ್ದೇವೆ.

ಎರಡನೆಯದಾಗಿ ಸಂಪನ್ಮೂಲಗಳ ಹೆಚ್ಚಿನ ವಿಕೇಂದ್ರೀಕರಣ ಆಗುವ ಅವಶ್ಯಕತೆಯಿದೆ. ಸಣ್ಣ ಉಳಿತಾಯದ ವಿಷಯದಲ್ಲಿ ನಾವು ಹೆಚ್ಚು ಸಾಧಿಸಿರುವುದರಿಂದ ನಮಗೆ ಶಿಕ್ಷೆ ನೀಡಲಾಗುತ್ತಿದೆ.

ಇನ್ನೊಂದೆಡೆ ನಾವು ನಮ್ಮ ಆಂತರಿಕ ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡಿದ್ದೇವೆ. ಹಲವು ವೆಚ್ಚ ಕಡಿತ ಕ್ರಮಗಳನ್ನು ನಾವು ಕೈಗೊಂಡಿದ್ದೇವೆ. ರಾಜ್ಯ ಸರ್ಕಾರದ 56 ಉತ್ಪಾದನಾ ಘಟಕಗಳಿವೆ. ಇವುಗಳಲ್ಲಿ ಬಹುತೇಕ ಲಾಭದಾಯಕವಲ್ಲ. ಪ್ರೈಸ್ ವಾಟರ್ ಹೌಸ್ ಕೂಪರ್ಸ್ ನೆರವಿನಿಂದ ಈ ಎಲ್ಲ ಘಟಕಗಳನ್ನು ಸರಿಪಡಿಸಲು ಪ್ರಯತ್ನಿಸುತ್ತಿದ್ದೇವೆ (ಎರಡು ಘಟಕಗಳನ್ನು ಆಗಲೇ ಮುಚ್ಚಲಾಗಿದೆ)

ಬ್ರಿಟಿಷ್ ಡಿಎಫ್‌ಐಡಿ ನಿಧಿಯ ನೆರವಿನಿಂದ ಕೆಲಸಗಾರರ ಹಿತವನ್ನು ಕಾಯ್ದುಕೊಳ್ಳಲಾಗುತ್ತದೆ.

ಇವೆಲ್ಲವುಗಳಿಂದಾಗಿ ರಾಜ್ಯದ ಹಣಕಾಸು ಸುಸ್ಥಿತಿ ಸ್ವಲ್ಪ ಉತ್ತಮಗೊಂಡಿದೆ.

ಪ್ರ: ಪ.ಬಂಗಾಳಕ್ಕೆ ಈಗಲೂ ಕೆಟ್ಟ ಹೆಸರಿರುವಂತಿದೆ. ಇದು ಸರಿಯೇ?

ಉ : ದೇಶದ ವಿವಿಧ ಭಾಗಗಳಲ್ಲಿ ಮತ್ತು ವಿದೇಶಗಳಲ್ಲಿ ನಮಗೆ ಕೆಟ್ಟ ಹೆಸರಿದೆ. ಇದಕ್ಕೆ ಮುಖ್ಯ ಕಾರಣ ‘ಎಡರಂಗ’ ಎಂಬ ಹೆಸರಿನ ಸರ್ಕಾರದ್ದು. ಬಹಳ ಜನ ‘ಎಡ’ ಎಂಬ ಪದವನ್ನು ಸುಲಭದಲ್ಲಿ ಸ್ವೀಕರಿಸುವುದಿಲ್ಲ.

ಇತ್ತೀಚೆಗೆ ಒಬ್ಬ ವಿದೇಶಿ ರಾಯಭಾರಿಗೆ ನಾನು ಹೇಳಿದೆ ‘ನೀವು ಚೀನಾದ ಜೊತೆಗೆ ವ್ಯವಹಾರ ಮಾಡಬಲ್ಲಿರಾದರೆ ನಮ್ಮ ಜೊತೆಗೆ ವ್ಯವಹಾರಕ್ಕೆ ತೊಂದರೆಯೇನು?’ ನಿಮ್ಮನ್ನು ಉದ್ಯಮ ಸ್ಥಾಪಿಸಿ ಎಂದು ಆಹ್ವಾನಿಸಿ ನಾವುಅದನ್ನು ನಾಳೆ ರಾಷ್ಟ್ರೀಕರಿಸುವಷ್ಟು ಮೂರ್ಖರಲ್ಲ.

ಹಲವು ದೊಡ್ಡ ಕಂಪನಿಗಳು ಬರುತ್ತಿರುವುದರಿಂದ ನಮ್ಮ ಹೆಸರು ಉತ್ತಮಗೊಳ್ಳುತ್ತಿದೆ ಎನ್ನಬಹುದು.

ಇಂಡೋನೇಶಿಯಾದ ಬೇನಿಸುತೋಸ್ ಇಲ್ಲಿ ದ್ವಿಚಕ್ರ ವಾಹನಗಳ ಉತ್ಪಾದನೆಗೆ ಬರಲಿದೆ. ಅದು ಗ್ರಾಮೀಣ ಪ್ರದೇಶಗಳಲ್ಲಿ ಬಳಸಬಹುದಾದ ದ್ವಿಚಕ್ರವಾಹನಗಳನ್ನು ಉತ್ಪಾದಿಸಲಿದೆ.

ಪ್ರ: ವಿದೇಶೀ ಹೂಡಿಕೆದಾರರ ಅನುಭವವೇನು?

ಉ: ಇಲ್ಲಿಯವರೆಗೆ ಒಂದೇ ಒಂದು ಆಳು ಕೆಲಸವನ್ನು ಕಳೆದುಕೊಂಡಿಲ್ಲ. ಪ.ಬಂಗಾಳ ಉತ್ತಮ ಹೂಡಿಕೆ ತಾಣ ಎಂಬ ಹೆಸರನ್ನು ಜಪಾನಿಯರಲ್ಲಿ ಗಳಿಸಿದೆ. ವಿಡಿಯೋಕಾನ್ ಸಹ ಇಲ್ಲೊಂದು ಉತ್ಪಾದನಾ ಘಟಕ ಸ್ಥಾಪಿಸಲಿದೆ ಎಂಬ ಸುದ್ದಿ ಈಗಷ್ಟೇ ಬಂದಿದೆ. ನಾವು ಹೂಡಿಕೆ ಪರ ಸರ್ಕಾರ ಎಂಬುದನ್ನು ನಾನು ಒತ್ತಿ ಹೇಳಬೇಕಾಗಿದೆ. ಪರಸ್ಪರರ ಹಿತದೃಷ್ಟಿಯಿಂದ ಉತ್ತಮ ಸಹಕಾರ ಮೂಡಿಬರಲಿದೆ. **ಹೂಡಿಕೆದಾರರಿಗೆ ಲಾಭ ಬೇಕು. ನಮಗೆ ಹೆಚ್ಚಿನ ಆದಾಯ ಮತ್ತು ಕೆಲಸಗಳು ಬೇಕು.**

ಪ್ರ: ಆಂಧ್ರ ಪ್ರದೇಶದ ಅನುಭವದಿಂದ ಕಲಿಯುವ ಪಾಠವೇನಾದರೂ ಇದೆಯೇ?

ಉ: ಚಂದ್ರಬಾಬು ನಾಯ್ಡು ಅವರ ಸೋಲಿಗೆ ಮುಂಚೆ ನಾನಲ್ಲಿ ಹೋಗಿದ್ದೆ. ಹೈದರಾಬಾದು ಕಲ್ಕತ್ತಕ್ಕಿಂತ ಹೆಚ್ಚು ಪ್ರಕಾಶಿಸುತ್ತಿದೆ. ನಾನು ಹೈದರಾಬಾದಿನಿಂದ 106 ಕಿ.ಮಿ. ದೂರದಲ್ಲಿರುವ ನಲ್ಗೊಂಡದಲ್ಲಿ ಚುನಾವಣಾ ಸಭೆಯನ್ನುದ್ದೇಶಿಸಿ ಮಾತನಾಡಿದೆ.

ಈ ಪ್ರದೇಶದಲ್ಲಿ ಬಡತನ ನಂಬಲಸಾಧ್ಯವಾದದ್ದು. ಗ್ರಾಮೀಣ ಆಂಧ್ರಪ್ರದೇಶದ ಪರಿಸ್ಥಿತಿಯನ್ನು ನೋಡಿ ಆಗಲೇ ನಾನು ಚಂದ್ರಬಾಬು ನಾಯ್ಡು ಬಹಳ ದಿನ ಅಧಿಕಾರದಲ್ಲುಳಿಯವುದಿಲ್ಲ ಎಂದುಕೊಂಡೆ. ಇದರ ಪಾಠವೇನೆಂದರೆ **ಗ್ರಾಮೀಣ ಪ್ರದೇಶಗಳನ್ನು ನಿರ್ಲಕ್ಷಿಸಿದ ಯಾವುದೇ ರಾಜ್ಯ ಸರ್ಕಾರವೂ ಅಧಿಕಾರದಲ್ಲುಳಿಯಲು ಸಾಧ್ಯವಿಲ್ಲ ಎಂಬುದು.**

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಅಂತರಾಷ್ಟ್ರೀಯ ಜನಸಂಖ್ಯಾ ದಿನಾಚರಣೆ (11-07-2004)

ಸಮಸ್ಯೆ ಜನಸಂಖ್ಯೆಯೋ ಅಥವಾ ಮಹಿಳಾ ಸಾಕ್ಷರತೆಯೋ?

ಜನಸಂಖ್ಯೆಯನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅರ್ಥ ಮಾಡಿ ಕೊಳ್ಳುತ್ತಾರೆ. ರಾಜಕಾರಣಿಗೆ ಅದು ವೋಟ್ ಬ್ಯಾಂಕ್ (vote bank) ಆದರೆ, ಅರ್ಥ ಶಾಸ್ತ್ರಜ್ಞನಿಗೆ ಸಂಪತ್ತು ಹಂಚಿಕೆಯ ಪಾಲುದಾರರು, ಉದ್ಯೋಗಪತಿಗೆ, ಕೂಲಿಗಾರರೆಷ್ಟು ಎಂಬುದು ಮುಖ್ಯವಾಗುತ್ತದೆ. ಶ್ರೀಮಂತ ದೇಶದ ಜನರಿಗೆ ಹಾಗೂ ಬಡದೇಶದ ಶ್ರೀಮಂತರಿಗೆ, ಜನಸಂಖ್ಯೆ ಎಂಬುದು ಒಂದು ಸಮಸ್ಯೆ ಹಾಗೂ ತಮ್ಮ ಉಳಿವಿಗೆ ಆತಂಕ ಎಂದು ಅವರು ಪರಿಗಣಿಸುತ್ತಾರೆ.

ಇಂದು ದೊರಕುವ ಜನಸಂಖ್ಯೆ ಹತೋಟಿ ವಿಧಾನಗಳು ಪಾಶ್ಚಿಮಾತ್ಯ ದೇಶಗಳು ಮೂರನೇ ಜಗತ್ತಿನ ಜನರ ಮೇಲೆ ಹೇರಲಾಗುತ್ತಿರುವ ಸಾಧನಗಳಾಗಿವೆ. ಈ ವಿಧಾನಗಳನ್ನು ಮೂರನೇ ಜಗತ್ತಿನ ರಾಷ್ಟ್ರಗಳ ಸರಕಾರದ ಸಹಾಯದಿಂದ ಅರ್ಹ ಮಹಿಳೆಯ ಮೇಲೆ ಉಪಯೋಗಿಸಲಾಗುತ್ತಿದೆ. ಅಂತರಾಷ್ಟ್ರೀಯ ಸಂಸ್ಥೆಗಳು ಈ ಕಾರ್ಯಕ್ರಮಗಳ ಮೇಲೆ ಸಾಕಷ್ಟು ಹಣ ಖರ್ಚು ಮಾಡಿ ಜಾರಿಗೊಳಿಸುತ್ತಿವೆ. ಆದರೆ ಈ ಕಾರ್ಯಕ್ರಮಗಳು ಗುರಿಸಾಧಿಸಲು ಸಾಧ್ಯವಾಗುತ್ತಿಲ್ಲ.

ಸಾಮಾಜಿಕ, ಆರ್ಥಿಕ ಬೆಳವಣಿಗೆ ಹಾಗೂ ಕ್ಷೇಮಾಭಿವೃದ್ಧಿಯ ಕೊರತೆ ಇದ್ದಾಗ ಹಾಗೂ ಪ್ರತಿಕೂಲದ ವಾತಾವರಣವಿದ್ದಾಗ, ಮಕ್ಕಳೇ ತಮ್ಮ ಜೀವನದ ಆಧಾರ ಎಂದು ಬಡವರು ನಂಬಿದ್ದಾರೆ. ಇಂತಹ ಸನ್ನಿವೇಶದಲ್ಲಿ ಶ್ರೀಮಂತರು ತಮ್ಮ ಲಾಭೋದ್ದೇಶದಿಂದ ಜಾರಿಗೆ ತಂದ ಜನಸಂಖ್ಯಾ ನಿಯಂತ್ರಣ ವಿಧಾನಗಳು ಬಡವರನ್ನು ಮನವೊಲಿಸಲಾರವು.

ತುರ್ತು ಪರಿಸ್ಥಿತಿಯಲ್ಲಿ ಗಂಡಸರಿಗೆ ಬಲಾತ್ಕಾರದಿಂದ ಜಾರಿಗೊಳಿಸಿದ ಜನಸಂಖ್ಯಾ ನಿಯಂತ್ರಣ ಕಾರ್ಯಕ್ರಮಗಳು ಆಗಿನ ಸರಕಾರವನ್ನು ಉರುಳಿಸಿದವು. ಆದರೆ ಈಗಲೂ ಐಯುಡಿ (ಮಹಿಳೆಯ ಗರ್ಭದಲ್ಲಿ ಅಳವಡಿಸುವ ಸಾಧನ), ಎಂಟಿಪಿ (ಗರ್ಭಪಾತ), ಲ್ಯಾಪ್ರೋಸ್ಕೋಪಿಕ್ ಟ್ಯೂಬೆಕ್ಟಮಿ (ಮಹಿಳಾ ವಿಧಾನ), ಎನ್ಎಸ್ವಿ (ಗಂಡಸರ ವಿಧಾನ), ನಾರ್‌ಪ್ಲಾಂಟ್ ಚುಚ್ಚುಮದ್ದು (ಗರ್ಭತಡೆಗೆ ಚುಚ್ಚುಮದ್ದು), ವ್ಯಾಕ್ಸೀನ್ (ಈಗ ಪರೀಕ್ಷೆ ಮಾಡಲಾಗುತ್ತಿದೆ) ಮುಂತಾದ ವಿಧಾನಗಳನ್ನು ಮನವೊಲಿಸಿ ಉಪಯೋಗಿಸಲಾಗುತ್ತಿದೆ. ಜನಸಂಖ್ಯೆ ನಿಯಂತ್ರಣವನ್ನು ಒಪ್ಪದವರಿಗೆ ಶಿಕ್ಷೆಗಳನ್ನು ನೀಡಲಾಗುತ್ತಿದೆ. ಈ ವಿಧಾನಗಳನ್ನು ಕುಟುಂಬ ಯೋಜನೆ, ಕುಟುಂಬ ಕಲ್ಯಾಣದ ಹಸರಿನಲ್ಲಿ ಸಾಮಾಜಿಕ ಸಮಸ್ಯೆಗೆ ಪರಿಹಾರಕ್ಕಾಗಿ ನೀಡುವುದರಿಂದ ಬಡಜನರನ್ನು ಇವು ಆಕರ್ಷಿಸಲಾಗುತ್ತಿಲ್ಲ ಹಾಗೂ ಈ ವಿಧಾನಗಳನ್ನು ಆರೋಗ್ಯ ಕೇಂದ್ರಗಳ ಮೂಲಕ ಜಾರಿಗೊಳಿಸಲಾಗುತ್ತಿದ್ದುದರಿಂದ ಜನರು ತಮ್ಮ ಆರೋಗ್ಯ ಸಮಸ್ಯೆಗಳಿಗೂ ಈ ಆರೋಗ್ಯ ಕೇಂದ್ರಗಳಿಗೆ ಬರಲು ಭಯಪಡುತ್ತಿದ್ದಾರೆ. ಆದ್ದರಿಂದ ಈ ಕೇಂದ್ರಗಳು ಜನರಿಂದ ತಿರಸ್ಕೃತವಾಗಿವೆ.

ಕೇವಲ ಕಾರ್ಯಕ್ರಮದ ಹೆಸರು ಬದಲಿಸಿ ಜನರ ಮನದಲ್ಲಿ ಬದಲಾವಣೆ ತರಲು ಸಾಧ್ಯವಾಗದು. ಜನರ ಮನದಲ್ಲಿ ಬದಲಾವಣೆ ತರಲು ಶಿಕ್ಷಣ, ಆರೋಗ್ಯ ಹಾಗೂ ಗ್ರಾಮೀಣ ಬೆಳವಣಿಗೆಯಲ್ಲಿ ಮೂಲಭೂತ ಬದಲಾವಣೆ ತರಬೇಕಾಗುತ್ತದೆ.

ಉದ್ಯೋಗ ಕ್ರಾಂತಿಯ ಪ್ರಾರಂಭದ ದಿನಗಳಲ್ಲಿ ಕಂಡು ಬಂದ ಒಂದು ಸತ್ಯವೆಂದರೆ ಬಡತನ ಹಾಗೂ ಕುಟುಂಬದ ಸದಸ್ಯರ ಸಂಖ್ಯೆಗೆ ಸಂಬಂಧವಿದೆ ಎಂದು. ಇದನ್ನು ಆಫ್ರಿಕಾ, ಇಂಗ್ಲೆಂಡ್ ಹಾಗೂ ಭಾರತದ ಬೀಮಾರು ರಾಜ್ಯಗಳಲ್ಲಿ ಕಂಡುಹಿಡಿಯಲಾಗಿದೆ. ಬಡಜನರ ಕುಟುಂಬದ ಸದಸ್ಯರ ಸಂಖ್ಯೆ ಹೆಚ್ಚು ಎಂದು ಹೇಳಬಹುದು. ಇದು ಪ್ರಕೃತಿ ಸಾಧಿಸುವ ಸಮತೋಲನೆ.

ಜನಸಂಖ್ಯೆ ನಿಯಂತ್ರಣ ಕೇವಲ



ಸಮೃದ್ಧಿಯಿಂದ ಎಂಬ ಅಂಶ ತಪ್ಪು ಎಂದು ಭಾರತದ ಕೇರಳದಲ್ಲಿ ಸಿದ್ಧಪಡುತ್ತದೆ. ಭಾರತದ ತಲಾ ಆರೋಗ್ಯದ ವಾರ್ಷಿಕ ಖರ್ಚು 15 ಯು.ಎಸ್.ಡಾಲರ್‌ನಷ್ಟು. ಆದರೆ ಜರ್ಮನಿಯ ತಲಾ ಆರೋಗ್ಯದ ವಾರ್ಷಿಕ ಖರ್ಚು 3000 ಯು.ಎಸ್. ಡಾಲರ್‌ಗಳು. ಆದರೂ ಭಾರತ ಒಟ್ಟು ಸಂತಾನೋತ್ಪತ್ತಿಯ ಸೂಚಿ (Net Reproductive Index) ಒಂದನ್ನು (1) ತಲುಪಿದರೂ, ಜರ್ಮನಿ ಸಾಧಿಸಲಾಗದೇ ಹಿಂದೆ ಬಿದ್ದಿದೆ. ಇದರಿಂದ ತಿಳಿದು ಬರುವ ಅಂಶವೇನೆಂದರೆ ಹೆಣ್ಣುಮಕ್ಕಳ ಶಿಕ್ಷಣ ಹಾಗೂ ಜನಸಂಖ್ಯೆ ನಡುವೆ ಇರುವ ಸಂಬಂಧವನ್ನು ಎಲ್ಲಾ ದೇಶಗಳು ಸಾಧಿಸಲು ಸಾಧ್ಯ. ಹೆಣ್ಣು ಮಕ್ಕಳ ಸಾಕ್ಷರತೆ, ಜನಸಂಖ್ಯಾ ನಿಯಂತ್ರಣವಲ್ಲದೇ ಇತರೇ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಯನ್ನು ತರಲು ಸಾಧ್ಯ.

ಜನಸಂಖ್ಯಾ ಸಮಸ್ಯೆಯಿಂದಾಗಿ ಸಂಪನ್ಮೂಲದ ದುರ್ಬಳಕೆ ಹಾಗೂ ಮಾಲಿನ್ಯ ಎಂದು ಶ್ರೀಮಂತ ರಾಷ್ಟ್ರಗಳು ಪ್ರತಿಪಾದಿಸುತ್ತಿವೆ. ಆದರೆ ಈ ಭೂಮಿಯ ಸಂಪನ್ಮೂಲಗಳ ದುರ್ಬಳಕೆ ಹಾಗೂ ಮಾಲಿನ್ಯ ಕೇವಲ ಶ್ರೀಮಂತರ ಲಾಭಕ್ಕಾಗಿ ಹಾಗೂ ಅಂಚಿನಲ್ಲಿರುವ ಜನಸಮುದಾಯದಿಂದಲ್ಲ ಎಂದು ಖಚಿತವಾಗಿದೆ.

ಈ ವೈದ್ಯಕೀಯ ತಂತ್ರಜ್ಞಾನ ಹಾಗೂ ಸೌಲಭ್ಯಗಳು ಕೇವಲ ಸ್ವಯಂಪ್ರೇರಿತ ಜನರು ತಮ್ಮ ಸಂತಾನವನ್ನು ಕಡಿಮೆ ಮಾಡಲು ಬಳಸಬಹುದಾಗಿದೆ. ಅದನ್ನು ರಾಷ್ಟ್ರೀಯ ಕಾರ್ಯಕ್ರಮವನ್ನಾಗಿ ರಾಜಕೀಯ ಆಜ್ಞೆಯೆಂದು ಬಳಸಲಾಗದು.

ಜನಸಂಖ್ಯಾ ನಿಯಂತ್ರಣ ಸಾಧಿಸಲು ಆರ್ಥಿಕ ಬೆಳವಣಿಗೆ ಅತ್ಯವಶ್ಯ. ಇದು ನಮ್ಮಂತಹ ದೇಶಗಳಲ್ಲೂ ಸಾಧ್ಯ, ಸಮಾನತೆಯಿಂದ ಮಾತ್ರ ಅದನ್ನು ಸಾಧಿಸಲು ಸಾಧ್ಯ. ಆದರೆ ರಾಜಕೀಯ ಒಲವು ಇದ್ದಲ್ಲಿ ಮಾತ್ರ ಅದನ್ನು ಸಾಧಿಸಲು ಸಾಧ್ಯ.

ಗಜಲ್

ಕಾರಿರುಳ ಕರುಳಿಗೆ ಚಮತ್ಕಾರ ತೋರಿಸುವೆವು ನಾವು
ದೀಪ ಬೆಳಗಿದರೆ ಹೃದಯ ಸಂಸ್ಕಾರ ಬೆಳಗಿ
ತೋರುವೆವು ನಾವು

ಸಮಾಧಿ ಕೂಡ ನಮ್ಮನ್ನು ಏಕಾಂತದಲ್ಲಿ
ಬಂಧಿಸಿಡಲಾರದು
ಪ್ರತಿಹಂತದಲಿ ನೆಲದ ಹತ್ತಿರವಿದ್ದು
ತೋರಿಸುವೆವು ನಾವು

ನಾವು ನಡೆಯುವ ದಾರಿಯಲಿ ಬೆಟ್ಟಗುಡ್ಡಗಳಿರಬಹುದು
ನಿರಾಕಾರದಾರಿಗೆ ಆಕಾರ ನೀಡಿ
ತೋರಿಸುವೆವು ನಾವು

ವ್ಯಾಕರಣ, ಛಂದಸ್ಸಿನ ರಗಳೆಯಾರಿಗದು ಬೇಕಯ್ಯಾ
ಎದೆಯ ಲಯದ ಮೇಲೆ ಕಾವ್ಯಾಲಂಕಾರ ಬರೆದು
ತೋರಿಸುವೆವು ನಾವು

ನಾವು ತೋಡುವ ವಿಶ್ವದ ವಿಶ್ವಾಸದ ಬುನಾದಿಗೆ ಕಲ್ಲು
ಹಾಕುವವರಿರಬಹುದು
ಕಟ್ಟಲೇಬೇಕು ವಿಶ್ವದ ವಿಶ್ವಾಸ ಮಂದಿರಕಟ್ಟಿ
ತೋರಿಸುವೆವು ನಾವು

ಇಡಿಯನು ಬಿಗಡಾಯಿಸಿ ಬಿಡಿಬಿಡಿ ಮಾಡುವುದು
ಆಳರಸರ ಕುತಂತ್ರ
ಬಿಡಿಯನ್ನು ಇಡಿಯಾಗಿಸಿ ಐಕ್ಯರಂಗ ಮಾಡಿ
ತೋರಿಸುವೆವು ನಾವು

- ಜಂಬಣ್ಣ ಅಮರಚಿಂತ

ಗೋಭಕ್ತನೊಡನೆ.............

ಪುಟ 12 ರಿಂದ

ಮೂಲಭೂತ ಸಮಸ್ಯೆ ಅದಲ್ಲ- ಗೋ ರಕ್ಷಣೆ' ಹುಡುಗಾ, ಆರ್ಥಿಕ ಕ್ರಾಂತಿಯೊಡನೆ ಹೋರಾಟ ಮಾಡುವವರನ್ನು ನಾವು ಮಧ್ಯ ದಾರಿಯಲ್ಲಿಯೇ ದನದ ಗೂಟಕ್ಕೆ ಕಟ್ಟಿ ಹಾಕಿಬಿಡುತ್ತೇವೆ. ಇದು ಜನರನ್ನು ಗೊಂದಲದಲ್ಲಿ ಕೆಡುವಲಿಕ್ಕಾಗಿಯೇ?"

"ಸ್ವಾಮಿಗಳೇ ಯಾರಿಗಾಗಿ ಯಾತಕ್ಕಾಗಿ ನೀವು ಹೀಗೆ ಜನರನ್ನು ಗೊಂದಲದಲ್ಲಿ ಕೆಡುವುತ್ತೀರಿ?

"ಜನರ ಬೇಡಿಕೆಯಿಂದ ಯಾರ ಮೇಲೆ ತೊಂದರೆಯುಂಟಾಗುತ್ತದೋ ಅವರಿಗಾಗಿ, ಇದೇ ಧರ್ಮ. ಒಂದು ಉದಾಹರಣೆ ಕೊಡುತ್ತೇನೆ. ಒಂದು ಸಾರಿ ಸಾವಿರಾರು ಹಸಿದ ಜನರು ಒಬ್ಬ ಸೇಠನ ಗೋದಾಮಿನ ಅಕ್ಕಿ ಲೂಟಿ ಮಾಡಲು ಒಟ್ಟಾದರು. ಆ ಸೇಠ್ ನನ್ನ ಹತ್ತಿರ. "ಸ್ವಾಮಿಗಳೇ, ಏನಾದರೂ ಮಾಡಿ. ಈ ಜನ ನಾನು ಕೂಡಿ ಇಟ್ಟಿದ್ದನೆಲ್ಲಾ ಲೂಟಿ ಮಾಡುತ್ತಿದ್ದಾರೆ. ನೀವೇ ರಕ್ಷಿಸಬೇಕು. ನೀವು ಹೇಳಿದಂತೆ ನಾವು ನಿಮ್ಮ ಸೇವೆ ಮಾಡುತ್ತೇವೆ! ಆಗ ಮಗೂ ನಾವು ಎದ್ದೆವು. ಕೈಯ್ಯಲ್ಲಿ ಒಂದು ಮೂಳೆ ಹಿಡಿದುಕೊಂಡೆವು. ದೇವಸ್ಥಾನದ ಕಟ್ಟೆಯಲ್ಲಿ ನಿಂತುಕೊಂಡೆವು.

"ಸಾವಿರಾರು ಜನರು ಗೋದಾಮನ್ನು ಲೂಟಿ ಮಾಡುವಾಗ ನಾವು ಅವರಿಗೆ ಮೂಳೆ ತೋರಿಸಿದೆವು ಮತ್ತು ಹೇಳಿದೆವು- 'ಯಾವನೋ ದೇವಸ್ಥಾನವನ್ನು ಅಪವಿತ್ರ ಮಾಡಿದ್ದಾನೆ. ಯಾವನೋ ಪಾಪಿ ದೇವಸ್ಥಾನದಲ್ಲಿ ಈ ಮೂಳೆ ಬಿಸಾಡಿದ್ದಾನೆ. ವಿಧರ್ಮಿಗಳು ದೇವಸ್ಥಾನವನ್ನು ಅಪವಿತ್ರಗೊಳಿಸಿದ್ದಾರೆ. ನಮ್ಮ ಧರ್ಮವನ್ನು ನಾಶ ಮಾಡಿದ್ದಾರೆ. ನಮಗೆ ನಾಚಿಕೆಯಾಗಬೇಕು! ನಾನು ಈ ಕ್ಷಣದಿಂದಲೇ ಇಲ್ಲಿ ಉಪವಾಸ ಮಾಡುತ್ತೇನೆ. ಎಲ್ಲಿಯವರೆಗೆ ದೇವಸ್ಥಾನದಲ್ಲಿ ಸಾರಣೆ ಆಗಿ, ಹವನ ನಡೆದು ಪವಿತ್ರವಾಗುವುದಿಲ್ಲವೋ ಅಲ್ಲಿಯತನಕ ನಾನು ಉಪವಾಸ ನಿಲ್ಲಿಸುವುದಿಲ್ಲ. 'ಅಷ್ಟೆ, ಹುಡುಗಾ, ನಾವು ಮಾಡಿದ್ದು. ಆ ಜನ ತಮ್ಮ ತಮ್ಮಲ್ಲಿಯೇ ಹೊಡೆದಾಡತೊಡಗಿದರು. ಆಗ ನಾನೆಂದೆ- " ಈ ದೇಶದ ಧರ್ಮಪಾರಾಯಣ ಜನತೆ ಧನ್ಯರು. ಅವರು ದೇವಸ್ಥಾನ ಶುದ್ಧ ಮಾಡುವ ಎಲ್ಲಾ ವಸ್ತುಗಳನ್ನು ಕೊಡುವುದಾಗಿ ಹೇಳಿದರು. ಹುಡುಗಾ, ಯಾವ ಗೋದಾಮನ್ನು ಆ ಹಸಿದ ಜನ ಲೂಟಿ ಮಾಡಲು ಹೋಗಿದ್ದರೋ ಅವರೆ ಜಯಘೋಷ ಮಾಡಿದರು. ಇದೇ ಧರ್ಮದ ಪ್ರತಾಪ. ಈ ಜನರನ್ನು ಗೋರಕ್ಷಾ ಚಳುವಳಿಯಲ್ಲಿ ತೊಡಗಿಸದಿದ್ದರೆ ಅವರು ಬ್ಯಾಂಕ್ ರಾಷ್ಟ್ರೀಕರಣದ ಬೇಡಿಕೆ ಮಂಡಿಸುತ್ತಾರೆ. ವೇತನ ಹೆಚ್ಚು ಮಾಡಲು ಹೋರಾಡುತ್ತಾರೆ. ಲಾಭಕೋರತನದ ವಿರುದ್ಧ ಹೋರಾಡುತ್ತಾರೆ. ಅವರನ್ನು ಮಧ್ಯದಲ್ಲಿಯೇ ಗೊಂದಲದಲ್ಲಿ ಕೆಡುವುವುದೇ ನಿಜವಾದ ಧರ್ಮ ಮಗೂ."

"ಸ್ವಾಮಿಗಳೇ ನೀವು ನನ್ನ ಜ್ಞಾನವನ್ನು ಬಹಳಷ್ಟು ವಿಸ್ತರಿಸಿದಿರಿ. ಇನ್ನೊಂದು ವಿಚಾರದ ಬಗ್ಗೆ ಬೆಳಕು ನೀಡಿ. ಎಷ್ಟೋ ರಾಜ್ಯಗಳಲ್ಲಿ ಗೋರಕ್ಷಣೆಯ ಕಾನೂನು ಇದೆ. ಇನ್ನೂ ಕೆಲವು ರಾಜ್ಯಗಳಲ್ಲಿ ಜಾರಿಯಾಗುತ್ತದೆ. ಕೊನೆಗೆ ಈ ಆಂದೋಲನವೂ ಮುಗಿಯುತ್ತದೆ. ಆನಂತರ ನೀವು ಯಾವ ವಿಷಯದ ಮೇಲೆ ಹೋರಾಟ ಮಾಡುವಿರಿ?"

"ಹುಡುಗಾ, ಹೋರಾಟಕ್ಕೆ ಬಹಳ ವಿಷಯವಿದೆ. ಸಿಂಹವು ದುರ್ಗೆಯ ವಾಹನ. ಅದನ್ನು ಸರ್ಕಸ್ಸಿನವರು ಗೂಡಿನಲ್ಲಿ ಬಂಧಿಸಿರುತ್ತಾರೆ. ಅದರಿಂದ ನಾನಾ ಆಟ ಆಡಿಸುತ್ತಾರೆ. ಇದು ಅಧರ್ಮ. ಎಲ್ಲಾ ಸರ್ಕಸ್ ಕಂಪನಿಗಳ ವಿರುದ್ಧ ಹೋರಾಟ ಮಾಡಿ ಸರ್ಕಸ್ಸನೇ ಬಂದ್ ಮಾಡಿ ಬಿಡುತ್ತೇವೆ. ಇನ್ನು ಮೀನು. ಭಗವಂತನ ಅವತಾರಗಳಲ್ಲಿ ಒಂದು, ಮತ್ಸ್ಯಾವತಾರ. ಮೀನು ದೇವರ ಪ್ರತೀಕ. ಎಲ್ಲಾ ಮೀನುಗಾರರ ವಿರುದ್ಧ ಹೋರಾಟ ಮಾಡುತ್ತೇವೆ. ಸರಕಾರದ 'ಮತ್ಸ್ಯಪಾಲನಾ ವಿಭಾಗ (ಫಿಶರೀಸ್ ಡಿಪಾರ್ಟ್‌ಮೆಂಟ್) ಬಂದ್ ಮಾಡುತ್ತೇವೆ."

"ಸ್ವಾಮಿಗಳೇ, ಗೂಬೆ ಲಕ್ಷ್ಮಿಯ ವಾಹನ. ಅದರ ಬಗ್ಗೆ ಏನಾದರೂ ಮಾಡಬೇಕಲ್ಲ?"

"ಹುಡುಗಾ - ಈ ದೇಶದಲ್ಲಿ ಗೂಬೆಗಳಿಗೆ ತೊಂದರೆ ಇಲ್ಲ. ಅದು ಭಾರೀ ಸುಖದಲ್ಲಿದೆ."

ಅಷ್ಟರಲ್ಲಿ ಗಾಡಿ ಬಂತು. ಸ್ವಾಮಿಗಳು ಅದರಲ್ಲಿ ಹತ್ತಿ ಹೊರಟು ಹೋದರು. ಆ ಹುಡುಗ ಅಲ್ಲಿಯೇ ಉಳಿದ.

ಏಜೆನ್ಸಿದಾರರ ಗಮನಕ್ಕೆ

ಪತ್ರಿಕೆಯ ಕೆಲ ಏಜೆನ್ಸಿದಾರರು ತುಂಬಾ ಬಾಕಿ ಉಳಿಸಿಕೊಂಡಿದ್ದು, ಇದರಿಂದ ಪತ್ರಿಕೆಯ ಮುಂದಿನ ಸಂಚಿಕೆಗಳ ಪ್ರಕಟಣೆಗೆ ಆರ್ಥಿಕ ತೊಂದರೆ ಉಂಟಾಗಿದೆ. ಬಾಕಿ ಇರುವ ಏಜೆನ್ಸಿದಾರರು ಶೀಘ್ರ ಬಾಕಿ ಪಾವತಿಸಿ ಸಹಕರಿಸಿ.

ಸಂ.

ಜಗತ್ತೊಂದು ಸುತ್ತು

ಶರತ್‌ಚಂದ್ರ

"ಈಗಿನ ಜಾಗತೀಕರಣದ ಹಾದಿ ಬದಲಾಗಬೇಕು"


ಅಂತರ್ರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಜಗತ್ತಿನ ಪ್ರಮುಖ ಟ್ರೇಡ್ ಯೂನಿಯನ್‌ಗಳು ಜೂನ್ 1 ರಿಂದ 17 ರವರೆಗೆ ಜಿನೇವಾದಲ್ಲಿ ಸೇರಿದ್ದವು. ಸಮ್ಮೇಳನದಲ್ಲಿ ಎಲ್ಲಾ ದೇಶಗಳ ಟ್ರೇಡ್ ಯೂನಿಯನ್‌ಗಳು, ಸರ್ಕಾರಗಳ ಪ್ರತಿನಿಧಿಗಳು (ಸಾಮಾನ್ಯವಾಗಿ ಕಾರ್ಮಿಕ ಮಂತ್ರಿ) ಭಾಗವಹಿಸಿದ್ದರು. ಜಾಗತೀಕರಣದ ವಿರುದ್ಧ ಏಳುತ್ತಿರುವ ತೀಕ್ಷ್ಣ ಅತೃಪ್ತಿ ಮತ್ತು ಅದರ ಹಾದಿ ಬದಲಾಯಿಸಬೇಕು ಎನ್ನುವ ಕೂಗು ಜೋರಾಗಿ ಕೇಳಿಬಂತು. ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ (ILO) ಜಾಗತೀಕರಣದ ಸಾಮಾಜಿಕ ಪರಿಣಾಮದ ಬಗೆಗಿನ ಕಮಿಷನ್‌ನ ವರದಿಯನ್ನು ಸಮ್ಮೇಳನ ಚರ್ಚಿಸಿತು. ಜಾಗತೀಕರಣದ ವಿರುದ್ಧ ಪ್ರತಿಭಟನೆ ಮಾತ್ರವಲ್ಲ, ಅದರ ಹಾದಿ ಬದಲಾಯಿಸುವ ಯತ್ನದಲ್ಲಿ ಮಹತ್ವದ ಬೆಳವಣಿಗೆ.

"ಈಗಿನ ಜಾಗತೀಕರಣದ ಹಾದಿ ಬದಲಾಗಬೇಕು. ಅದರ ಅನುಕೂಲಗಳು ಕೆಲವರಿಗೇ ಸಿಗುತ್ತಿದೆ. ಬಹುಸಂಖ್ಯಾತರಿಗೆ ಅದರ ವಿನ್ಯಾಸ ಮತ್ತು ದಿಕ್ಕು ನಿರ್ಧರಿಸುವಲ್ಲಿ ಯಾವ ಪಾತ್ರವೂ ಇಲ್ಲ....... ಅಪಾರ ಸಂಪತ್ತು ಸೃಷ್ಟಿಯಾಗುತ್ತಿದೆ. ಆದರೆ ಮೂಲಭೂತ ಸಮಸ್ಯೆಗಳಾದ ಬಡತನ, ಅಸಮಾನತೆ ಮುಂದುವರೆಯುತ್ತಿದೆ. ಭ್ರಷ್ಟಾಚಾರ ಸರ್ವವ್ಯಾಪಿಯಾಗಿದೆ.... ಈಗಿನ ಜಾಗತಿಕ ಆರ್ಥಿಕ ವ್ಯವಸ್ಥೆಯ ಕಾರ್ಯವೈಖರಿಯಲ್ಲಿ ಆಳವಾಗಿ ಬೇರೂರಿರುವ ನಿರಂತರವಾಗಿರುವ ಅಸಮತೋಲನಗಳಿವೆ. ಈ ಕಾರ್ಯವೈಖರಿ ನೈತಿಕವಾಗಿ ಸ್ವೀಕಾರಾರ್ಹವಲ್ಲ. ರಾಜಕೀಯವಾಗಿ ಬಹಳ ದಿನ ನಡೆಯುವಂಥದ್ದಲ್ಲ....... ಆರ್ಥಿಕ ಮತ್ತು ಸಮಾಜದ ನಡುವೆ ಈ ಸಮತೋಲನ ಸಾಮಾಜಿಕ ನ್ಯಾಯವನ್ನು ಬುಡಮೇಲು ಮಾಡುತ್ತಿದೆ.... ಆರ್ಥಿಕ ಮತ್ತು ರಾಜಕೀಯದ ನಡುವಿನ ಅಸಮತೋಲನ ಪ್ರಜಾಸತ್ತಾತ್ಮಕ ಜವಾಬ್ದಾರಿಯನ್ನು ಬುಡಮೇಲು ಮಾಡುತ್ತಿದೆ......."

ಜಾಗತೀಕರಣದ ಬಗ್ಗೆ ಬಹಳ ಕಟುವಾದ ಟೀಕೆ. ಇದು ಐಎಲ್‌ಓ ಸಮ್ಮೇಳನದಲ್ಲಿ ಟ್ರೇಡ್ ಯೂನಿಯನ್ ನಾಯಕರ ಭಾಷಣದ ಭಾಗವಲ್ಲ. ಇದು ಐಎಲ್‌ಓ(ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ-ವಿಶ್ವ ಸಂಸ್ಥೆಯ ಅಂಗಸಂಸ್ಥೆ) ಜಾಗತೀಕರಣದ ಸಾಮಾಜಿಕ ಪರಿಣಾಮ ಅಧ್ಯಯನ ಮಾಡಲು ಒಂದು ಜಾಗತಿಕ ಕಮಿಷನ್ ನೇಮಿಸಿತ್ತು. ಆ ಕಮಿಷನ್‌ನ ವರದಿ "ನ್ಯಾಯಮುತ ಜಾಗತೀಕರಣ, ಎಲ್ಲರಿಗೂ ಅವಕಾಶ ಸೃಷ್ಟಿಸುವ ಬಗೆ" ಆರಂಭದ ಮಾತುಗಳು ಇವು. ಕಮಿಷನ್‌ನ ನಾಯಕತ್ವ ವಹಿಸಿದ್ದು ತಾಂಜಾನಿಯಾ ಮತ್ತು ಫಿನ್‌ಲ್ಯಾಂಡ್‌ನ ಅಧ್ಯಕ್ಷರುಗಳು. 26 ವಿವಿಧ ಕ್ಷೇತ್ರಗಳಿಂದ ಬಂದ ಮತ್ತು ವಿವಿಧ ಜಾಗತಿಕ ಕಣ್ಣೋಟ ಹೊಂದಿರುವವರು ಕಮಿಷನ್ ಸದಸ್ಯರಾಗಿದ್ದರು. ಅಂತಹ ಕಮಿಷನ್‌ನ ವರದಿ ಇಂತಹ ಕಟುವಾದ ಟೀಕೆ ಮಾಡಿದೆ ಎಂಬುದು ಗಮನಾರ್ಹ.

ಜಾಗತೀಕರಣ ಬಡತನದ ಮೂಲ

ಜಾಗತಿಕ ಆರ್ಥಿಕ ವ್ಯವಸ್ಥೆಯ ಅನ್ಯಾಯಯುತ ನಿರ್ವಹಣೆ ದೇಶಗಳ ನಡುವೆ, ದೇಶಗಳೊಳಗೆ ಅಗಾಧ ಅಸಮಾನತೆಯನ್ನು ಸೃಷ್ಟಿಸುತ್ತದೆ. ಎಲ್ಲಾ ಜಾಗತಿಕ ಸಮಸ್ಯೆಗಳ ಮೂಲ ಇದೇ. ಜಗತ್ತಿನ ಕೆಲವರ ಲಾಭ ಮತ್ತು ಐಶ್ವರ್ಯಕ್ಕೆ ಇಂಗದ ದುರಾಸೆ ಜಾಗತಿಕ ಆರ್ಥಿಕ ವ್ಯವಸ್ಥೆಯ ಇಂಜಿನ್ ಆಗಿದ್ದು, ಉಳಿದವರನ್ನು ಹಸಿವು, ಬಡತನದಲ್ಲಿಡುವ ಶಕ್ತಿಯಾಗಿದೆ. "ಈ ಜಗತ್ತನಲ್ಲಿ ಎಲ್ಲರ ಅಗತ್ಯಗಳಿಗೆ ಬೇಕಾದ್ದು ಇದೆ. ಆದರೆ ಎಲ್ಲರ ದುರಾಸೆ ಪೂರೈಸಲು ಬೇಕಾದಷ್ಟು ಇಲ್ಲ" ಎಂಬ ಮಹಾತ್ಮಗಾಂಧಿಯವರ ಮಾತುಗಳನ್ನು ಉದ್ಧರಿಸಿದೆ ವರದಿ. ಬೆಳವಣಿಗೆ ಹೊಂದುತ್ತಿರುವ ದೇಶಗಳಿಗೆ ತಮ್ಮದೇ ಆರ್ಥಿಕ ನೀತಿ ರೂಪಿಸುವಲ್ಲಿ ಸ್ವಾಯತ್ತತೆ ಇರಬೇಕು. ಜಾಗತಿಕ ವ್ಯಾಪಾರ, ಹಣಕಾಸು ಹೂಡಿಕೆ, ಉತ್ಪಾದನೆಯಲ್ಲಿ ಸ್ಪರ್ಧೆ - ಈ ಬಗ್ಗೆ ರೂಪಿಸುವ ನೀತಿಗಳು ನ್ಯಾಯಯುತವಾಗಿರಬೇಕು ಮತ್ತು ಬಹುಸಂಖ್ಯಾತ ಜನರ ಹಕ್ಕುಗಳನ್ನು ಗೌರವಿಸಬೇಕು. ಇದು ವರದಿಯ ಶಿಫಾರಸ್ಸುಗಳು.



ಸಮ್ಮೇಳನವನ್ನುದ್ದೇಶಿಸಿ ಮಾತನಾಡುತ್ತಿರುವ ನ್ಯೂಜಿಲೆಂಡ್ ಪ್ರಧಾನಿ

ಹೋರಾಟದ ಮಾರ್ದನಿ ಸಮ್ಮೇಳನದಲ್ಲಿ

ಜೂನ್ 1 ರಿಂದ 17 ರವರೆಗೆ ಜಿನೇವಾದಲ್ಲಿ ನಡೆದ ಅಂತರ್ರಾಷ್ಟ್ರೀಯ ಕಾರ್ಮಿಕ ಸಮ್ಮೇಳನದ ಮುಂದಿದ್ದ ಕಮಿಷನ್ ವರದಿ ಮಾತ್ರವಲ್ಲ. ಡೈರೆಕ್ಟರ್ ಜನರಲ್‌ರ ಭಾಷಣ ಸಹ ಜಾಗತೀಕರಣದ ವಿರುದ್ಧ ಜಾಗತಿಕ ವಿರೋಧದ ದನಿಯನ್ನು ಮಾರ್ದನಿಸಿತು. ಸಮ್ಮೇಳನವನ್ನು ಉದ್ಘಾಟಿಸುತ್ತಾ ಜಾಗತೀಕರಣ ನ್ಯಾಯಯುತವಾಗಿರಬೇಕಾದರೆ ಸ್ಥಳೀಯಕರಣವಾಗಬೇಕು. ರಾಷ್ಟ್ರೀಯ ನೀತಿ ನಿರ್ಧಾರಕ್ಕೆ ಅವಕಾಶವಿರಬೇಕು ಎಂದು ಒತ್ತಿ ಹೇಳಿದರು. ಕಳೆದ ಮೂರು ಸಮ್ಮೇಳನಗಳಲ್ಲಿ ಡೈರೆಕ್ಟರ್ ಜನರಲ್ ಜಾಗತೀಕರಣದ ಬಗ್ಗೆ ತಳೆಯುವ ಧೋರಣೆ ಗಮನಿಸಿದರೆ(ಬಾಕ್ಸ್ ನೋಡಿ 'ಸ್ಥಳೀಯಕರಣ ಬೇಕಾಗಿದೆ") ಅದು ಹೆಚ್ಚೆಚ್ಚು ಕಟುವಾಗುತ್ತಾ ಬಂದಿದೆ. ಇದು ಜಾಗತೀಕರಣದ ವಿರುದ್ಧ ಜಾಗತಿಕ ಪ್ರತಿಭಟನೆಯ ಅಲೆಯ ಪರಿಣಾಮ.

ಆದರೂ ಕಮಿಷನ್ ಡೈರೆಕ್ಟರ್ ಜನರಲ್‌ರ ವರದಿಯಾಗಲಿ ಜಾಗತೀಕರಣದ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆಗೆ ಸಿದ್ಧವಿಲ್ಲ. ಈಗಿನ ಮಾದರಿಯ ಜಾಗತೀಕರಣದ ಚೌಕಟ್ಟಿನೊಳಗೆ ಕೆಲವು ಸುಧಾರಣೆಗಳನ್ನು ಮಾತ್ರ ಮಂಡಿಸಿದ್ದಾರೆ.

ಆದರೆ ಸಮ್ಮೇಳನದ ಚರ್ಚೆಯಲ್ಲಿ ಟ್ರೇಡ್ ಯೂನಿಯನ್ ನಾಯಕರೂ, ಆಫ್ರಿಕಾ - ಏಶ್ಯಾ - ದಕ್ಷಿಣ ಅಮೆರಿಕಗಳ ಸರ್ಕಾರಗಳ ಮಂತ್ರಿಗಳು ಜಾಗತೀಕರಣದ ಆಮೂಲಾಗ್ರ ಬದಲಾವಣೆಗೆ ಕರೆಯಿತ್ತರು. ತಾಂಜಾನಿಯಾದ ಅಧ್ಯಕ್ಷರು ಜಾಗತೀಕರಣ 90 ರ ದಶಕದಲ್ಲಿ ಆಫ್ರಿಕಾದ ಬಡತನ ಹೆಚ್ಚಿದೆ ಎಂದರು. ಅದೇ ರೀತಿ ಬಲ್ಗೇರಿಯಾದ ಅಧ್ಯಕ್ಷ, ನ್ಯೂಝಿಲೆಂಡ್ ಪ್ರಧಾನಿ, ಬ್ರೆಜಿಲ್ ಕಾರ್ಮಿಕ ಮಂತ್ರಿ, ಕ್ಯೂಬಾದ ಕಾರ್ಮಿಕ ಮಂತ್ರಿ.

ಭಾರತದ ಪ್ರತಿನಿಧಿಗಳು

ಭಾರತದಿಂದ ಕಾರ್ಮಿಕ ಪ್ರತಿನಿಧಿಗಳಾಗಿ ತಪನ್ ಸೇನ್ (ಸಿಐಟಿಯು), ಮಹದೇವನ್ (ಎಐಟಿಯುಸಿ), ಪವರ್ ಘಟವರ್, ಜಿ.ಕಾಲನ್ (ಇಂಟಕ್), ದಾವೆ, ರವಿ ರಾಮನ್(ಬಿಎಂಎಸ್), ಶಂಕರ್ ಸಹಾ (ಯುಟಿಯುಸಿ-ಲೆನಿನ್ ಸರಣಿ), ಥಂಪನ್ ಥಾಮಸ್(ಎಚ್‌ಎಂಎಸ್) ಸಮ್ಮೇಳನದಲ್ಲಿ ಭಾಗವಹಿಸಿದ್ದರು.ಸರ್ಕಾರಿ ಪ್ರತಿನಿಧಿಗಳಾಗಿ ಕೇಂದ್ರ ಪಂಜಾಬ್ ಮತ್ತು ಪಶ್ಚಿಮಬಂಗಾಳಗಳ ಕಾರ್ಮಿಕ ಮಂತ್ರಿಗಳು ಸರ್ಕಾರಿ ಪ್ರತಿನಿಧಿಗಳಾಗಿ ಭಾಗವಹಿಸಿದ್ದರು.

ವಲಸೆ ಕಾರ್ಮಿಕರು, ಮಾನವ ಸಂಪನ್ಮೂಲ ಅಭಿವೃದ್ಧಿ, ಮೀನುಗಾರಿಕೆ ಕಾರ್ಮಿಕರು, ನಿರ್ಣಯಗಳು ಮತ್ತು ಕಾರ್ಮಿಕ ಮಾನದಂಡಗಳು - ಈ ವಿಷಯಗಳ ಮೇಲೆ ಉಪಸಮ್ಮೇಳನಗಳು ನಡೆದವು. ಸಮ್ಮೇಳನ ಅಂಗೀಕರಿಸಿದ [illegible]ಗಳು ಜಾಗತೀಕರಣದ ಹಾದಿ ಬದಲಾಯಿಸುವ ಬಗೆಗಿನ ಒತ್ತಾಯವನ್ನು ಮಾರ್ದನಿಸಿದವು. ಆದರೂ ಜಾಗತೀಕರಣ ಚೌಕಟ್ಟನ್ನು ಪ್ರಶ್ನಿಸುವಷ್ಟು ತೀವ್ರವಾಗಿರಲಿಲ್ಲ. ಆದರೂ ಐಎಲ್‌ಓ ಸಮ್ಮೇಳನ ಈ ದಿಕ್ಕಿನಲ್ಲಿ ಗಮನಾರ್ಹ ಬೆಳವಣಿಗೆ.

'ಸ್ಥಳೀಯಕರಣ ಬೇಕಾಗಿದೆ....'

"ಜಾಗತೀಕರಣ ಕಾನೂನು ಬದ್ಧತೆಯ ನೀತಿಬದ್ಧತೆಯ ಬಿಕ್ಕಟ್ಟು ಎದುರಿಸುತ್ತಿದೆ."

- 90ನೇ ಐಎಲ್‌ಓ ಸಮ್ಮೇಳನದಲ್ಲಿ ಡೈರೆಕ್ಟರ್ ಜನರಲ್ (2002)

ಜಾಗತೀಕರಣ ಕೆಲವರಿಗೆ ಐಶ್ವರ್ಯ ಸೃಷ್ಟಿಸಿದೆ. ಆದರೆ ಹಲವರು ಜಾಗತೀಕರಣವನ್ನು ನಿರಂತರ ಅಸಮಾನತೆ ಮತ್ತು ಸಾಮಾಜಿಕ ಹೊರಗಿಡುವಿಕೆಯ ಮೂಲವಾಗಿ ಕಾಣುತ್ತಾರೆ... ಆದರೂ, ಬೆಳವಣಿಗೆ ವೇಗವಾಗಿ ಆಗಲಿ, ಹಂಚುವಿಕೆ ಆಮೇಲೆ ನೋಡೋಣ' ಎಂಬುದು ಜಾಗತೀಕರಣದ ಮಂತ್ರ. ಆದರೆ ಅದು ಕೆಲಸ ಮಾಡಿಲ್ಲ..... ಬಡತನ ಪರಿಣಾಮ ಹೀನ ಆರ್ಥಿಕ-ಸಾಮಜಿಕ ವ್ಯವಸ್ಥೆಯ ವೈಫಲ್ಯದ ಫಲ...... ನಿರುದ್ಯೋಗದ ಬೆಳವಣಿಗೆ, ಅನೌಪಚಾರಿಕ ಆರ್ಥಿಕ ಸೃಷ್ಟಿಯನ್ನು ತಡೆಯಲು ಸಿದ್ದವಿಲ್ಲದ ಜಾಗತೀಕರಣದ ಮಾದರಿಯ ಫಲ..."

- 91ನೇ ಐಎಲ್‌ಓ ಸಮ್ಮೇಳನ (2003)

"ಸಫಲ ಸ್ಥಳೀಯಕರಣವಿಲ್ಲದೆ ಸಫಲ ಜಾಗತೀಕರಣ ಸಾಧ್ಯವಿಲ್ಲ... ಪ್ರಜಾಸತ್ತಾತ್ಮಕ ಚೌಕಟ್ಟಿನಲ್ಲಿ ಸರಿಯಾದ ಸ್ಥಳೀಯ ಮತ್ತು ರಾಷ್ಟ್ರೀಯ ನೀತಿಗಳು ಅಗತ್ಯ..... ವ್ಯಾಪಾರ, ಬಂಡವಾಳ ಮತ್ತು ತಂತ್ರಜ್ಞಾನದ ಹರಿವಿಗೆ, ವಲಸೆ ಮತ್ತು ಕಾರ್ಮಿಕ ಮಾನದಂಡಗಳ ಬಗ್ಗೆ ನ್ಯಾಯಯುತ ನಿಯಮಾವಳಿಗಳು ಬೇಕಾಗಿದೆ. ಇವೆಲ್ಲಾ ಬೆಳೆಯುತ್ತಿರುವ ದೇಶಗಳು ಬೆಳವಣಿಗೆ ನೀತಿಗಳ ರಾಷ್ಟ್ರೀಯ ಒಡೆತನಕ್ಕೆ ಅವಕಾಶ ಮಾಡಿಕೊಡುತ್ತದೆ""

92ನೇ ಐಎಲ್‌ಓ ಸಮ್ಮೇಳನ (2004)

ಇಸ್ರೇಲ್ ವಿರುದ್ಧ ವಿಶ್ವನ್ಯಾಯಾಲಯ ಆದೇಶ

ಪ್ಯಾಲೆಸ್ಟೀನ್‌ನ ಪಶ್ಚಿಮ ದಂಡೆಯಲ್ಲಿ ಇಸ್ರೇಲ್ ಕಟ್ಟಿಸಿದ ಅಡ್ಡಗೋಡೆ ಕಾನೂನುಬಾಹಿರ ಎಂದು ಅಂತರರಾಷ್ಟ್ರೀಯ ನ್ಯಾಯಾಲಯ ಹೇಳಿದ್ದು ಅದನ್ನು ಈ ಕೂಡಲೇ ಕಿತ್ತುಹಾಕಬೇಕೆಂದು ಆದೇಶಿಸಿದೆ. ಅಲ್ಲದೆ, ತಾನು ನೀಡಿದ ತೀರ್ಪಿನ ಆಧಾರದಲ್ಲಿ ಮುಂದಿನ ಕ್ರಮ ಕೈಗೊಳ್ಳಬೇಕೆಂದೂ ನ್ಯಾಯಾಲಯವು ವಿಶ್ವಸಂಸ್ಥೆಗೆ ಸೂಚಿಸಿದೆ.

ಅಡ್ಡಗೋಡೆ ತೀರ್ಮಾನವು ಪಶ್ಚಿಮ ದಂಡೆಯಲ್ಲಿ ವಾಸಿಸುತ್ತಿರುವ ಪ್ಯಾಲೆಸ್ತೀನಿಯರ ಹಕ್ಕುಗಳ ಮೇಲೆ ನಡೆದ ಅಪಾಯಕಾರಿ ಆಕ್ರಮಣವಲ್ಲದೆ ಅಂತರರಾಷ್ಟ್ರೀಯ ಕಾನೂನುಗಳಿಗೆ ವಿರುದ್ಧವಾಗಿದೆ ಎಂದು ಅಂತರರಾಷ್ಟ್ರೀಯ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಹೇಳಿದೆ. 1967 ರಿಂದಲೇ ಇಸ್ರೇಲ್ ದೇಶವು ಪಶ್ಚಿಮದಂಡೆಯನ್ನು



ಪ್ಯಾಲೆಸ್ಟೀನ್ ನಾಯಕ ಯಾಸರ್ ಅರಾಫತ್

ಕಾನೂನುಬಾಹಿರವಾಗಿ ಆಕ್ರಮಿಸಿಕೊಂಡಿದ್ದು, ಇದೀಗ ನ್ಯಾಯಾಲಯವು ನೀಡಿದ ಸಮರ್ಪಕ ತೀರ್ಪಿನಿಂದಾಗಿ ಶೆರೋನ್ ನೇತೃತ್ವದ ಇಸ್ರೇಲ್ ಸರಕಾರವು ನೀತಿಬಾಹಿರ ಎಂಬುದು ಸ್ಪಷ್ಟವಾಗಿದೆ.

ಕನಿಷ್ಠ ಕಾರ್ಯಕ್ರಮದ ಆಧಾರದ ಮೇಲೆ ಆಡಳಿತ ನಡೆಸುತ್ತಿರುವ ಸಂಯುಕ್ತ ಪ್ರಗತಿ ಪರ ಮೈತ್ರಿಕೂಟ ಸರಕಾರವು (ಐಯು) ಪ್ಯಾಲೆಸ್ಟೀನ್ ಜನತೆಯ ಹಕ್ಕುಗಳ ರಕ್ಷಣೆಗೆ ಬದ್ಧ ಎಂದು ಈಗಾಗಲೇ ಘೋಷಿಸಿತ್ತು. ಆದ್ದರಿಂದ ನ್ಯಾಯಾಲಯದ ತೀರ್ಪನ್ನು ಸಂಪೂರ್ಣವಾಗಿ ಬೆಂಬಲಿಸಬೇಕು. ಮಾತ್ರವಲ್ಲದೆ, ತೀರ್ಪಿನ ಜಾರಿಗಾಗಿ ಇಸ್ರೇಲ್ ಸರಕಾರವನ್ನು ಒತ್ತಾಯಿಸಬೇಕು.

ಈ ತೀರ್ಪನ್ನು ಇಸ್ರೇಲ್ ಸರಕಾರವು ಮಾನ್ಯಮಾಡದೇ ಹೋದಲ್ಲಿ ವಿಶ್ವಸಂಸ್ಥೆ ಮತ್ತು ಇತರೆ ಜಾಗತಿಕ ವೇದಿಕೆಗಳ ಮೂಲಕ ನ್ಯಾಯಾಲಯದ ಆದೇಶವನ್ನು ಜಾರಿಗೊಳಿಸುವಂತೆ ಸಂಯುಕ್ತ ಪ್ರಗತಿಪರ ಮೈತ್ರಿ ಸರಕಾರವು ಕ್ರಮ ಕೈಗೊಳ್ಳಬೇಕು.

ಭಾರತದ ಜನತೆ ಈ ನಿಟ್ಟಿನಲ್ಲಿ ಜಾಗೃತರಾಗಿ ಪ್ಯಾಲೆಸ್ಟೀನ್ ಜನರಿಗೆ ತಮ್ಮ ಸೌಹಾರ್ದತೆಯನ್ನು ಸೂಚಿಸಬೇಕಾಗಿದೆ.



ತಾವು ಗೋಭಕ್ತರೆಂದು ಅನ್ಯಧರ್ಮೀಯರನ್ನು ಸದಾ ನಿಂದಿಸುವುದು. ಸಧರ್ಮೀಯರಿಂದ ಗೋವುಗಳಿಗೆ ಹಿಂಸೆಯಾದಾಗ ತಾಂತ್ರಿಕವಾಗಿ ವರ್ತಿಸುವುದು. ಈ ಬಗ್ಗೆ ಹಿಂದಿ ಲೇಖಕರಾದ ಹರಿಶಂಕರ ಪರಸಾಯಿಯವರು ವಿಡಂಬನಾತ್ಮಕವಾಗಿ ಈ ಕಥೆಯಲ್ಲಿ ವಿವರಿಸಿದ್ದಾರೆ. ಅದನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ ಡಾ. ಜಿ.ಭಾಸ್ಕರ ಮ್ಯಯರವರು.

ಗೋಭಕ್ತನೊಡನೊಂದು ಮುಖಾಮುಖಿ

ಹರಿಶಂಕರ ಪರಸಾಯಿ

ರೈಲ್ವೇ ಸ್ಟೇಶನ್‌ನಲ್ಲಿ ಓರ್ವ ಸಾಧುವಿನ ದರ್ಶನವಾಯ್ತು. ಎತ್ತರದ ಬಿಳಿಯ ಗಟ್ಟಿಮುಟ್ಟಾದ ಆಳು. ಕೆಂಪು ಮುಖ. ಕಷಾಯ ವರ್ಣದ ರೇಶ್ಮೆಯ ಬಟ್ಟೆ ಉಟ್ಟುಕೊಂಡಿದ್ದ. ಕೈಯಲ್ಲಿ ಚಿನ್ನದ ಹಿಡಿಯ ಬೆತ್ತ: ಜತೆಯಲ್ಲಿ ಒಬ್ಬ ಸಣ್ಣ ಆಕೃತಿಯ ಕಿಶೋರ ಸನ್ಯಾಸಿ. ಅವನ ಕೈಯಲ್ಲೊಂದು ಟ್ರಾನ್ಸಿಸ್ಟರ್. ಆತ ತನ್ನ ಗುರುವಿಗೆ ರಫಿಯ ಹಾಡು ಕೇಳಿಸುತ್ತಿದ್ದ.

ನಾನು ಕೇಳಿದೆ - "ಸ್ವಾಮೀಜಿ, ದೂರ...?"

ಅವರೆಂದರು - "ದಿಲ್ಲಿಗೆ ಹೋಗುತ್ತಿದ್ದೇನೆ ಹುಡುಗಾ."

ನಾನೆಂದೆ - "ನನಗೆ ಬಹಳ ವಯಸ್ಸಾಗಿದೆ. ನನಗೇಕೆ 'ಹುಡುಗಾ' ಎನ್ನುತ್ತೀರಿ?"

ಸ್ವಾಮಿಗಳು ನಕ್ಕರು. ಹೇಳಿದರು- "ಹುಡುಗಾ, ನೀವು ಸಂಸಾರಿಗಳು ಅರವತ್ತು ಎಪ್ಪತ್ತು ವರ್ಷದ ಹೋಟೆಲಿನ ಸಪ್ಲೈಯರನ್ನು ಹುಡುಗಾ ಎಂದು ಕರೆಯುವುದಿಲ್ಲವೆ?" ಅದೇ ರೀತಿ ನಾವು ನಿಮ್ಮಂತಹ ಸಂಸಾರಿಗಳನ್ನು 'ಹುಡುಗಾ' ಅಂತ ಕರೆಯುತ್ತೇವೆ. ವಿಶ್ವವೇ ಒಂದು ಭೋಜನಶಾಲೆ, ನಾವು ಅಲ್ಲಿ ತಿನ್ನುವವರು, ನೀನು ಬಡಿಸುವವ. ಅದಕ್ಕೇ ನಿನ್ನನ್ನು 'ಹುಡುಗಾ' ಅನ್ನುತ್ತೇವೆ. ತಪ್ಪು ತಿಳಿಯಬೇಡ. ಬರೇ ಸಂಬೋಧನೆ ಅಷ್ಟೇ."

ಮಾತನಾಡುವುದು ಸ್ವಾಮೀಜಿಯವರಿಗೆ ತುಂಬಾ ಇಷ್ಟ ಎನ್ನಿಸಿತು. ಆಕರ್ಷಕವೆನಿಸಿತು. ನಾನು ಅವರ ಹತ್ತಿರ ಕುಳಿತೆ. ಅವರೂ ಬೆಂಚಿನ ಮೇಲೆ 'ಚಟ್ಟಾಮುಟ್ಟ' ಹಾಕಿ ಕುಳಿತರು. ಶಿಷ್ಯನಿಗೆ ಹಾಡು ನಿಲ್ಲಿಸಲು ಹೇಳಿದರು. ಹೇಳತೊಡಗಿದರು- "ಹುಡುಗಾ, ಧರ್ಮಯುದ್ಧ ಆರಂಭ ಆಗಿದೆ. 'ಗೋರಕ್ಷಾ ಆಂದೋಲನ' ತೀವ್ರವಾಗುತ್ತಿದೆ. ದನ ನಮ್ಮ ತಾಯಿ. ಅವಳ ಹತ್ಯೆ ಆಗುತ್ತಿದೆ."

ನಾನೆಂದೆ - "ಕೊಲೆ ಮಾಡುವವರು ಯಾರು?"

ಅವರೆಂದರು - "ವಿಧರ್ಮೀ ಕಸಾಯಿಗಳು."

ನಾನೆಂದೆ - "ಅವರಿಗೆ ಹತ್ಯೆ ಮಾಡಲು ದನ ಕೊಡುವವರಾರು?

ನಮ್ಮ ಸಧರ್ಮೀ ಗೋಭಕ್ತರು ತಾನೇ?"

ಸ್ವಾಮೀಜಿ ಹೇಳಿದರು - "ಅದು ಹೌದು. ಅವರಾದರೂ ಏನು ಮಾಡಿಯಾರು? ದನವಂತೂ ಬರಿದೇ ತಿನ್ನುತ್ತದೆ. ಬೇರೆಯವರಿಗೆ ಮಾರಿದರೆ ಲಾಭ ಬರುತ್ತದೆ."

ಆಗ ನಾನೆಂದೆ - "ಅಂದರೆ ಹಣಕ್ಕಾಗಿ ದನವನ್ನು ಮಾರುವವ ನಿಜವಾದ ಗೋಪೂಜಕ!"

ಸ್ವಾಮಿಗಳು ನನ್ನೆಡೆಗೆ ನೋಡತೊಡಗಿದರು ಮತ್ತು ಹೇಳಿದರು - "ನೀನು ತರ್ಕ ಚನ್ನಾಗಿಯೇ ಮಾಡುತ್ತೀಯಾ ಹುಡುಗಾ. ಆದರೆ ಇದು ತರ್ಕದ ಪ್ರಶ್ನೆಯಲ್ಲ. ಭಾವನೆಯ ಪ್ರಶ್ನೆ. ಈಗ ಸಾವಿರಾರು ಜನ ಗೋಭಕ್ತರು ಹೋರಾಟ ಮಾಡುತ್ತಿದ್ದಾರೆ. ಅವರಲ್ಲಿ ಯಾರೂ ದನ ಸಾಕುವುದಿಲ್ಲ. ಇದು ಭಾವನೆಯ ಪ್ರಶ್ನೆ!"

"ಸ್ವಾಮಿಗಳೇ, ನೀವೂ ದನದ ಹಾಲನ್ನು ಕುಡಿಯುತ್ತಿರಬೇಕು?"

"ಇಲ್ಲ ಹುಡುಗಾ, ನಾವು ಎಮ್ಮೆ ಹಾಲನ್ನೇ ಕುಡಿಯುವುದು, ದನದ ಹಾಲು ಭಾರೀ ತೆಳು. ಎಮ್ಮೆ ಹಾಲು ದಪ್ಪ. ಒಳ್ಳೇ ಕೆನೆ ಬರುತ್ತೆ."

"ಹಾಗಾದರೆ ಎಲ್ಲಾ ಗೋಭಕ್ತರೂ ಎಮ್ಮೆ ಹಾಲನ್ನೇ ಕುಡಿಯುತ್ತಾರೆಯೇ?"

"ಹೌದು ಹುಡುಗಾ, ಎಲ್ಲರೂ."

"ಹಾಗಾದರೆ - 'ಎಮ್ಮೆ ರಕ್ಷಣೆಯ ಹೋರಾಟ' ಮಾಡಬೇಕು. ಕುಡಿಯುವುದು ಎಮ್ಮೆಹಾಲು. ದನವನ್ನು ಗೋಮಾತೆ ಎಂದು ಕರೆಯುತ್ತೀರಿ. ಯಾರ ಹಾಲನ್ನು ಕುಡಿಯುತ್ತೇವೆಯೋ ಅದೇ 'ಮಾತೆ' ಎನ್ನಿಸಿಕೊಳ್ಳುತ್ತದೆ. ಅಲ್ಲವೆ? ಅಂದರೆ, ಎಮ್ಮೆ ನಮ್ಮ ತಾಯಿ...."

"ಇಲ್ಲ ಹುಡುಗಾ ನಿನ್ನ ತರ್ಕ ಸರಿ. ಆದರೆ ಭಾವನೆಯ ವಿಚಾರ ಬೇರೆ."

"ಸ್ವಾಮಿಗಳೇ, ಪ್ರತೀ ಚುನಾವಣೆಗೂ ಮೊದಲು ಈ ಗೋಭಕ್ತಿ ಏಕೆ ಪ್ರಬಲವಾಗುತ್ತದೆ? ಈ ಸಾರಿ ಏನಾದರೂ ಹೊಸ ವಿಚಾರವಿದೆಯೇ?"



"ಹುಡುಗಾ, ಚುನಾವಣೆ ಬರುವಾಗ ನಮ್ಮ ಗೋಮಾತೆ ಸ್ವಪ್ನದಲ್ಲಿ ದರ್ಶನ ಕೊಡುತ್ತಾಳೆ. ಹೇಳುತ್ತಾಳೆ- 'ಮಗೂ ಚುನಾವಣೆ ಬರುತ್ತಿದೆ. ಈಗ ನನ್ನ ರಕ್ಷಣೆಯ ಹೋರಾಟ ಮಾಡು. ನನ್ನ ರಕ್ಷಣೆಯ ಹೋರಾಟ ಮಾಡಿ ಓಟು ತೆಗೆದುಕೋ."

"ರಾಜಕೀಯ ಪಕ್ಷಗಳಿಗೆ ದನ ಓಟು ಕೊಡುತ್ತದೆ. ಕೆಲವು ಪಕ್ಷಗಳಿಗೆ ಎತ್ತು ಓಟು ಕೊಡುತ್ತದೆ. ಮುಖಂಡರು ಹೋರಾಟ ಮಾಡಲಿಕ್ಕೆ ಆರಂಭಿಸಿದ ಕೂಡಲೇ ನಮ್ಮನ್ನು ಸೇರಿಸಿಕೊಳ್ಳುತ್ತಾರೆ. ನಮಗೂ ರಾಜಕೀಯ ರುಚಿ ಹತ್ತಿದೆ. ಹುಡುಗಾ, ನೀನು ನನ್ನನ್ನೇ ಕೇಳುತ್ತಿರುವಿ. ಅದು ಸರಿ ನೀನು ಎಲ್ಲಿಗೆ ಹೋಗುತ್ತಿದ್ದಿ?"

"ನಾನು ಮನುಷ್ಯ ರಕ್ಷಣಾ ಆಂದೋಲನಕ್ಕೆ ಹೋಗುತ್ತಿರುವೆ."

"ಇದೇನು ಮಗೂ?"

"ಸ್ವಾಮಿಗಳೇ, ನಾನು ಹೇಗೆ ದನದ ವಿಚಾರದಲ್ಲಿ ಅಜ್ಞಾನಿಯೋ ಹಾಗೆಯೇ ಮನುಷ್ಯನ ವಿಚಾರದಲ್ಲಿ ನೀವು ಅಜ್ಞಾನಿಗಳು."

"ಆದರೆ ಮನುಷ್ಯನನ್ನು ಯಾರು ಕೊಲ್ಲುತ್ತಿದ್ದಾರೆ?"

"ಈ ದೇಶದಲ್ಲಿ ಮನುಷ್ಯನನ್ನು ಹಸಿವೆ ಕೊಲ್ಲುತ್ತಿದೆ. ಕ್ಷಾಮ ಕೊಲ್ಲುತ್ತಿದೆ. ಬೆಲೆಯೇರಿಕೆ ಕೊಲ್ಲುತ್ತಿದೆ. ಲಾಭಕೋರರು ಕೊಲ್ಲುತ್ತಿದ್ದಾರೆ. ಕಾಳಸಂತೆ ಮುಗಿಸುತ್ತಿದೆ. ಭ್ರಷ್ಟ ಶಾಸನವ್ಯವಸ್ಥೆ ಕೊಲ್ಲುತ್ತಿದೆ ಸರಕಾರವೂ ಪೊಲೀಸರ ಗುಂಡುಗಳು ಜನರನ್ನು ಕೊಲ್ಲುತ್ತಿದೆ. ಬಿಹಾರದ ಜನರು ಹಸಿವಿನಿಂದ ಸಾಯುತ್ತಿದ್ದಾರೆ."

"ಬಿಹಾರ್? ಆ ಪೇಟೆ ಎಲ್ಲಿದೆ ಹುಡುಗಾ?"

"ಬಿಹಾರ್ ಒಂದು ಪ್ರದೇಶ - ರಾಜ್ಯ."

"ನಮ್ಮ ಜಂಬೂದ್ವಿಪದಲ್ಲಿಯೇ ಇದೆಯೇ."

"ಸ್ವಾಮಿಗಳೇ- ಇದೇ ದೇಶದಲ್ಲಿ - ಭಾರತದಲ್ಲಿ."

"ಅಂದರೆ ನಮ್ಮ ಆರ್ಯಾವರ್ತದಲ್ಲಿ....?"

"ಖಂಡಿತಾ ಹೌದು. ಹೀಗೆ ತಿಳಿಯಿರಿ. ಸ್ವಾಮಿಗಳೇ' ನೀವೂ ಈ ಮನುಷ್ಯ ಹೋರಾಟದಲ್ಲಿ ಯಾಕೆ ಭಾಗವಹಿಸಬಾರದು?"

"ಮಗೂ, ನಾವು ಧರ್ಮಾತ್ಮರು. ಇದು ನಮ್ಮಿಂದ ಆಗದು. ಒಂದು ವಿಚಾರವೆಂದರೆ ಮನುಷ್ಯರು ನಮ್ಮ ದೃಷ್ಟಿಯಲ್ಲಿ ತುಚ್ಛರು. ಮಂದಿರ ಮತ್ತು ಮಠಗಳ ಸಂಪತ್ತನ್ನು ಸರಕಾರ ವಶಪಡಿಸಿಕೊಳ್ಳಲಿ ಎನ್ನುವವರೂ ಈ ಮನುಷ್ಯರೇ. ಯಾವುದೇ ಜೀವ ಇದ್ದ ಪ್ರಾಣಿ ಈ ಮನುಷ್ಯನಿಗಿಂತ ಶ್ರೇಷ್ಠ. ನೀನು ನೋಡುತ್ತಿಲ್ಲವೆ? 'ಗೋರಕ್ಷಣೆ'ಯ ಮೆರವಣಿಗೆ ಆಗುವಾಗ ಯಾವುದೇ ಗಲಾಟೆ ಆಗಲಿ ಸಾಯುವುದು ಮನುಷ್ಯರೇ. ಇನ್ನೂ ಒಂದು ಮಾತಿದೆ ಹುಡುಗಾ- ನಿನ್ನ ಮಾತಿನಿಂದ ತಿಳಿದು ಬರುವ ಅಂಶವೇನೆಂದರೆ ಮನುಷ್ಯ ರಕ್ಷಣಾ ಹೋರಾಟ ಮಾಡಿದರೆ ಲಾಭಕೋರರು ಮತ್ತು ಕಾಳಸಂತೆಕೋರರೊಂದಿಗೆ ನಮಗೆ ವಿರಸ ಉಂಟಾಗುತ್ತದೆ. ಇದು ನಮ್ಮಿಂದಾಗದು. ನಮ್ಮ ಗೋರಕ್ಷಾ ಹೋರಾಟಕ್ಕೆ ಹಣ ಕೊಡುವವರು ಅವರೆ. ನಮ್ಮ ಬಾಯಿಗಳನ್ನು ಧರ್ಮ ಕಟ್ಟಿ ಹಾಕಿದೆ."

"ಸರಿ ಬಿಡಿ, ಗೋರಕ್ಷಣೆಯ ಬಗ್ಗೆ ನನ್ನ ಜ್ಞಾನವನ್ನು ವೃದ್ಧಿಪಡಿಸಿದಿರಿ. ಒಂದು ಮಾತು ಹೇಳಿ, ನಿಮ್ಮ ಅಂಗಳದಲ್ಲಿ ನೀವು ಗೋಧಿಯನ್ನು ಒಣಗಿಸಲು ಹಾಕಿದ್ದೀರಿ. ಆಗ ಒಂದು ಗೋಮಾತೆ ಬಂದು ನಿಮ್ಮ ಗೋಧಿ ತಿಂದರೆ ಆವಾಗ ನೀವೇನು ಮಾಡುತ್ತೀರಿ?"

"ಹುಡುಗಾ, ದೊಣ್ಣೆ ತೆಗೆದು ಹೊಡೆದು ಓಡಿಸುತ್ತೇನೆ."

"ಆದರೆ ಸ್ವಾಮಿಗಳೇ, ಅದು ಗೋಮಾತೆ ಅಲ್ಲವೆ? ಪೂಜ್ಯವಾದುದು. ಆದ್ದರಿಂದ ಗೋಧಿ ತಿನ್ನಲು ಬಂದ ದನಕ್ಕೆ ನೀವು ಕೈ ಮುಗಿದು ಸ್ವಾಗತಿಸಿ ಬಾ ಅಮ್ಮಾ. ನಾನು ಕೃತಾರ್ಥನಾದೆ. ಎಲ್ಲಾ ಗೋಧಿ ತಿಂದು ಹೋಗು" ಎನ್ನಬೇಕು."

"ಹುಡುಗಾ, ನೀನೇನು ನಮ್ಮನ್ನು ಮೂರ್ಖನೆಂದು ತಿಳಿದಿದ್ದೀಯೋ?"

"ಇಲ್ಲ ನಿಮ್ಮನ್ನು ಗೋಭಕ್ತ ಎಂದು ತಿಳಿದಿದ್ದೆ."

"ಹೌದು, ಅದು ಸರಿ. ಆದರೆ ದನಕ್ಕೆ ಗೋಧಿ ತಿಂದು ಹೋಗಲು ಬಿಡುವಷ್ಟು ನಾವು ಮೂರ್ಖರಲ್ಲ!"

"ಆದರೆ ಸ್ವಾಮಿಗಳೇ, ದನ ಮೂಳೆ ಚಕ್ಕಳವಾಗಿ ಎಲ್ಲೆಂದರಲ್ಲಿ ಕಾಗದ ಬಟ್ಟೆ ತಿನ್ನುತ್ತಾ ತಿರುಗುತ್ತದೆ. ಎಲ್ಲೆಂದರಲ್ಲಿ ಪೆಟ್ಟು ತಿನ್ನುತ್ತದೆ. ಇದೆಂತಹ ಪೂಜೆ?"

"ಹುಡುಗಾ, ಇದೇನೂ ಆಶ್ಚರ್ಯಕರ ವಿಚಾರವಲ್ಲ. ನಾವು ಯಾರನ್ನು ಪೂಜಿಸುತ್ತೇವೋ ಅವರ ಪರಿಸ್ಥಿತಿ ಆಗುವುದೇ ಹಾಗೆ. ಇದೇ ನಿಜವಾದ ಪೂಜೆ. ನಾವು 'ಸ್ತ್ರೀ'ಯನ್ನು ಪೂಜ್ಯಳೆಂದು ಒಪ್ಪಿಕೊಂಡಿದ್ದೇವೆ. ಅವಳ ಪರಿಸ್ಥಿತಿಯೂ ಹಾಗೆಯೆ."

"ಸ್ವಾಮಿಗಳೇ, ಬೇರೆ ದೇಶಗಳಲ್ಲಿ ದನವನ್ನು ಪೂಜೆ ಮಾಡುವುದಿಲ್ಲ. ಅದನ್ನು ಚನ್ನಾಗಿ ಸಾಕುತ್ತಾರೆ. ಅವು ಚಿನ್ನಾಗಿ ಹಾಲನ್ನು ಕೊಡುತ್ತವೆ."

"ಮಗಾ, ಬೇರೆ ದೇಶದ ವಿಚಾರ ಬಿಡು. ನಾವು ಅವರಿಗಿಂತ ಮೇಲು. ಅದರಿಂದಾಗಿನೇ ದೇವರು ನಮ್ಮಲ್ಲಿ ಮಾತ್ರ ಅವತಾರವೆತ್ತುತ್ತಾರೆ. ಬೇರೆ ದೇಶಗಳಲ್ಲಿ ದನವು ಹಾಲಿನ ಉಪಯೋಗಕ್ಕಾಗಿಯೇ ಇರುತ್ತದೆ. ನಮ್ಮಲ್ಲಿ ಅದು ದಂಗೆ ಮಾಡಿಸಲು, ಹೋರಾಟ ಮಾಡಿಸಲು ಇರುತ್ತದೆ. ನಮ್ಮ ದನಗಳು ಉಳಿದ ದನಗಳಿಗಿಂತ ಭಿನ್ನ."

"ಸ್ವಾಮಿಗಳೇ ಎಲ್ಲಾ ಕೆಲಸ ಬಿಟ್ಟು ತಾವು ಇದೊಂದೇ ಕೆಲಸದ ಹಿಂದೆ ಯಾಕಿದ್ದೀರಿ?"

"ಇದರಿಂದಲೇ ಎಲ್ಲಾ ಆಗುತ್ತದೆ. ಇಲ್ಲಿ ಗೋರಕ್ಷಣೆಯ ಕಾನೂನು ಜಾರಿಯಾದರೆ ಎಲ್ಲವೂ ಸಮೃದ್ಧಿಯಾಗುತ್ತದೆ. ಕಾಲಕಾಲಕ್ಕೆ ಮಳೆಯಾಗುತ್ತದೆ. ಭೂಮಿಯಲ್ಲಿ ಒಳ್ಳೆಯ ಬೆಳೆಯಾಗುತ್ತದೆ. ಕಾರ್ಖಾನೆಗಳು ನಡೆಯದಿದ್ದರೂ ಒಳ್ಳೆಯ ಉತ್ಪಾದನೆಯಾಗುತ್ತದೆ. ಧರ್ಮದ ಪ್ರತಾಪ ನಿನಗೆ ತಿಳಿದಿಲ್ಲ. ಈ ದೇಶದ ದುರ್ದೆಸೆಗೆ ಕಾರಣವೇ ಗೋಮಾತೆಗಾದ ಅನಾದರ."

"ಪಶ್ಚಿಮದ ದೇಶಗಳು ದನದ ಪೂಜೆ ಮಾಡುವುದಿಲ್ಲ. ಆದರೂ ಅವು ಸಮೃದ್ಧವಾಗಿವೆ."

"ಅವರ ದೇವರು ಬೇರೆ ಹುಡುಗಾ, ಇದನ್ನೆಲ್ಲ ಆ ದೇವರು ಅಂದಾಜ್ ಮಾಡುವುದಿಲ್ಲ."

"ಕಮ್ಯೂನಿಸ್ಟ್ ರಷ್ಯಾದಲ್ಲಿಯೂ ದನದ ಪೂಜೆ ಇಲ್ಲ ಆದರೂ ಅದು ಸಮೃದ್ಧವಾಗಿದೆ."

"ಅವರಿಗಂತೂ ದೇವರೇ ಇಲ್ಲ. ಆದ್ದರಿಂದ ಅವರಿಗೆ ದೋಷವೇ ತಟ್ಟುವುದಿಲ್ಲ."

"ಅಂದರೆ ದೇವರನ್ನು ಇಟ್ಟುಕೊಳ್ಳುವುದೂ ಒಂದು ದೊಡ್ಡ ತೊಂದರೆಯೇ. ಅವನು ಪ್ರತಿಯೊಂದು ವಿಚಾರಕ್ಕೂ ದಂಡನೆ ಕೊಡುತ್ತಾ ಇರುತ್ತಾನೆ."

"ತರ್ಕ ಸರಿ ಮಗೂ, ಆದರೆ ಭಾವನೆ ತಪ್ಪು."

"ಸ್ವಾಮಿಗಳೇ ನನಗೆ ತಿಳಿದ ತರ್ಕದ ಪ್ರಕಾರ ಈಗ ಜನತೆಯ ಮನಸ್ಸಿನಲ್ಲಿ ಗೋರಕ್ಷಣೆಯ ಪ್ರಶ್ನೆಯಿಲ್ಲ. ಬೆಲೆಯೇರಿಕೆ ಮತ್ತು ಆರ್ಥಿಕ ಶೋಷಣೆ ಅವರನ್ನು ಕೊಲ್ಲುತ್ತಿದೆ. ಜನರು ಬೆಲೆಯೇರಿಕೆ ವಿರುದ್ಧ ಹೋರಾಟ ಮಾಡುತ್ತಿದ್ದಾರೆ. ಅವರು ವೇತನ ಮತ್ತು ತುಟ್ಟಿಭತ್ಯೆ ಏರಿಸುವ ಬಗ್ಗೆ ಹೋರಾಟ ಮಾಡುತ್ತಿದ್ದಾರೆ. ಇಲ್ಲಿ ನೀವು 'ಗೋರಕ್ಷಾ ಆಂದೋಲನ' ಹಿಡಿದುಕೊಂಡು ಕುಳಿತಿದ್ದೀರಿ. ಇದರಲ್ಲಿ ಯಾವ ಸಾಂಗತ್ಯ ಇದೆ?"

"ಹುಡುಗಾ, ಇದರಲ್ಲಿ ಸಾಂಗತ್ಯ ಸಮಾನತೆ ಎಲ್ಲಾ ಇದೆ. ನೋಡು, ಜನರು ಆರ್ಥಿಕ ವಿಷಯದ ಬಗ್ಗೆ ಹೋರಾಟ ನಡೆಸುತ್ತಿದ್ದಾಗ ಅವರನ್ನು ಗೊಂದಲದಲ್ಲಿ ಕೆಡವಬೇಕು. ಇಲ್ಲದಿದ್ದರೆ ಗಂಡಾಂತರವಾಗುತ್ತದೆ. ಜನತೆ ಹೇಳುತ್ತದೆ- "ನಮ್ಮ ಬೇಡಿಕೆ ಈಡೇರಿಸಿ, ಬೆಲೆ ಏರಿಕೆ ನಿಲ್ಲಿಸಿ. ಲಾಭಕೋರತನ ನಿಲ್ಲಿಸಿ, ಸಂಬಳ ಹೆಚ್ಚಾಗಲಿ." ಆವಾಗ ನಾವು ಅವರೊಡನೆ ಎನ್ನುತ್ತೇವೆ- 'ನಮ್ಮ

ಪುಟ 10 ನೋಡಿ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್

ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.

ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y. GURUSHANTH